24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 121 | ನವದೆಹಲಿ | ಬೆಲೆ ₹10 | ಅಕ್ಟೋಬರ್, 27, 2026, ಮಂಗಳವಾರ

## ಒಳಪುಟಗಳಲ್ಲಿ

ಟೈಗರ್ ಶ್ರಾಫ್ ಮೇಲೆ ಗುಂಡಿನ ದಾಳಿ ಪ್ರಕರಣ: ನಾಲ್ವರು ಆರೋಪಿಗಳ ಪೊಲೀಸ್ ಕಸ್ಟಡಿ ನಾಳೆಯವರೆಗೆ ವಿಸ್ತರಣೆ - ಪು.4

ಗೃಹಜ್ಯೋತಿ ಫಲಾನುಭವಿಗಳ ಮನೆ ಸಮೀಕ್ಷೆಗೆ ಅ.31 ಕೊನೇ ದಿನ, ಗಡುವು ವಿಸ್ತರಣೆಯಿಲ್ಲ - ಪು.5

ಬೆಳವಿಮೆ ಹಣ ಬಿಡುಗಡೆಗೆ ಆಗ್ರಹ: ಟೋಲ್‌ನಾಕಾ ಬಂದ್ ಮಾಡಿ ರೈತರಿಂದ ಪ್ರತಿಭಟನೆ - ಪು.6

# ಕಬ್ಬು ಬೆಳೆಗಾರರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ನಿರ್ಧಾರ

### ಆತುರದ ತೀರ್ಮಾನ ಮಾಡುವುದಿಲ್ಲ, ಕೇಂದ್ರ ಸಮಿತಿ ಎದುರು ಮಾತನಾಡುವೆ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ



**ಬೆಳಗಾವಿ, ಅ.25: ರೈತರಿಗೆ ಶಾಶ್ವತ ಪರಿಹಾರ ಸಿಗುವಂತೆ ಮಾಡುವುದು ನನ್ನ ಅಚಲ ನಿರ್ಧಾರ" ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಸ್ಪಷ್ಟಪಡಿಸಿದರು.**

ಬೆಳಗಾವಿಯ ಸುವರ್ಣ ಸೌಧದಲ್ಲಿ ಶಿವಕುಮಾರ್ ಅವರು ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಉದ್ದೇಶದಿಂದ ಸೋಮವಾರ ಇಡೀ ದಿನ ಸಭೆ ನಡೆಸಿದರು.

ಮೊದಲು ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಪ್ರತ್ಯೇಕವಾಗಿ ಹಾಗೂ ಕಬ್ಬು ಬೆಳೆಗಾರರೊಂದಿಗೆ ಪ್ರತ್ಯೇಕವಾಗಿ, ಆನಂತರ ಇಬ್ಬರನ್ನು (ಕಾರ್ಖಾನೆ ಮಾಲೀಕರು ಹಾಗೂ ರೈತರು) ಸೇರಿಸಿ ಸಭೆ ನಡೆಸಿದರು. ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಜತೆ ಚರ್ಚೆ ಮಾಡಿದ್ದೇವೆ. ನಾವು ಕೇಂದ್ರ ವಿಶ್ವಾಸಕ್ಕೆ ತೆಗೆದುಕೊಳ್ಳದೆ ತೀರ್ಮಾನ ಮಾಡಲು ಸಾಧ್ಯವಿಲ್ಲ. ಸಕ್ಕರೆ ಎಂಎಸ್ಪಿ ಏರಿಕೆ ಆಗದೆ ಸಕ್ಕರೆ ಮಾಲೀಕರು ಒಪ್ಪುವುದಿಲ್ಲ. ರೈತರು ಕಬ್ಬು ಅರೆಯಲು ಅವಕಾಶ ಮಾಡಿಕೊಡಬೇಕು. ಇಲ್ಲವಾದರೆ ರೈತರಿಗೆ ತೊಂದರೆ ಆಗುತ್ತದೆ" ಎಂದರು.

29ರಂದು ಕೇಂದ್ರ ಸರ್ಕಾರ ರಚಿಸಿರುವ ಸಮಿತಿ ರಾಜ್ಯಕ್ಕೆ ಆಗಮಿಸುತ್ತಿದ್ದು, ಒಂದೇ ದಿನದಲ್ಲಿ ನಾನು ಆತುರದ ತೀರ್ಮಾನ ಮಾಡುವುದಿಲ್ಲ. ಮತ್ತೊಮ್ಮೆ ಸಕ್ಕರೆ ಕಾರ್ಖಾನೆ ಮಾಲೀಕರು, ಅಧಿಕಾರಿಗಳು, ಕೇಂದ್ರ ಸರ್ಕಾರ ಹಾಗೂ ಸಮಿತಿ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ಇದಕ್ಕೆ ಸಹಕಾರ ನೀಡಿ ಎಂದು ನಾನು ರೈತರಿಗೆ ಮನವಿ ಮಾಡಿದ್ದೇನೆ. ಸರ್ಕಾರವೇ ರೈತರ ಪರವಾಗಿರುವಾಗ ಪ್ರತಿಭಟನೆ ಯಾಕೆ ಎಂದರು.

ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ಪ್ರಧಾನಮಂತ್ರಿಗೆ ಪತ್ರ ಬರೆದಿದ್ದೇನೆ, ಕೇಂದ್ರ ಸಚಿವರ ಜತೆಗೂ ಚರ್ಚಿಸುವೆ. ಮಹಾರಾಷ್ಟ್ರ ಸಿಎಂ ಅವರನ್ನು ಭೇಟಿ ಮಾಡುವೆ. ನಮ್ಮ ರಾಜ್ಯದವರೆಲ್ಲ ಸೇರಿ ಒಟ್ಟಾಗಿ ತೀರ್ಮಾನ ಮಾಡಬೇಕಿದೆ ಎಂದರು.

**ಕಬ್ಬು ಅರೆಯಲು ಅವಕಾಶ ನೀಡಲು ರೈತರಿಗೆ ಮನವಿ:** ಕಬ್ಬು ಅರೆಯುವ ವಿಚಾರವಾಗಿ ರೈತರಿಗೆ ಮನವಿ ಮಾಡುತ್ತೇನೆ. ಕಬ್ಬು ಅರೆಯುವುದು ಆರಂಭವಾಗಲಿ. ಈಗಾಗಲೇ ಮಹಾರಾಷ್ಟ್ರದಲ್ಲಿ ಕಬ್ಬು ಅರೆಯುವುದು ಆರಂಭವಾಗಿದೆ. ನಮ್ಮ ಕಬ್ಬು ಬೆಳೆ ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಅವಕಾಶ ನೀಡುವುದು ಬೇಡ. ಇದರಿಂದ ರೈತರು ಹಾಗೂ ಸರ್ಕಾರಕ್ಕೆ ತೊಂದರೆಯಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

**ಕೇಂದ್ರ ಸಮಿತಿ ಮುಂದೆ ಕಬ್ಬು ಬೆಳೆಗಾರರ ಪರವಾಗಿ ಮಾತನಾಡುವೆ:** ಇದಕ್ಕೂ ಮುನ್ನ ಕಬ್ಬು ಬೆಳೆಗಾರರ ಜತೆಗಿನ ಸಭೆಯಲ್ಲಿ ಮಾತನಾಡಿದ ಸಿಎಂ, ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು ನಾವು ಮಹಾರಾಷ್ಟ್ರ ಸಿಎಂ ಜೊತೆ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಈ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದ ಸಮಿತಿ ರಾಜ್ಯಕ್ಕೆ ಬಂದಾಗ ಅದರ ಮುಂದೆ ನಾನು ಬರುತ್ತೇನೆ, ಕಬ್ಬು ಬೆಳೆಗಾರರ ಪರವಾಗಿ ನಾನು ಮಾತನಾಡುತ್ತೇನೆ" ಎಂದು ಭರವಸೆ ನೀಡಿದರು.

**ರೈತರು ಸರ್ಕಾರದ ಪರಿಸ್ಥಿತಿ ಅರಿಯಬೇಕು:** ಸಕ್ಕರೆ ಎಂಎಸ್‌ಪಿ ಹೆಚ್ಚಾಗುವವರೆಗೂ ನಾವು ಯಾವುದೇ ಪರಿಹಾರ ನೀಡಲು ಸಾಧ್ಯವಿಲ್ಲ. ಇದು ಆತುರ, ಆವೇಶದಲ್ಲಿ ನಿರ್ಧಾರ ತೆಗೆದುಕೊಳ್ಳುವ ವಿಚಾರ ಅಲ್ಲ. ನಿಮ್ಮ ಧ್ವನಿ ನನ್ನ ಧ್ವನಿಯಾಗುತ್ತದೆ. ನಾನು ನಿಮ್ಮ ಪರವಾಗಿದ್ದೇನೆ. ನೀವು ನನ್ನ ಹಾಗೂ ಸರ್ಕಾರದ ಪರಿಸ್ಥಿತಿ ಅರಿಯಬೇಕು. ನಾವು ನಿಮ್ಮ ಪರವಾಗಿ ವಾದ ಮಾಡಲು ಸಿದ್ಧವಿದ್ದೇವೆ ಎಂದು ಧೈರ್ಯ ತುಂಬಿದರು. ಇಂದಿನ ಸಭೆಯಲ್ಲಿ ಕಬ್ಬಿನ ತೂಕ, ಕಬ್ಬು ಸಾಗಾಣೆ ಸೇರಿದಂತೆ ರೈತರ ಎಲ್ಲಾ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ರೈತರು ನಮ್ಮ ಆರ್ಥಿಕ ಪರಿಸ್ಥಿತಿ ಅರಿಯಬೇಕು. ನಾವು ಕಾರ್ಖಾನೆ ಹಾಗೂ ಕೇಂದ್ರ ಸರ್ಕಾರ ಒಪ್ಪಿಸಿ ಪರಿಹಾರ ನೀಡಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ವಿವರಿಸಿದರು.

ರೈತರ ಬದುಕಿನ ಬಗ್ಗೆ ನನಗೆ ಅರಿವಿದೆ. ನಿಮಗೆ ಸಹಾಯ ಮಾಡಬೇಕು ಎಂದು ಜನಪ್ರತಿನಿಧಿಗಳು ಬಂದಿದ್ದಾರೆ. ಕಬ್ಬು ಇಳುವರಿ ಹಾಗೂ ಸಕ್ಕರೆ ಉತ್ಪಾದನೆ ಕುಸಿದಿದೆ. ಎಥನಾಲ್ ಉತ್ಪಾದನೆಗೆ ಕಬ್ಬು ಬಳಸಬಾರದು ಎಂದು ಕೇಂದ್ರ ಸರ್ಕಾರ ಹೇಳಿದೆ. ಇತ್ತ ಸಕ್ಕರೆ ಎಂಎಸ್ ಪಿ ಏರಿಕೆ ಆದರೆ ನಾವು ನೀಡುತ್ತೇವೆ ಎಂದು ಕಾರ್ಖಾನೆ ಮಾಲೀಕರು ಹೇಳಿದ್ದಾರೆ. ಸರ್ಕಾರದ ಹಣಕಾಸಿನ ಪರಿಸ್ಥಿತಿ ನೋಡಿ ಬೇಡಿಕೆ ಇಡಬೇಕು. ಇಂದೇ ಸಿಹಿಸುದ್ದಿ ನೀಡಿ ಎಂದರೆ ಎಲ್ಲಿಂದ ಹಣ ನೀಡೋಣ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

### ರಾಜಕ್ಕಿಂತಲೂ ಕೇಂದ್ರದ ಮೇಲೆ ಹೆಚ್ಚಿನ ಹೊಣೆಗಾರಿಕೆ

ಕಬ್ಬು ಬೆಳೆಗಾರರ ಬೇಡಿಕೆಗಳ ವಿಚಾರವಾಗಿ ರಾಜ್ಯಕ್ಕಿಂತಲೂ, ಕೇಂದ್ರ ಸರ್ಕಾರದ ಮೇಲಿನ ಹೊಣೆಗಾರಿಕೆ ಹೆಚ್ಚಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಬೆಳಗಾವಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸುವ ವೇಳೆ ಕಿತ್ತೂರಿನಲ್ಲಿ ಅವರ ಜೊತೆ ಚರ್ಚೆ ಮಾಡಿ ಅಭಿಪ್ರಾಯ ಆಲಿಸಿದ್ದೇನೆ. ಇಂದು ಬೆಳಗ್ಗೆ ಹಲವಾರು ಶಾಸಕರು ತಮ್ಮ ಮೇಲಿರುವ ಒತ್ತಡಗಳನ್ನು ಹೇಳಿಕೊಂಡಿದ್ದಾರೆ. ಶಾಸಕರು, ರೈತರ ಮತದಾರರ ಪ್ರತಿನಿಧಿಗಳು ಸರ್ಕಾರದ ಧ್ವನಿ. ಮೈಸೂರು, ಮಧ್ಯ ಕರ್ನಾಟಕ, ಬೆಳಗಾವಿ, ರಾಯಚೂರು, ಹುಬ್ಬಳ್ಳಿ, ಧಾರವಾಡ ಸೇರಿದಂತೆ ವಿವಿಧ ಕಡೆಗಳಲ್ಲಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗುವುದು. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ರಾಜ್ಯದ ಪಾಲು ಶೇ.10ರಷ್ಟು ಇದ್ದರೆ, ಕೇಂದ್ರದ ಪಾಲು ಶೇ.90ರಷ್ಟು ಎಂದು ಹೇಳಿದರು. ಈ ಹಿಂದೆ ಸಕ್ಕರೆ ಕಾರ್ಖಾನೆಯವರು ಒಪ್ಪದೇ ಇದ್ದರೂ, ಪ್ರತಿ ಟನ್‌ಗೆ 250 ರೂ.ಗಳನ್ನು ಹೆಚ್ಚುವರಿಯಾಗಿ ನೀಡುವಂತೆ ಸರ್ಕಾರ ಆದೇಶಿಸಿತ್ತು. ರಾಜ್ಯ ಸರ್ಕಾರವೂ ಕೂಡ 50 ರೂ. ನೀಡಿತ್ತು. ಬಹಳಷ್ಟು ಕಾರ್ಖಾನೆಗಳು ಸರ್ಕಾರದ ಸೂಚನೆಯಂತೆ 250 ರೂ.ಗಳನ್ನು ನೀಡಿಲ್ಲ. ಅದು ಕೂಡ ತಮ ಗಮನದಲ್ಲಿದೆ. ಕೇಂದ್ರ ಸರ್ಕಾರ, ರಾಜ್ಯದಲ್ಲಿ ಉತ್ಪಾದನೆಯಾಗುವ ಎಥೆನಾಲ್ ಅನ್ನು ಸಂಪೂರ್ಣವಾಗಿ ಖರೀದಿಸಬೇಕು ಎಂಬುದು ನಮ್ಮ ಆಗ್ರಹವಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



### ಸಿಎಂ ಸಭೆಯಲ್ಲಿ ಭಾಗವಹಿಸಿದ್ದ ಗಣ್ಯರು

ಎಂ ಡಿ ಕೆ ಶಿವಕುಮಾರ್ ಅವರು ಬೆಳಗಾವಿಯ ಸುವರ್ಣಸೌಧದಲ್ಲಿ ಕಬ್ಬು ಬೆಳೆಗಾರರ ಜೊತೆ ಸೋಮವಾರ ಸಭೆ ನಡೆಸಿದರು. ಸಚಿವ ಸತೀಶ್ ಜಾರಕಿಹೊಳಿ, ಲಕ್ಷ್ಮಣ್ ಸವದಿ, ಚಲುವರಾಯಸ್ವಾಮಿ, ಎಂ ಬಿ ಪಾಟೀಲ್, ಸಂತೋಷ್ ಲಾಡ್, ರುದ್ರಪ್ಪ ಲಮಾಣಿ, ಎಸ್ ಎಸ್ ಮಲ್ಲಿಕಾರ್ಜುನ್, ವಿಜಯಾನಂದ್ ಕಾಶಪ್ಪನವರ್, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ್, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಶಾಸಕರಾದ ಎಚ್.ಕೆ.ಪಾಟೀಲ್, ಆರ್.ಬಿ.ತಿಮ್ಮಾಪುರ, ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಸುನಂದಾ ಜಯರಾಮ್, ಚೂನಪ್ಪ ಪೂಜಾರಿ, ಕುರುಬೂರು ಶಾಂತಕುಮಾರ್, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಚುಕ್ಕಿ ನಂಜುಂಡಸ್ವಾಮಿ, ಮಾಜಿ ಸಭಾಪತಿ ಬಸವರಾಜ ಹೊರಟ್ಟಿ, ಪ್ರಭಾಕರ ಕೋರೆ, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ತುಷಾರ್ ಗಿರಿನಾಥ್, ಗೌರವ್ ಗುಪ್ತಾ, ರಿತೇಶ್ ಕುಮಾರ್ ಸಿಂಗ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಕಬ್ಬು ಬೆಳೆಯುವ ಜಿಲ್ಲೆಗಳ ಜನಪ್ರತಿನಿಧಿಗಳು, ಕಾರ್ಖಾನೆಗಳ ಮಾಲೀಕರು, ಸರ್ಕಾರದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಧಾನ ಪರಿಷತ್ ಚುನಾವಣೆ
# ಇಂದು ಮತ ಎಣಿಕೆ

**ಬೆಂಗಳೂರು, ಅ.26:** ವಿಧಾನ ಪರಿಷತ್‌ಗೆ ನಡೆದ ಬೆಂಗಳೂರು ಶಿಕ್ಷಕರ, ಈಶಾನ್ಯ ಶಿಕ್ಷಕರ ಕ್ಷೇತ್ರ, ಪಶ್ಚಿಮ ಪದವೀಧರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ಚುನಾವಣೆಯ ಮತ ಎಣಿಕೆ ಮಂಗಳವಾರ ನಡೆಯಲಿದೆ. ಸಂಜೆ ವೇಳೆಗೆ ಮತ ಎಣಿಕೆ ಪೂರ್ಣಗೊಂಡು ಫಲಿತಾಂಶ ಪ್ರಕಟಗೊಳ್ಳುವ ಸಾಧ್ಯತೆಗಳಿವೆ.

ಈ ನಾಲ್ಕು ಕ್ಷೇತ್ರಗಳಲ್ಲಿ ಒಟ್ಟು 43 ಅಭ್ಯರ್ಥಿಗಳು ಕಣದಲ್ಲಿದ್ದರು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಹಾಗೂ ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು. ಶಿಕ್ಷಕರು ಹಾಗೂ ಪದವೀಧರ ಮತದಾರರು ಅಭ್ಯರ್ಥಿಗಳ ಭವಿಷ್ಯವನ್ನು ಈಗಾಗಲೇ ಮತಪತ್ರದಲ್ಲಿ ಬರೆದಿದ್ದಾರೆ. ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾದರೂ ಸಂಜೆ ವೇಳೆಗೆ ಚುನಾವಣಾ ಫಲಿತಾಂಶವನ್ನು ನಿರೀಕ್ಷಿಸಬಹುದು.

ಬೆಂಗಳೂರು ಶಿಕ್ಷಕರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ಮತ ಎಣಿಕೆ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆಯಲಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಶೇ.81.98, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಶೇ.86.97, ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಶೇ.75.62 ಹಾಗೂ ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಶೇ.73.58ರಷ್ಟು ಮತದಾನವಾಗಿದೆ ಎಂದು ರಾಜ್ಯ ಮುಖ್ಯ ಚುನಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಾಜಿ ಉಪ ಸಭಾಪತಿ ಪುಟ್ಟಣ್ಣ, ಜೆಡಿಎಸ್‌ನಿಂದ ಎ.ಪಿ.ರಂಗನಾಥ ಸೇರಿದಂತೆ ಆರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು.ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶರಣಪ್ಪ ಮಟ್ಟೂರು, ಬಿಜೆಪಿಯಿಂದ ಶಶೀಲ್ ಜಿ.ನಮೋಶಿ ಸೇರಿದಂತೆ ಒಟ್ಟು 13 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಶಿ ಹುಲಿಕುಂಟೆಮಠ್, ಬಿಜೆಪಿಯಿಂದ ಕೆ.ಎಂ.ಸುರೇಶ ಅವರು ಸೇರಿದಂತೆ 10 ಅಭ್ಯರ್ಥಿಗಳು ಹಾಗೂ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮೋಹನ ಲಿಂಬಿಕಾಯಿ, ಬಿಜೆಪಿಯಿಂದ ಸಂಕನೂರ ಎಸ್.ವಿ. ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು.ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಸಂಕನೂರ ಎಸ್.ವಿ., ಶಶೀಲ್ ಜಿ.ನಮೋಶಿ, ಪುಟ್ಟಣ್ಣ ಅವರು ನವೆಂಬರ್ 11ರಂದು ವಿಧಾನ ಪರಿಷತ್ ಸದಸ್ಯ ಸ್ಥಾನದಿಂದ ನಿವೃತ್ತಿಯಾಗಲಿದ್ದು, ನಿವೃತ್ತಿಯಿಂದ ತೆರವಾಗುವ ಸ್ಥಾನಗಳಿಗೆ ಚುನಾವಣಾ ಆಯೋಗ ಚುನಾವಣೆ ನಡೆಸುತ್ತಿದೆ. ಅಕ್ಟೋಬರ್ 31ರೊಳಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದ್ದು, ಚುನಾವಣಾ ನೀತಿಸಂಹಿತೆ ಅಂತ್ಯಗೊಳ್ಳಲಿದೆ.



ಸಿಎಂ ಡಿ.ಕೆ.ಶಿವಕುಮಾರ್ ಅವರು ಬೆಳಗಾವಿಯ ಸರ್ಕಿಟ್ ಹೌಸ್ ಬಳಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿದರು. ಸಚಿವರಾದ ಸತೀಶ್ ಜಾರಕಿಹೊಳಿ, ಎಸ್.ಎಸ್. ಮಲ್ಲಿಕಾರ್ಜುನ, ವಿಧಾನಸಭೆ ಆಡಳಿತ ಪಕ್ಷದ ಮುಖ್ಯಸಚೇತಕ ಅಶೋಕ್ ಪಟ್ಟಣ್, ಶಾಸಕರಾದ ಲಕ್ಷ್ಮಿ ಹೆಬ್ಬಾಳ್ಕರ್, ಆಸೀಫ್ ರಾಜು ಸೇಠ್, ಸಿ.ಎಸ್.ನಾಡಗೌಡ, ಮಹಾಂತೇಶ್ ಕೌಜಲಗಿ, ಎಂಎಲ್ ಸಿ ಚನ್ನರಾಜ ಹಟ್ಟಿಹೊಳಿ ಮತ್ತಿತರರು ಇದ್ದರು.

# ಖರ್ಗೆ ಹೇಳಿಕೆಗೆ ಸೋಮಣ್ಣ ತೀವ್ರ ಆಕ್ಷೇಪ ಬೇಷರತ್ ಕ್ಷಮೆಯಾಚನೆಗೆ ಆಗ್ರಹ



**ನವದೆಹಲಿ, ಅ.26:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ತಂದೆಯ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಹೇಳಿಕೆಗೆ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಖರ್ಗೆ ಅವರು ತಮ್ಮ ಹೇಳಿಕೆಯನ್ನು ಕೂಡಲೇ ಹಿಂಪಡೆದು ಬೇಷರತ್ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ದೆಹಲಿಯಲ್ಲಿ ಪ್ರತಿಕ್ರಿಯಿಸಿದ ಸೋಮಣ್ಣ, ಖರ್ಗೆ ಹಿರಿಯರಿದ್ದಾರೆ. ಆದರೆ, ಇತ್ತೀಚಿನ ಅವರ ಹೇಳಿಕೆಗಳು ಮತ್ತು ಸಂದೇಶಗಳಿಂದ ಅವರ ಮೇಲಿದ್ದ ಗೌರವ ಕಡಿಮೆಯಾಗುತ್ತಿದೆ. ಜನರ ನಂಬಿಕೆಯನ್ನೂ ಕಳೆದುಕೊಳ್ಳುತ್ತಿದ್ದಾರೆ. ಅವರ ಭಾಷೆ ಮತ್ತು ನಡವಳಿಕೆ ಅವರ ಘನತೆಗೆ ತಕ್ಕುದಲ್ಲ. ಸಾಂವಿಧಾನಿಕ ಹುದ್ದೆಯಲ್ಲಿರುವವರು ಮಾತನಾಡುವಾಗ ಜವಾಬ್ದಾರಿಯಿಂದ ವರ್ತಿಸಬೇಕು. ಹೆತ್ತವರನ್ನು ಯಾವುದೇ ಕಾರಣಕ್ಕೂ ನಿಂದಿಸಬಾರದು. ಪ್ರಧಾನಿ ಮೋದಿ ಅವರು ಸಾರ್ವಜನಿಕ ಜೀವನದಲ್ಲಿ ತೆರೆದ ಪುಸ್ತಕದಂತಿದ್ದಾರೆ. ಹೀಗಿರುವಾಗ ಅವರ ಕುಟುಂಬದ ಬಗ್ಗೆ ಇಂತಹ ಹೇಳಿಕೆ ನೀಡುವ ಅಗತ್ಯವೇನಿದೆ ಎಂದು ಪ್ರಶ್ನಿಸಿದರು. ಮೋದಿಯವರನ್ನು ನಿಂದಿಸುವುದು ಇದೇ ಮೊದಲಲ್ಲ; ಖರ್ಗೆ ಅವರೇ ಇಂತಹ ಹೇಳಿಕೆ ನೀಡಿದರೆ, ಪಕ್ಷದ ಕಾರ್ಯಕರ್ತರಿಂದ ಯಾವ ರೀತಿಯ ನಡವಳಿಕೆಯನ್ನು ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸಿದ ಸೋಮಣ್ಣ, ಖರ್ಗೆ ತಮ್ಮ ಹೇಳಿಕೆಯನ್ನು ಹಿಂಪಡೆದು ಬೇಷರತ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

**ಅ.30ರಂದು ಪಿಎಂ ಕಿಸಾನ್ 24ನೇ ಕಂತು ಬಿಡುಗಡೆ:** ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 24ನೇ ಕಂತು ಅಕ್ಟೋಬರ್ 30ರಂದು ಬಿಡುಗಡೆಯಾಗಲಿದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಈ ಸಂಬಂಧ ಕರ್ನಾಟಕದಲ್ಲಿಯೂ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ತಾವು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಹೇಳಿದರು. ಇದೇ ದಿನ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ಭಾಗಗಳಲ್ಲಿ ಡಿ–ಫ್ಲೋರೈಡೇಶನ್ ಘಟಕಗಳ ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಲಾಗುವುದು ಎಂದು ತಿಳಿಸಿದರು.

# ರಾಹುಲ್ ಸಹವಾಸದಿಂದ ಖರ್ಗೆಯೂ ಅಪ್ರಬುದ್ಧ ನಾಯಕರೇ!

**ನವದೆಹಲಿ, ಅ.26:** ಕಾಂಗ್ರೆಸ್ ಪಕ್ಷದಲ್ಲಿ ರಾಹುಲ್ ಗಾಂಧಿ ಒಬ್ಬರೇ ಅಪ್ರಬುದ್ಧ ನಾಯಕ ಎಂದು ಭಾವಿಸಿದ್ದೆವು. ಆದರೆ, ಅವರ ಸಹವಾಸದಿಂದ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಬಹುತೇಕ ಎಲ್ಲರೂ ಅಪ್ರಬುದ್ಧರೇ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದ್ದಾರೆ.

ದೆಹಲಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಅಪಕ್ವವಾಗಿಬಿಟ್ಟಿದ್ದಾರೆ. ಹತಾಶ ಮನೋಭಾವದಿಂದ ಅರಿವೇ ಇಲ್ಲದಂತೆ ಏನೇನೆಲ್ಲಾ ಮಾತನಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಮಾತೋಶ್ರೀ ಬಗ್ಗೆ ಆಯಿತು ಈಗ ಅವರ ದಿವಂಗತ ತಂದೆಯನ್ನೂ ರಾಜಕೀಯ ವಿಷಯವಾಗಿ ಎಳೆದು ತರುತ್ತಿದ್ದಾರೆ ಈ ಕಾಂಗ್ರೆಸ್ಸಿಗರು ಎಂದು ಜೋಶಿ ತೀವ್ರವಾಗಿ ಖಂಡಿಸಿದರು.

ಪ್ರಧಾನಿ ಮೋದಿ ಅವರ ಪೋಷಕರು ಅತ್ಯಂತ ಬಡ ಕುಟುಂಬದಿಂದ ಬಂದವರು ಅಲ್ಲದೆ, ಪ್ರಸ್ತುತ ನಮ್ಮ ನಡುವೆ ಇಲ್ಲದಾಗಿದ್ದರೆ. ಹೀಗಿರುವಾಗ ಮೃತ ಪೋಷಕರನ್ನು ಹೆಸರಿಸಿ ಸಲ್ಲದ ಹೇಳಿಕೆ ನೀಡುವುದು ಕಾಂಗ್ರೆಸ್ ನಾಯಕರ ರಾಜಕೀಯ ಅಪ್ರಬುದ್ಧತೆಯನ್ನು ತೋರಿಸುತ್ತದೆ ಎಂದು ವಾಗ್ದಾಳಿ ನಡೆಸಿದರು.

### ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಗ್ದಾಳಿ



- ಮೋದಿ ಅವರ ದಿವಂಗತ ಪೋಷಕರನ್ನು ಹೆಸರಿಸಿ ಟೀಕಿಸಿದ ಖರ್ಗೆ ಹೇಳಿಕೆಗೆ ತೀವ್ರ ಖಂಡನೆ
- ಕಾಂಗ್ರೆಸ್ ನಾಯಕರೆಲ್ಲ ಅಪಕ್ವವಾಗಿಬಿಟ್ಟಿದ್ದಾರೆ
- ಹತಾಶರಾಗಿ ಅಸಭ್ಯ ಭಾಷೆ ಬಳಸುತ್ತಿದ್ದಾರೆ; ಜನ ಇನ್ನೂ ದೂರ ತಳ್ಳುತ್ತಾರೆ ಹುಷಾರು

ರಾಹುಲ್ ಗಾಂಧಿ ಸಹವಾಸದಿಂದಾಗಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಿಂದ ಹಿಡಿದು ರಾಜ್ಯದ ಅಧ್ಯಕ್ಷರಾದಿಯಾಗಿ ಎಲ್ಲರೂ ಒಂದು ರೀತಿ ಕೆಳಮಟ್ಟದ ಭಾಷೆ ಪ್ರಯೋಗಿಸುತ್ತಿದ್ದಾರೆ. ಇದು ಇವರ ಸಂಸ್ಕೃತಿ ಮತ್ತು ಹತಾಶೆಯನ್ನು ಪ್ರದರ್ಶಿಸುತ್ತಿದೆ ಎಂದು ಕುಟುಕಿದರು.

ಈ ಹಿಂದೆ ಸೋನಿಯಾ ಗಾಂಧಿ ಹೀಗೆ ಮಾಡುತ್ತಿದ್ದರು, ಈಗ ರಾಹುಲ್ ಗಾಂಧಿ ಅದನ್ನೇ ಮುಂದುವರಿಸಿದ್ದಾರೆ. ಅವರು ಚುನಾವಣೆಗಳಲ್ಲಿ ಗೆಲ್ಲಲು ಬಯಸುವುದಾದರೆ ಮೊದಲು ಇಂತಹ ಅಸಭ್ಯ, ಕೀಳು ಮಟ್ಟದ ಭಾಷೆ ಬಿಡಬೇಕು. ಕನಿಷ್ಠ ಮತದ ಭಾಷೆ ಎಂದಿಗೂ ಯಶಸ್ಸು ತರುವುದಿಲ್ಲ ಎಂಬುದನ್ನು ಅರಿತುಕೊಳ್ಳಲಿ ಎಂದು ಕಾಂಗ್ರೆಸ್ ನಾಯಕರಿಗೆ ಚಾಟಿ ಬೀಸಿದರು ಜೋಶಿ.

ದೇಶದೆಲ್ಲೆಡೆ ಕಾಂಗ್ರೆಸ್ ಪಕ್ಷ ಅದಾಗಲೇ ಸಂಪೂರ್ಣ ನೆಲಕಚ್ಚಿದೆ. ಇವರು ಹೀಗೇ ವರ್ತಿಸಿದಲ್ಲಿ ಜನರು ಇನ್ನೂ ಹೀನಾಯವಾಗಿ ಸೋಲಿನ ರುಚಿ ತೋರಿಸುತ್ತಾರೆ ಎಂದು ಎಚ್ಚರಿಕೆ ಕೊಟ್ಟ ಸಚಿವ ಜೋಶಿ, ಕಾಂಗ್ರೆಸ್ ಪಕ್ಷದಲ್ಲಿ ವಯಸ್ಸು ಮತ್ತು ಅನುಭವದಲ್ಲಿ ಅತ್ಯಂತ ಹಿರಿಯರಾದ ಅದರಲ್ಲೂ ನಮ್ಮ ಸಂಸ್ಕೃತಿ ಹಿರಿಮೆಯ ಕರುನಾಡಿನವರಾಗಿ ಇಷ್ಟು ಕೆಳಮಟ್ಟಕ್ಕೆ ಇಳಿದಿರುವುದು ದುರದೃಷ್ಟಕರ ಮತ್ತು ತೀವ್ರ ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

# ನ.1ರಿಂದ 10 ಲಕ್ಷಕ್ಕೂ ಹೆಚ್ಚು ಎನ್‌ಸಿಆರ್ ವಾಹನಗಳಿಗೆ ದೆಹಲಿ ಪ್ರವೇಶ ನಿರ್ಬಂಧ

**ನವದೆಹಲಿ, ಅ.26:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಚಳಿಗಾಲದ ವಾಯುಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ನವೆಂಬರ್ 1ರಿಂದ ಮಹತ್ವದ ವಾಹನ ನಿರ್ಬಂಧ ಜಾರಿಗೆ ಬರಲಿದೆ. ಭಾರತ್ ಸ್ಟೇಜ್–6 ಮಾಲಿನ್ಯ ನಿಯಂತ್ರಣ ಮಾನದಂಡಗಳನ್ನು ಪೂರೈಸದ, ದೆಹಲಿಯ ಹೊರಗೆ ನೋಂದಣಿಯಾಗಿರುವ ವಾಹನಗಳಿಗೆ ರಾಜಧಾನಿ ಪ್ರವೇಶಿಸಲು ಅವಕಾಶ ಇರುವುದಿಲ್ಲ. ಈ ಕ್ರಮದಿಂದ ನೆರೆಯ ರಾಷ್ಟ್ರೀಯ ರಾಜಧಾನಿ ವಲಯದ (ಎನ್‌ಸಿಆರ್) 10 ಲಕ್ಷಕ್ಕೂ ಹೆಚ್ಚು ವಾಹನಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

ಈ ನಿರ್ಬಂಧ ನ.1ರಿಂದ ಮುಂದಿನ ಜ.1ರವರೆಗೆ ಜಾರಿಯಲ್ಲಿರುತ್ತದೆ. ದೆಹಲಿಗೆ ಪ್ರತಿನಿತ್ಯ ಉದ್ಯೋಗ, ವ್ಯಾಪಾರ ಹಾಗೂ ಇತರ ಕೆಲಸಗಳಿಗಾಗಿ ಸಂಚರಿಸುವ ವಾಹನ ಸವಾರರಿಗೆ ಈ ನಿರ್ಧಾರದಿಂದ ತೊಂದರೆಯಾಗುವ ಸಾಧ್ಯತೆಯಿದೆ. ಗುರುಗ್ರಾಮ ಮತ್ತು ಫರೀದಾಬಾದ್‌ನಲ್ಲಿ ಬಿಎಸ್6 ಮಾನದಂಡ ಪೂರೈಸದ ಸುಮಾರು 2ಲಕ್ಷ ವಾಹನಗಳಿವೆ. ಈ ಪೈಕಿ ಶೇ.70ರಷ್ಟು ವಾಹನಗಳು ಬಿಎಸ್3 ಮತ್ತು ಬಿಎಸ್4 ವರ್ಗಕ್ಕೆ ಸೇರಿವೆ. ಸುಮಾರು 50 ಸಾವಿರ ವಾಣಿಜ್ಯ ವಾಹನಗಳು ಕೂಡ ಬಿಎಸ್6 ಮಾನದಂಡಕ್ಕಿಂತ ಕೆಳಮಟ್ಟದಲ್ಲಿವೆ. ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದಲ್ಲಿ 4 ಲಕ್ಷಕ್ಕೂ ಹೆಚ್ಚು ವಾಹನಗಳು ಬಿಎಸ್6 ಮಾನದಂಡ ಪೂರೈಸಿಲ್ಲ. ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ವಾಹನಗಳು ಬಿಎಸ್4 ವರ್ಗಕ್ಕೆ ಸೇರಿವೆ. ಗಾಜಿಯಾಬಾದ್‌ನಲ್ಲಿಯೂ 4 ಲಕ್ಷ ಇಂತಹ ವಾಹನಗಳಿವೆ ಎಂದು ಸಾರಿಗೆ ಇಲಾಖೆ ಅಂದಾಜಿಸಿದೆ.

ನಿರ್ಬಂಧವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ದೆಹಲಿಯ ಗಡಿ ಪ್ರವೇಶಮಾರ್ಗಗಳಲ್ಲಿ ತಪಾಸಣೆ ಬಿಗಿಗೊಳಿಸಲಾಗುತ್ತಿದೆ. ವಾಹನಗಳ ನೋಂದಣಿ ಸಂಖ್ಯೆಯನ್ನು ಸ್ವಯಂಚಾಲಿತವಾಗಿ ಗುರುತಿಸುವ ಎಎನ್‌ಪಿಆರ್ ಕ್ಯಾಮರಾಗಳನ್ನು ಬಳಸಲಾಗುತ್ತದೆ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ನೆರವಿನಿಂದ ನಿಯಮ ಉಲ್ಲಂಘಿಸುವ ವಾಹನಗಳನ್ನು ಗುರುತಿಸುವ ವ್ಯವಸ್ಥೆಯನ್ನೂ ರೂಪಿಸಲಾಗುತ್ತಿದೆ. ಇದಲ್ಲದೆ, ಸಾರಿಗೆ ಇಲಾಖೆಯ 300 ಜಾರಿ ಸಿಬ್ಬಂದಿಯನ್ನು ನಿಯೋಜಿಸಿ, ನಿರ್ಬಂಧಿತ ವಾಹನಗಳು ದೆಹಲಿಗೆ ಪ್ರವೇಶಿಸದಂತೆ ಕ್ರಮ ಕೈಗೊಳ್ಳಲು ಸಿದ್ಧತೆ ನಡೆಸಲಾಗಿದೆ.

### ಸಿಎನ್‌ಜಿ, ಇವಿಗಳಿಗೆ ವಿನಾಯಿತಿ

ಬಿಎಸ್6 ಮಾನದಂಡ ಪೂರೈಸುವ ಹೊರರಾಜ್ಯ ನೋಂದಾಯಿತ ವಾಹನಗಳಿಗೆ ಪ್ರವೇಶ ನಿರ್ಬಂಧ ಅನ್ವಯಿಸುವುದಿಲ್ಲ. ಸಿಎನ್‌ಜಿ ಮತ್ತು ವಿದ್ಯುತ್ ಚಾಲಿತ ವಾಹನಗಳಿಗೂ ವಿನಾಯಿತಿ ನೀಡಲಾಗಿದೆ. ಈ ನಿರ್ದಿಷ್ಟ ನಿಯಮವು ದೆಹಲಿಯಲ್ಲಿ ನೋಂದಣಿಯಾದ ವಾಹನಗಳಿಗೆ ಅನ್ವಯಿಸುವುದಿಲ್ಲ. ಆದರೆ ಅವುಗಳಿಗೆ ಇತರ ಮಾಲಿನ್ಯ ನಿಯಂತ್ರಣ ನಿಯಮಗಳು ಅನ್ವಯಿಸಬಹುದು. ಚಳಿಗಾಲದಲ್ಲಿ ದೆಹಲಿಯ ವಾಯುಮಾಲಿನ್ಯ ಹೆಚ್ಚಾಗುವ ಹಿನ್ನೆಲೆಯಲ್ಲಿ ವಾಹನಗಳಿಂದ ಹೊರಸೂಸುವ ಮಾಲಿನ್ಯವನ್ನು ನಿಯಂತ್ರಿಸುವುದು ಸರ್ಕಾರದ ಉದ್ದೇಶವಾಗಿದೆ. ಆದರೆ ನೆರೆಯ ನಗರಗಳಿಂದ ಪ್ರತಿದಿನ ದೆಹಲಿಗೆ ಉದ್ಯೋಗ ಮತ್ತು ವ್ಯಾಪಾರಕ್ಕಾಗಿ ಸಂಚರಿಸುವ ವಾಹನ ಸವಾರರು ಪರ್ಯಾಯ ಸಾರಿಗೆ ವ್ಯವಸ್ಥೆ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು.

## ಶಿವಮೊಗ್ಗ ಜಿಲ್ಲೆಯ ಬರ, ಪರಿಹಾರದ ಕುರಿತು ಅ.29ರ ಸಂಪುಟದಲ್ಲಿ ಚರ್ಚೆ

**ಶಿವಮೊಗ್ಗ, ಅ.26:** ಜಿಲ್ಲೆಯ ಬರ ಪರಿಸ್ಥಿತಿ ಹಾಗೂ ಪರಿಹಾರದ ಕುರಿತು ಇದೇ ಅ.29ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ. ಬರ ಸಂಬಂಧ ಸೋಮವಾರ ಸುದ್ದಿಗಾರರೊಂದಿಗೆ



ಮಾತನಾಡಿದ ಅವರು, ಕ್ಯಾಬಿನೆಟ್ ಸಭೆಯಲ್ಲಿ ನಮ್ಮ ಜಿಲ್ಲೆಯ ಬರದ ವಿಚಾರವಾಗಿ ಚರ್ಚೆ ಮಾಡಲಿದ್ದೇವೆ. ಬರದ ಘೋಷಣೆ ಸ್ವಲ್ಪ ತಡವಾಯಿತು. ಬರ ಘೋಷಣೆಯನ್ನು ಕೇಂದ್ರ ಸರ್ಕಾರ ನಿಯಮದಂತೆ ಮಾಡಬೇಕಾಗುತ್ತದೆ ಎಂದರು.

**ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆಯೂ ಚರ್ಚೆ:** ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು ಮಾತನಾಡಿ, ಈ ಕುರಿತಂತೆಯೂ ಸಹ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸುತ್ತೇವೆ. ವೈಯಕ್ತಿಕವಾಗಿ ಏನಾದರೂ ಮಾಡಬೇಕು ಎಂಬ ಆಸೆ ಇದೆ. ಇದಕ್ಕೆ ಬೇರೆ ವಿಭಾಗಗಳ ಜೋಡಣೆ ಇರುವುದರಿಂದ ಈ ಕುರಿತು ಕನ್ನಡ ಶಾಲೆಯವರು ಕಾಯುತ್ತಿದ್ದಾರೆ. ನ.14ರಿಂದ ಪ್ರತಿಭಟನೆ ಸಹ ಇದೆ. ಕನ್ನಡ ಮಾಧ್ಯಮ ಉಳಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು. ಶಾಲಾ ಮಕ್ಕಳಿಗೆ ನೀಡುವ ಶೂ ಗುಣಮಟ್ಟದಲ್ಲಿ ಯಾವುದೇ ದೂರು ಬಂದಿಲ್ಲ. ಆದರೆ, ಮಕ್ಕಳ ಗಾತ್ರ ಹೆಚ್ಚೂಕಡಿಮೆ ಆಗುತ್ತಿದೆ. ಶೂ ಗುಣಮಟ್ಟ ಚೆನ್ನಾಗಿದೆ. ಪಿಯುಸಿ ಮಕ್ಕಳಿಗೂ ಶೂ ವಿತರಿಸಲಾಗುವುದು ಎಂದು ತಿಳಿಸಿದರು.



ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸೋಮವಾರ ಸವದತ್ತಿಯ ಯಲ್ಲಮ್ಮನ ಗುಡ್ಡದಲ್ಲಿ ನೆಲೆಸಿರುವ ತಾಯಿ ಶ್ರೀ ರೇಣುಕಾ ಯಲ್ಲಮ್ಮನ ದರ್ಶನ ಪಡೆದು, ಪೂಜೆ ಸಲ್ಲಿಸಿ ನಾಡಿನ ಜನರ ಒಳಿತಿಗೆ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಶಾಸಕ ಎಚ್.ಕೆ. ಪಾಟೀಲ್ ಜೊತೆಗಿದ್ದರು.

## ರಾಜಕೀಯದಲ್ಲಿ ಹಿರಿತನವಿದ್ದರೂ ಸಣ್ಣತನ ತೋರಿದ ಖರ್ಗೆ: ಎಚ್‌ಡಿಕೆ



**■ ಪ್ರಧಾನಿ ತಂದೆಯನ್ನು ನಿಂದಿಸಿದ್ದಕ್ಕೆ ಕುಮಾರಸ್ವಾಮಿ ತರಾಟೆ**

**ನವದೆಹಲಿ, ಅ.26:** ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಭರದಲ್ಲಿ ಅವರ ತಂದೆಯವರ ಬಗ್ಗೆ ನಾಲಿಗೆ ಜಾರಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು; ಸಾರ್ವಜನಿಕ ಜೀವನದಲ್ಲಿ ಸುದೀರ್ಘ ಹಿರಿತನವಿದ್ದರೂ ಮಾತಿನಲ್ಲಿ ಅವರು ತೋರಿದ ಸಣ್ಣತನ ಕ್ಷಮಾರ್ಹವಲ್ಲ ಎಂದಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಸಚಿವರು; ರಾಷ್ಟ್ರದ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಅವಹೇಳನಕಾರಿ ಮಾತ್ರವಲ್ಲ, ರಾಜಕೀಯ ಶಿಷ್ಟಾಚಾರದ ಸ್ಪಷ್ಟ ಉಲ್ಲಂಘನೆ. ಅವರ ಮಾತು ಮಾನವೀಯತೆಯ ಅಣಕ ಹಾಗೂ ಅವರಲ್ಲಿ ಅಡಗಿರುವ ನಿಗೂಢ ಕ್ರೂರ ಮನಃಸ್ಥಿತಿಯ ಪ್ರತೀಕ. ಅದುವೇ ಇಂತಹ ನುಡಿಮುತ್ತುಗಳನ್ನು ನುಡಿಸಿರಬೇಕು ಎಂದು ಹರಿಹಾಯ್ದಿದ್ದಾರೆ.

'ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಿಗೆ' ಎಂದು ಪುರಂದರದಾಸರು ಸುಮ್ಮನೆ ಹೇಳಿದ್ದಲ್ಲ, ಬಹುಶಃ ಇಂಥ ನಾಲಿಗೆಗಳನ್ನು ತಿದ್ದಬೇಕು ಎಂಬ ಉದ್ದೇಶದಿಂದಲೇ ಹೇಳಿರಬೇಕು. ಖರ್ಗೆ ಅವರ ಈ ಹೇಳಿಕೆಯನ್ನು ಖಂಡಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

ಪ್ರಧಾನಿ ತಂದೆಯವರನ್ನು ರಾಜಕೀಯ ಟಾರ್ಗೆಟ್ ಮಾಡಿಕೊಂಡು ಖರ್ಗೆ ಅವರು ನೀಡಿರುವ ಹೇಳಿಕೆಯನ್ನು ಸಹಿಸಲು ಸಾಧ್ಯವಿಲ್ಲ. ಸಾರ್ವಜನಿಕ ಜೀವನದಲ್ಲಿ ಸುದೀರ್ಘ ಹಿರಿತನವಿದ್ದರೂ ಮಾತಿನಲ್ಲಿ ಅವರು ತೋರಿದ ಸಣ್ಣತನ ಕ್ಷಮಾರ್ಹವಲ್ಲ. ಅವರ ವರ್ತನೆ ಕೇವಲ ಹತಾಶೆಯಷ್ಟೇ ಅಲ್ಲ, ನಾಚಿಕೆಗೇಡಿತನದ್ದು. ಇದು ಕಾಂಗ್ರೆಸ್ ಪಕ್ಷದ ಅಧಃಪತನದ ಪರಮಾವಧಿ. ಖರ್ಗೆ ಅವರು ಪ್ರಧಾನಿಗಳ ಕ್ಷಮೆ ಕೇಳಿ ತಮ್ಮ ಹಿರಿತನದ ಮರ್ಯಾದೆ ಉಳಿಸಿಕೊಳ್ಳಬೇಕು ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

## ಸ್ಥಳೀಯರಿಗೆ ಉದ್ಯೋಗ ನೀಡುವುದು ಉದ್ಯಮಿಗಳ ಜವಾಬ್ದಾರಿ

### ಉದ್ಯೋಗ ಕಲ್ಪಿಸುವ ಬದ್ಧತೆಯನ್ನು ಕೈಗಾರಿಕೆಗಳು ಪಾಲಿಸಬೇಕು: ಡಿಸಿಎಂ ಡಾ.ಜಿ.ಪರಮೇಶ್ವರ್



**ಬೆಂಗಳೂರು, ಅ.26:** ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳು ಸ್ಥಳೀಯ ಅರ್ಹ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಕೈಗಾರಿಕೆಗಳಿಗೆ ಭೂಮಿ, ವಿದ್ಯುತ್, ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದ್ದು, ಅದಕ್ಕೆ ಅನುಗುಣವಾಗಿ ಅರ್ಹ ಕನ್ನಡಿಗರಿಗೆ ಉದ್ಯೋಗ ನೀಡುವ ಬದ್ಧತೆಯನ್ನು ಕೈಗಾರಿಕೆಗಳು ಪಾಲಿಸಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂಬುದು ಹೊಸ ವಿಚಾರವಲ್ಲ. ಮೊದಲಿನಿಂದಲೂ ಈ ನೀತಿ ಜಾರಿಯಲ್ಲಿದ್ದು, ಅದನ್ನು ಎಲ್ಲ ಕೈಗಾರಿಕೆಗಳು ಪಾಲಿಸಬೇಕು ಎಂದು ತಿಳಿಸಿದರು.

ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಭೂಮಿ, ವಿದ್ಯುತ್, ನೀರು ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸುತ್ತದೆ. ಹೀಗಿರುವಾಗ ಸ್ಥಳೀಯರಿಗೆ ಉದ್ಯೋಗ ನೀಡುವುದು ಕೈಗಾರಿಕೆಗಳ ಜವಾಬ್ದಾರಿಯಾಗಿದೆ.

ಅರ್ಹತೆ ಇಲ್ಲದವರಿಗೆ ಉದ್ಯೋಗ ನೀಡಬೇಕೆಂದು ಸರ್ಕಾರ ಹೇಳುತ್ತಿಲ್ಲ. ಅಗತ್ಯ ವಿದ್ಯಾರ್ಹತೆ ಮತ್ತು ಕೌಶಲ ಹೊಂದಿರುವ ಕನ್ನಡಿಗರಿಗೆ ಅವರ ಅರ್ಹತೆಗೆ ತಕ್ಕಂತೆ ಉದ್ಯೋಗಾವ ಕಾಶಗಳನ್ನು ನೀಡಬೇಕು ಎಂಬುದು ಸರ್ಕಾರದ ನಿಲುವಾಗಿದೆ ಎಂದು ಸ್ಪಷ್ಟಪಡಿಸಿದರು.

ಕೆಲವು ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಅಟೆಂಡರ್ ಹಾಗೂ ಕೆಳಹಂತದ ಹುದ್ದೆಗಳನ್ನು ಮಾತ್ರ ನೀಡಲಾಗುತ್ತಿದೆ. ಈ ಪ್ರವೃತ್ತಿ ಸರಿಯಲ್ಲ. ಅರ್ಹತೆ ಹೊಂದಿರುವ ಕನ್ನಡಿಗರಿಗೆ ಅವರ ವಿದ್ಯಾರ್ಹತೆ ಮತ್ತು ಕೌಶಲಕ್ಕೆ ಅನುಗುಣವಾಗಿ ಸೂಕ್ತ ಹುದ್ದೆಗಳನ್ನು ನೀಡಬೇಕು. ಈ ವಿಚಾರದಲ್ಲಿ ಮುಖ್ಯಮಂತ್ರಿಯವರು ಸರ್ಕಾರದ ಹಿಂದಿನ ಬದ್ಧತೆಯನ್ನೇ ಪುನರುಚ್ಚರಿಸಿದ್ದಾರೆ ಎಂದು ಹೇಳಿದರು.

## ಮಾತೃಭಾಷೆ ಕನ್ನಡ ಎಂಬ ಕಾರಣಕ್ಕೆ ಉದ್ಯೋಗ ನಿರಾಕರಿಸುವುದು ಉದ್ಧಟತನ: ತಂಗಡಗಿ



**ಬೆಂಗಳೂರು, ಅ.26:** ಬೆಂಗಳೂರು ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಕನ್ನಡಿಗರ ಅಪಾರ ಶ್ರಮವಿದೆ. ಅಂಥದರಲ್ಲಿ ಇತ್ತೀಚಿಗೆ ಖಾಸಗಿ ಮತ್ತು ಮಾಹಿತಿ ತಂತ್ರಜ್ಞಾನ (ಐಟಿ) ಕಂಪನಿಗಳಲ್ಲಿ ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ನೀಡುತ್ತಿಲ್ಲ ಎಂಬ ಆರೋಪದ ಬೆನ್ನಲ್ಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಪ್ರತಿಕ್ರಿಯಿಸಿದ್ದಾರೆ.

ಕನ್ನಡಿಗರ ಉದ್ಯೋಗದ ಹಕ್ಕುಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಕನ್ನಡಿಗರ ಸ್ವಾಭಿಮಾನದ ವಿಚಾರದಲ್ಲಿ ರಾಜಿಯ ಪ್ರಶ್ನೆಯೇ ಇಲ್ಲ. ಕನ್ನಡದ ನೆಲದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳಲ್ಲಿ ಅನ್ಯಾಯವಾಗುತ್ತಿದೆ. ಸ್ಥಳೀಯ ಪ್ರತಿಭೆಗಳನ್ನು ಕಡೆಗಣಿಸಲಾಗುತ್ತಿದೆ ಎಂಬುದು ಕಳವಳಕಾರಿ ವಿಷಯ. ಅರ್ಹತೆ ಇಲ್ಲದಿದ್ದರೆ ಉದ್ಯೋಗ ತಿರಸ್ಕರಿಸುವುದು ಬೇರೆ, ಮಾತೃಭಾಷೆ ಕನ್ನಡ ಎಂಬ ಕಾರಣಕ್ಕೆ ಉದ್ಯೋಗ ನಿರಾಕರಿಸುವುದು ಉದ್ಧಟತನ. ಯಾವುದೇ ಕಾರಣಕ್ಕೂ ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

**ಸರ್ಕಾರಕ್ಕೆ ದೂರು ಸಲ್ಲಿಸಿ:** ಕನ್ನಡಿಗರಿಗೆ ನ್ಯಾಯಯುತ ಉದ್ಯೋಗಾವಕಾಶ ದೊರೆಯಬೇಕು. ಅರ್ಹತೆ, ಕೌಶಲ್ಯ ಮತ್ತು ಪ್ರತಿಭೆಗೆ ತಕ್ಕ ಮನ್ನಣೆ ಸಿಗಬೇಕು. ಕನ್ನಡ ಮಾತೃಭಾಷೆ ಎಂಬ ಕಾರಣಕ್ಕೆ ಯಾವುದೇ ಕಂಪೆನಿ ಉದ್ಯೋಗ ನಿರಾಕರಿಸಿದರೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ಬೆಂಗಳೂರಿನಲ್ಲಿರುವ ಯಾವುದೇ ಕಂಪೆನಿಯು ನಿಜವಾಗಿಯೂ ಈ ರೀತಿ ನಡೆದುಕೊಂಡರೆ ಕನ್ನಡಿಗರು ನೀವು ರಾಜ್ಯ ಸರ್ಕಾರಕ್ಕೆ ದೂರು ಸಲ್ಲಿಸಬಹುದು. ಕನ್ನಡದ ನೆಲದಲ್ಲಿ ಕನ್ನಡಿಗರ ಪ್ರತಿಭೆಗೆ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಮಾಡಲಿದೆ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂದು ಹೇಳಿದರು.

## ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ನಿಂದನೆಯಲ್ಲ, ಸೈದ್ಧಾಂತಿಕ ವಿಮರ್ಶೆಯಷ್ಟೆ



**■ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸಮರ್ಥನೆ**

**ಬೆಂಗಳೂರು, ಅ.26:** ಪ್ರಧಾನಿ ನರೇಂದ್ರ ಮೋದಿ ಅವರ ತಂದೆಯ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿರುವ ಹೇಳಿಕೆ ಯಾವುದೇ ವೈಯಕ್ತಿಕ ಟೀಕೆಯಲ್ಲ; ಅದೊಂದು ಸೈದ್ಧಾಂತಿಕ ವಿಮರ್ಶೆಯಷ್ಟೇ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿ, ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ಈ ದೇಶವನ್ನು ಮಾತೃಭೂಮಿ ಎನ್ನುವುದಿಲ್ಲ, ಬದಲಾಗಿ ಪಿತೃಭೂಮಿ, ಪುಣ್ಯಭೂಮಿ ಎಂದು ಕರೆಯುತ್ತಾರೆ. ಖರ್ಗೆಯವರು ಇದೇ ಬಿಜೆಪಿ ಧಾಟಿಯಲ್ಲೇ ತಿರುಗೇಟು ನೀಡಿದ್ದು, ಪಿತೃಭೂಮಿ ಎನ್ನುವವರ ಪಿತೃಗಳು ಕೂಡ ಖಾಲಿ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದೇ ಅವಹೇಳನ ಅಥವಾ ವೈಯಕ್ತಿಕ ನಿಂದನೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಹರಿಪ್ರಸಾದ್, ಖರ್ಗೆಯವರು ಆ ಮಹಾಮಾನವನ (ಮೋದಿ) ಬಗ್ಗೆ ಮಾತನಾಡಿಲ್ಲ. ಒಂದು ವೇಳೆ ಈ ಮಹಾಮಾನವ ಟೆಲಿಪ್ರಾಂಪ್ಟರ್ ಬಿಟ್ಟು ಮಾತನಾಡಲು ನಿಂತರೆ ಬಾಯಲ್ಲಿ ಕಾಂಗ್ರೆಸ್ ವಿಧವೆ, ಜರ್ಸಿ ಹಸು, 50 ಕೋಟಿಯ ಗರ್ಲ್‌ಫ್ರೆಂಡ್ ಎಂಬ ಆಣಿಮುತ್ತುಗಳೇ ಉದುರುತ್ತವೆ. ಬೆಂಕಿ ಹಚ್ಚುವ ಕೆಲಸವನ್ನು ಮೊದಲು ಶುರು ಮಾಡಿದ್ದೇ ಇವರು ಎಂದು ಕಿಡಿಕಾರಿದರು.

ಸಂಸತ್ತಿನಲ್ಲಿ ಇಂದಿರಾ ಗಾಂಧಿಯವರ ಬಗ್ಗೆ ಮಾತನಾಡುವ ಆ ತಡಿಪಾರು (ಗಡೀಪಾರಾದ ವ್ಯಕ್ತಿ), ಇಂದಿರಾ ಗಾಂಧಿಯವರ ಕಾಲಿನ ಧೂಳಿಗೂ ಸಮಾನರಲ್ಲ. ಇನ್ನು, ಸಾಮ್ರಾಟ್ ಅಶೋಕನಿಗೆ (ಆರ್. ಅಶೋಕ್) ಎಂತಹ ಸಂಸ್ಕೃತಿ ಇದೆ ಎಂಬುದು ಚೆನ್ನಾಗಿ ಗೊತ್ತು. ಅವರಿಂದ ನಾನೇನೂ ಕಲಿಯಬೇಕಿಲ್ಲ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

### ನ.5ರಂದು ಬೆಂಗಳೂರಿನಲ್ಲಿ ಹೋರಾಟ

ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯುತ್ತಿರುವ ಬೃಹತ್ ಹೋರಾಟದ ಮುಂದುವರಿದ ಭಾಗವಾಗಿ, ನವೆಂಬರ್ 5ರಂದು ಬೆಂಗಳೂರಿನಲ್ಲಿಯೂ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಿದ್ಧತಾ ಸಭೆಗಳನ್ನು ನಡೆಸಲಾಗಿದ್ದು, ಸಿಪಿಐ, ಸಿಪಿಎಂ ಸೇರಿದಂತೆ ಇಂಡಿಯಾ ಮೈತ್ರಿಕೂಟದ ನಾಯಕರು ಈ ಹೋರಾಟದಲ್ಲಿ ಭಾಗಿಯಾಗಲಿದ್ದಾರೆ ಎಂದು ಬಿ.ಕೆ. ಹರಿಪ್ರಸಾದ್ ಮಾಹಿತಿ ನೀಡಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೂಚನೆಯ ಮೇರೆಗೆ ವೋಟ್ ಚೋರಿ, ದೇಶ್ ಬಚಾವೋ, ವೋಟ್ ಬಚಾವೋ ಶೀರ್ಷಿಕೆಯಡಿ ಮುಂದಿನ ಎರಡು ತಿಂಗಳ ಕಾಲ ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ಬ್ಲಾಕ್ ಮಟ್ಟದಲ್ಲಿ ನಿರಂತರವಾಗಿ ಅಭಿಯಾನ ಮತ್ತು ಹೋರಾಟ ನಡೆಯಲಿದೆ ಎಂದು ಬಿ.ಕೆ. ಹರಿಪ್ರಸಾದ್ ತಿಳಿಸಿದರು.

## ಬೈಕ್ ಟ್ಯಾಕ್ಸಿ ಪ್ರಕರಣ: ಸುಪ್ರೀಂನಲ್ಲಿ ಕರ್ನಾಟಕದ ಪರ ತುಷಾರ್ ಮೆಹ್ತಾ ವಕಾಲತ್ತು



**■ ನವೆಂಬರ್ 16ಕ್ಕೆ ಮುಂದಿನ ವಿಚಾರಣೆ**

**■ ಬೈಕ್ ಟ್ಯಾಕ್ಸಿ ಸೇವೆಗಳಿಗೆ ಅನುಮತಿ ನೀಡಿದ ಪ್ರಶ್ನಿಸಿರುವ ರಾಜ್ಯ ಸರ್ಕಾರ**

**ನವದೆಹಲಿ, ಅ.26:** ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳಿಗೆ ಅನುಮತಿ ನೀಡಿದ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿರುವ ರಾಜ್ಯ ತನ್ನ ಪರ ವಾದ ಮಂಡಿಸಲು ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ನೇಮಿಸಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮಾ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠದ ಮುಂದೆ ತುಷಾರ್ ಮೆಹ್ತಾ ವರ್ಚುವಲ್ ಮೂಲಕ ಹಾಜರಾಗಿ, ಪ್ರಕರಣಕ್ಕೆ ಸಂಬಂಧಿಸಿದ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಕಾಲಾವಕಾಶ ಕೋರಿದರು. ಇದಕ್ಕೆ ಅನುಮತಿ ನೀಡಿದ ಪೀಠ, ನವೆಂಬರ್ 16ರಂದು ಪ್ರಕರಣವನ್ನು ಮತ್ತೆ ವಿಚಾರಣೆಗೆ ಪಟ್ಟಿ ಮಾಡಲು ಸೂಚಿಸಿತು.

ಬೈಕ್ ಟ್ಯಾಕ್ಸಿ ಸೇವೆಗಳಿಗೆ ಅನುಮತಿ ನೀಡಿದ ಕರ್ನಾಟಕ ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿರುವ ರಾಜ್ಯ ಸರ್ಕಾರ, ಪ್ರಯಾಣಿಕರ ಸುರಕ್ಷತೆ, ವಿಮಾ ರಕ್ಷಣೆ ಹಾಗೂ ನಿಯಂತ್ರಣ ವ್ಯವಸ್ಥೆಯ ಅಗತ್ಯವನ್ನು ಮುಂದಿಟ್ಟಿದೆ.

ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಗೆ ಸ್ಪಷ್ಟವಾದ ನಿಯಮಾವಳಿ ಮತ್ತು ಸುರಕ್ಷತಾ ಕ್ರಮಗಳು ಅಗತ್ಯವೆಂಬುದು ರಾಜ್ಯದ ವಾದವಾಗಿದೆ.

ವಿಚಾರಣೆ ವೇಳೆ ಬೈಕ್ ಟ್ಯಾಕ್ಸಿ ಸೇವೆಗಳನ್ನು ಬೆಂಬಲಿಸುವ ಅಗ್ರಿಗೇಟರ್‌ಗಳ ಪರ ವಕೀಲರು, ಕೇಂದ್ರ ಸರ್ಕಾರವು ತಮ್ಮ ನಿಲುವಿಗೆ ಪೂರಕವಾದ ಸುತ್ತೋಲೆಗಳನ್ನು ಹೊರಡಿಸಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಪರವೂ ಹಾಜರಾಗುವ ತುಷಾರ್ ಮೆಹ್ತಾ, ಸಂಬಂಧಿತ ವಿಚಾರದಲ್ಲಿ ಕೇಂದ್ರದ ನಿಲುವನ್ನು ಸ್ಪಷ್ಟಪಡಿಸಬಹುದು ಎಂದು ನ್ಯಾಯಪೀಠ ಹೇಳಿತು.

ಆನ್‌ಲೈನ್ ಸಾರಿಗೆ ಸೇವಾ ಸಂಸ್ಥೆ ಉಬರ್ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹಾಜರಾಗಿದ್ದರು. ಕೇಂದ್ರದ ಸುತ್ತೋಲೆಗಳು ಬೈಕ್ ಟ್ಯಾಕ್ಸಿ ಸಂಸ್ಥೆಗಳ ಪರವಾಗಿರುವುದರಿಂದ ತುಷಾರ್ ಮೆಹ್ತಾ ಕರ್ನಾಟಕ ಸರ್ಕಾರದ ಪರ ಮಾತ್ರ ವಾದ ಮಂಡಿಸಬಹುದು ಎಂಬ ಅಭಿಪ್ರಾಯವನ್ನು ಅವರು ಹಾಸ್ಯಮಿಶ್ರಿತವಾಗಿ ವ್ಯಕ್ತಪಡಿಸಿದರು. ಬಳಿಕ ಪ್ರಕರಣದಲ್ಲಿ ತುಷಾರ್ ಮೆಹ್ತಾ ಹಾಜರಾಗುವುದಕ್ಕೆ ತಮ್ಮ ಆಕ್ಷೇಪವಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಹಿಂದೆ ಕರ್ನಾಟಕ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸುತ್ತಿದ್ದರು. ಆದರೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ರ್‍ಯಾಪಿಡೊ ಸಂಸ್ಥೆಗೆ ಅವರು ಕಾನೂನು ಅಭಿಪ್ರಾಯ ನೀಡಿದ್ದ ವಿಚಾರವನ್ನು ಸಂಸ್ಥೆಯು ನ್ಯಾಯಾಲಯದ ಗಮನಕ್ಕೆ ತಂದ ಹಿನ್ನೆಲೆಯಲ್ಲಿ, ಅವರು ಪ್ರಕರಣದಿಂದ ಹಿಂದೆ ಸರಿದಿದ್ದರು.

## ಶೃಂಗಸಭೆ ಮೂಲಕ ಸ್ಟಾರ್ಟ್‌ಅಪ್, ಹೂಡಿಕೆದಾರರ ನಡುವೆ ಸಂಪರ್ಕಕ್ಕೆ ಅವಕಾಶ ಕಲ್ಪಿಸುವ ಉದ್ದೇಶ



**■ ಬೆಂಗಳೂರು ಟೆಕ್ ಸಮಿಟ್–2026: ಸಿದ್ಧತೆಗಳ ಪರಿಶೀಲನೆ ನಡೆಸಿದ ಸಚಿವ ಪ್ರಿಯಾಂಕ್ ಖರ್ಗೆ**

**ಬೆಂಗಳೂರು, ಅ.26:** ಬೆಂಗಳೂರು ಟೆಕ್ ಸಮಿಟ್ ಸದಾ ವಿಚಾರಗಳು, ನಾವೀನ್ಯತೆ ಮತ್ತು ಸಹಯೋಗಕ್ಕೆ ವೇದಿಕೆ ಒದಗಿಸುತ್ತಾ ಬಂದಿದೆ. ಈ ಬಾರಿ ಎ.ಐ ಬಿಯಾಂಡ್ ಆಶಯದಡಿ, ಉದಯೋನ್ಮುಖ ತಂತ್ರಜ್ಞಾನಗಳ ಸಾಧ್ಯತೆಗಳನ್ನು ಜನರು ನೇರವಾಗಿ ಅನುಭವಿಸುವುದರ ಜೊತೆಗೆ, ಸ್ಟಾರ್ಟ್ ಅಪ್‌ಗಳು, ಸಂಶೋಧಕರು, ಹೂಡಿಕೆ ದಾರರು ಮತ್ತು ಉದ್ಯಮದ ನಾಯಕರ ನಡುವೆ ಸಂಪರ್ಕ ಹಾಗೂ ಸಹಯೋಗಕ್ಕೆ ಅವಕಾಶ ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ನ.17ರಿಂದ 19ರವರೆಗೆ ಬೆಂಗಳೂರಿನ ಬಿಐಇಸಿ ಕೇಂದ್ರದಲ್ಲಿ ನಡೆಯಲಿರುವ 29ನೇ ಆವೃತ್ತಿಯ ಬೆಂಗಳೂರು ಟೆಕ್ ಸಮಿಟ್ 2026ರ ಸಿದ್ಧತೆಗಳನ್ನು ಸೋಮವಾರ ಪರಿಶೀಲಿಸಿ ಮಾತನಾಡಿ, ಎಐ ಅಂಡ್ ಬಿಯಾಂಡ್ ಆಶಯದೊಂದಿಗೆ ನಡೆಯಲಿರುವ ಈ ಸಮಿಟ್ ಅನ್ನು ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸುತ್ತಿದೆ. ಈ ಸಮಿಟ್ ನಲ್ಲಿ ತಂತ್ರಜ್ಞಾನ ಕ್ಷೇತ್ರದ ನಾಯಕರು, ಉದ್ಯಮಿಗಳು, ಸ್ಟಾರ್ಟ್ ಅಪ್‌ಗಳು, ಹೂಡಿಕೆ ದಾರರು, ಸಂಶೋಧಕರು, ನೀತಿ ನಿರೂಪಕರು ಹಾಗೂ ಅಂತಾರಾಷ್ಟ್ರೀಯ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಡೀಪ್‌ಟೆಕ್ ಮತ್ತು ರೊಬೊಟಿಕ್ಸ್‌ನಿಂದ ಹಿಡಿದು ಜಾಗತಿಕ ತಂತ್ರಜ್ಞಾನ ಸಹಭಾಗಿತ್ವದವರೆಗೆ, ಬಿಟಿಎಸ್ 2026 ಭಾರತದ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿ ಉಳಿಯುವ ನಮ್ಮ ಮಹತ್ವಾಕಾಂಕ್ಷೆಯನ್ನು ಪ್ರತಿಬಿಂಬಿಸಲಿದೆ ಎಂದು ಹೇಳಿದ್ದಾರೆ.

1,800ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸುವ ನಿರೀಕ್ಷೆಯಿರುವ ಬಿಟಿಎಸ್ 2026ರಲ್ಲಿ ಕೃತಕ ಬುದ್ಧಿಮತ್ತೆ, ಡೀಪ್‌ಟೆಕ್, ಜೈವಿಕ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್‌ಗಳು, ರೊಬೊಟಿಕ್ಸ್ ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನಗಳ ಪ್ರದರ್ಶನ ನಡೆಯಲಿದೆ. ತಂತ್ರಜ್ಞಾನ ಪ್ರಾತ್ಯಕ್ಷಿಕೆಗಳು, ಸ್ಟಾರ್ಟ್‌ಅಪ್‌ಗಳ ಪ್ರದರ್ಶನ, ಹೂಡಿಕೆದಾರರೊಂದಿಗಿನ ಸಂವಾದ ಸಮಿಟ್ ಪ್ರಮುಖ ಆಕರ್ಷಣೆಯಾಗಿವೆ.

## ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಕೇಂದ್ರದಿಂದ ಪ್ರಾಮಾಣಿಕ ಪ್ರಯತ್ನ



**■ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಕರ್ನಾಟಕ ಸರ್ಕಾರ ಯತ್ನ: ಆರ್.ಅಶೋಕ್**

**ಬೆಂಗಳೂರು, ಅ.26:** ಕಬ್ಬು ಬೆಳೆಗಾರರ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದೆ. ಕಬ್ಬು ಬೆಳೆಗಾರರಿಗೆ ಶಾಶ್ವತ ಪರಿಹಾರ ಕಲ್ಪಿಸಲು ನೀತಿ ಆಯೋಗದ ಮಾಜಿ ಸದಸ್ಯ ರಮೇಶ್ ಚಂದ್ ಅಧ್ಯಕ್ಷತೆಯಲ್ಲಿ ಜಂಟಿ ಸಮಿತಿ ರಚಿಸಲಾಗಿದೆ. ಕೇಂದ್ರ ಸರ್ಕಾರವು 2026–27ನೇ ಸಾಲಿಗೆ ಪ್ರತಿ ಕ್ವಿಂಟಾಲ್‌ಗೆ 365 ರೂ. ಎಫ್‌ಆರ್‌ಪಿ ನಿಗದಿಪಡಿಸಿದ್ದು, 2018ರಲ್ಲೇ ಕಬ್ಬಿಗೆ ಎಂಎಸ್‌ಪಿ ದರವನ್ನೂ ಜಾರಿಗೆ ತಂದಿದೆ. ಆದರೆ, ರಾಜ್ಯದ ಕಾಂಗ್ರೆಸ್ ಸರ್ಕಾರ ಮಾತ್ರ ಕೇಂದ್ರದ ಮೇಲೆ ಗೂಬೆ ಕೂರಿಸಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ರಾಜಕಾರಣ ಮಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್ ಟೀಕಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಅವರು, ಕಳೆದ ವರ್ಷ ನವೆಂಬರ್ 7ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿ ಟನ್ ಕಬ್ಬಿಗೆ 3,300 ರೂ. ನೀಡುವುದಾಗಿ ಘೋಷಿಸಿ, ಅದರಲ್ಲಿ 50 ರೂ. ಸಹಾಯಧನವನ್ನು ಕಾರ್ಖಾನೆಗಳು ನೀಡಬೇಕು ಎಂದಿದ್ದರು. ಆದರೆ ಕಾರ್ಖಾನೆಗಳು ಕೋರ್ಟ್ ಮೊರೆಹೋದರೂ ಸಮರ್ಥವಾದ ಕಾನೂನು ಹೋರಾಟ ಮಾಡಿ ಆ ಸಹಾಯಧನವನ್ನು ರೈತರಿಗೆ ಕೊಡಿಸಲು ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ರೈತರ ಕಾಳಜಿ ಬಗ್ಗೆ ಕಾಂಗ್ರೆಸ್ ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತಿದೆ ಎನ್ನುವುದಕ್ಕೆ ಸಾಕ್ಷಿ ಎಂದು ಕಿಡಿ ಕಾರಿದ್ದಾರೆ

ಮುಖ್ಯಮಂತ್ರಿಗಳೇ, ಸುಳ್ಳು ಭರವಸೆ ಮತ್ತು ರಾಜಕೀಯ ತಂತ್ರಗಳಿಂದ ರೈತರ ಬದುಕು ಹಸನಾಗುವುದಿಲ್ಲ. ಕೂಡಲೇ ಕಬ್ಬು ಬೆಳೆಗಾರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಿ. ಅನ್ನದಾತರ ತಾಳ್ಮೆಯನ್ನು ಪರೀಕ್ಷಿಸಬೇಡಿ ಎಂದು ಎಚ್ಚರಿಸಿದ್ದಾರೆ.

## ಇಸ್ರೇಲ್‌ನಲ್ಲಿ ಮಂಗಳೂರಿನ ವ್ಯಕ್ತಿ ನಾಪತ್ತೆ; ಪತ್ತೆಗಾಗಿ ಭಾರತೀಯ ರಾಯಭಾರ ಕಚೇರಿಗೆ ಕುಟುಂಬ ಮನವಿ

ಮಂಗಳೂರು, ಅ.26: ಉದ್ಯೋಗಕ್ಕಾಗಿ ಇಸ್ರೇಲ್‌ಗೆ ತೆರಳಿದ್ದ ಮಂಗಳೂರಿನ 41 ವರ್ಷದ ವ್ಯಕ್ತಿಯೊಬ್ಬರು ನಾಪತ್ತೆಯಾಗಿದ್ದು, ಅವರ ಪತ್ತೆಗಾಗಿ ಕುಟುಂಬದವರು ಮಂಗಳೂರು ನಗರ ಪೊಲೀಸ್ ಆಯುಕ್ತರಿಗೆ ನಾಪತ್ತೆ ದೂರು ಸಲ್ಲಿಸಿದ್ದಾರೆ. ಆ ಸಂಬಂಧ ಇಸ್ರೇಲ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗೂ ಕುಟುಂಬಸ್ಥರು ಪತ್ರ ಬರೆದು ನೆರವು ಕೋರಿದ್ದಾರೆ.

ಮಂಗಳೂರಿನ ಸಮೀಪದ ಕಣ್ಣೂರು ಬಳಿಯ ಕೊಡಕ್ಕಲ್ ನಿವಾಸಿ ಶದ್ರಕ್ ಎಮ್ಯಾನುಯಲ್ ನಾಪತ್ತೆಯಾದವರು. ಅವರ ಪತ್ನಿ ಡೈಸಿ ಎಮ್ಯಾನುಯಲ್ ನೀಡಿರುವ ಮಾಹಿತಿಯ ಪ್ರಕಾರ, ಅ.16ರ ಬಳಿಕ ಶದ್ರಕ್ ಅವರ ಸಂಪರ್ಕ ಸಾಧ್ಯವಾಗಿಲ್ಲ. ಶದ್ರಕ್ ಅವರು ಉದ್ಯೋಗದ ನಿಮಿತ್ತ ಈ ವರ್ಷದ ಮೇ 16ರಂದು ಇಸ್ರೇಲ್‌ಗೆ ತೆರಳಿದ್ದರು. ಮಂಗಳೂರಿನ ಫರ್ನಾಂಡಿಸ್ ಗ್ರೂಪ್ ಎಂಬ ನೇಮಕಾತಿ ಸಂಸ್ಥೆಯ ಮೂಲಕ ಇಸ್ರೇಲ್‌ನ ನಜರೆತ್‌ನ ನೋಫ್ ಹಾಗಲಿಲ್‌ನಲ್ಲಿರುವ ಯುಸಿಟಿ ಲಿಕ್ವಿಡ್ ಸೊಲ್ಯೂಷನ್ಸ್ ಕಂಪನಿಯಲ್ಲಿ ಅವರಿಗೆ ಕೆಲಸ ದೊರೆತಿತ್ತು. ಶದ್ರಕ್ ಅವರನ್ನು ಪತ್ತೆಹಚ್ಚಲು ಇಸ್ರೇಲ್ ಪೊಲೀಸರ ಹಾಗೂ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಡೈಸಿ ಭಾರತೀಯ ರಾಯಭಾರ ಕಚೇರಿಯನ್ನು ಕೋರಿದ್ದಾರೆ. ಅಲ್ಲದೆ, ಶದ್ರಕ್ ಕೆಲಸ ಮಾಡುತ್ತಿದ್ದ ಕಂಪನಿ, ನೇಮಕಾತಿ ಸಂಸ್ಥೆ ಅಥವಾ ಉದ್ಯೋಗದ ಪ್ರಾಯೋಜಕರನ್ನು ಸಂಪರ್ಕಿಸಿ ಅವರು ಕೊನೆಯದಾಗಿ ಕೆಲಸಕ್ಕೆ ಹಾಜರಾಗಿದ್ದ ಸಮಯ, ಕೊನೆಯದಾಗಿ ಕಾಣಿಸಿಕೊಂಡ ಸ್ಥಳ ಹಾಗೂ ಉದ್ಯೋಗದ ಸ್ಥಿತಿಗತಿಗಳ ಬಗ್ಗೆ ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ.

## ಮೀಸಲಾತಿ ಹೆಚ್ಚಳ: ಸುಪ್ರೀಂನಲ್ಲಿ ವಾದ ಮಂಡಿಸಲು ಸರ್ಕಾರ ನಿರ್ಧಾರ

**ಬೆಂಗಳೂರು, ಅ.26:** ಮೀಸಲಾತಿ ಪ್ರಮಾಣ ಹೆಚ್ಚಿಸುವ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸಲು ಸರ್ಕಾರ ನಿರ್ಧರಿಸಿದೆ ಎಂದು ಸಚಿವ ಮುನಿಯಪ್ಪ ತಿಳಿಸಿದ್ದಾರೆ. ಬೆಂಗಳೂರಿನ ಶಾಸಕರ ಭವನದಲ್ಲಿ ಮಾತನಾಡಿದ ಅವರು, ಹಿಂದಿನ ಸರ್ಕಾರದ ಅವಧಿಯಲ್ಲಿ 17 ಮತ್ತು 7ರಷ್ಟು ಮೀಸಲಾತಿ ಕುರಿತ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿತ್ತು. ಆದರೆ, ಅದು ಪೂರ್ಣಗೊಂಡಿಲ್ಲ. ಮೀಸಲಾತಿ ಪ್ರಮಾಣ ಶೇ.50ರ ಮಿತಿಯನ್ನು ಮೀರಬಾರದು ಎಂಬುದು ಸುಪ್ರೀಂ ಕೋರ್ಟ್‌ನ ನಿಲುವಾಗಿದೆ. ಈ ಹಿನ್ನೆಲೆಯಲ್ಲಿ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಕುರಿತು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ದೇಶದ ಹಲವು ರಾಜ್ಯಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕದಲ್ಲಿಯೂ ಜನಸಂಖ್ಯೆಯ ಆಧಾರದಲ್ಲಿ ಮೀಸಲಾತಿ ಜಾರಿಗೊಳಿಸುವಂತೆ ನ್ಯಾಯಾಲಯದಲ್ಲಿ ಮನವಿ ಮಾಡಲಾಗುವುದು. ರಾಜ್ಯದಲ್ಲಿ ಈ ಕ್ರಮವನ್ನು ಜಾರಿಗೊಳಿಸುವ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.



**ದೇಶದ ಕೆಲವ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಜಾರಿಗೆ ಮನವಿ: ಸಚಿವ ಕೆ.ಎಚ್. ಮುನಿಯಪ್ಪ**

### ನೇಮಕಾತಿಗೆ ಅಡ್ಡಿಯಾಗದಂತೆ ಕ್ರಮ

ಮೀಸಲಾತಿ ವಿಚಾರದಿಂದ ಸರ್ಕಾರಿ ನೇಮಕಾತಿ ಪ್ರಕ್ರಿಯೆಗೆ ಅಡ್ಡಿಯಾಗುತ್ತಿರುವ ಕುರಿತು ಪ್ರತಿಕ್ರಿಯಿಸಿದ ಮುನಿಯಪ್ಪ, ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರು. ಮೀಸಲಾತಿ ಶೇ.50ರ ಮಿತಿಯನ್ನು ಮೀರಬಾರದು ಎಂಬುದು ಒಂದು ವಾದವಾದರೆ, ರಾಜ್ಯದಲ್ಲಿ ಶೇ.17 ಮತ್ತು ಶೇ.7ರ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರ ತನ್ನ ನಿಲುವನ್ನು ನ್ಯಾಯಾಲಯದಲ್ಲಿ ಮಂಡಿಸಬೇಕಿದೆ. ಈ ಹಿಂದೆ ಜಾರಿಯಲ್ಲಿದ್ದ ಶೇ.15 ಮತ್ತು ಶೇ.3ರ ಮೀಸಲಾತಿಯನ್ನಾದರೂ ಅನುಷ್ಠಾನಗೊಳಿಸಬೇಕು. ನಿರಂತರವಾಗಿ ತಕರಾರುಗಳನ್ನು ಮುಂದುವರಿಸಿಕೊಂಡು ಹೋದರೆ ಯಾವುದೇ ಪ್ರಗತಿ ಸಾಧ್ಯವಿಲ್ಲ ಎಂದು ಕೆ.ಎಚ್. ಮುನಿಯಪ್ಪ ಅಭಿಪ್ರಾಯಪಟ್ಟರು.

### ಕನ್ನಡಿಗರಿಗೆ ಉದ್ಯೋಗ ನಿರಾಕರಣೆ ಬಗ್ಗೆ ವಿಚಾರಣೆ

ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನಿರಾಕರಿಸಲಾಗುತ್ತಿದೆ ಎಂಬ ಆರೋಪದ ಕುರಿತು ಮಾತನಾಡಿದ ಸಚಿವ ಮುನಿಯಪ್ಪ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಬಗ್ಗೆ ವಿಚಾರಣೆ ನಡೆಸಿರುವುದಾಗಿ ತಿಳಿಸಿದರು. ಜಿಲ್ಲೆಯ ವಿವಿಧ ಕಂಪನಿಗಳಲ್ಲಿ ಕನ್ನಡಿಗರು ಶೇ.75ರಷ್ಟು ಉದ್ಯೋಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲಿಯಾದರೂ ಕನ್ನಡಿಗರಿಗೆ ಉದ್ಯೋಗಾವಕಾಶ ನಿರಾಕರಿಸುತ್ತಿರುವುದು ಕಂಡುಬಂದರೆ, ತಕ್ಷಣವೇ ಸಂಬಂಧಪಟ್ಟ ಕಂಪನಿಗಳ ಪ್ರತಿನಿಧಿಗಳನ್ನು ಕರೆದು ಚರ್ಚೆ ನಡೆಸುವುದಾಗಿ ಹೇಳಿದರು.ಅಭಿವೃದ್ಧಿ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು. ಆಯಾ ಜಿಲ್ಲೆಗಳ ಸ್ಥಳೀಯ ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು. ತಮ್ಮ ಜಿಲ್ಲೆಯಲ್ಲಿ ಈ ಕ್ರಮವನ್ನು ಅನುಸರಿಸಲಾಗುತ್ತಿದೆ ಎಂದು ಮುನಿಯಪ್ಪ ತಿಳಿಸಿದರು.

# ಪ್ರಧಾನಿ ಮೋದಿ ಬಗ್ಗೆ ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

## ವಿಧಾನಸೌಧ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ನಾಯಕರನ್ನು ವಶಕ್ಕೆ ಪಡೆದ ಪೋಲೀಸರು





ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣ ಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ಲೆಹರ್ ಸಿಂಗ್, ಶಾಸಕರಾದ ಸುರೇಶ್ ಕುಮಾರ್, ಡಾ ಅಶ್ವಥ್ ನಾರಾಯಣ, ಸಿ ಕೆ ರಾಮಮೂರ್ತಿ, ರವಿ ಸುಬ್ರಹ್ಮಣ್ಯ, ಕೇಶವ ಪ್ರಸಾದ್ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಬೆಂಗಳೂರು, ಅ.26: ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿವಾದಾತ್ಮಕ ಹೇಳಿಕೆ ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿ ನಾಯಕರು ಸೋಮವಾರ ಪ್ರತಿಭಟನೆ ನಡೆಸಿದರು. ದೇಶದ ಜನರ ಬಳಿ ಖರ್ಗೆ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಖರ್ಗೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ತೆರಳುತ್ತಿದ್ದ ಬಿಜೆಪಿ ನಾಯಕರನ್ನು ಪೊಲೀಸರು ತಡೆದಿದ್ದು, ಬ್ಯಾರಿಕೇಡ್ ಹತ್ತಿ ಮುನ್ನುಗ್ಗಲು ನಾಯಕರು ಯತ್ನಿಸಿದ ಕಾರಣ ಪ್ರತಿಪಕ್ಷ ನಾಯಕರಾದ ಅಶೋಕ್, ಛಲವಾದ ನಾರಾಯಣಸ್ವಾಮಿ, ಶಾಸಕರಾದ ಎನ್. ರವಿಕುಮಾರ್, ಸಿ.ಕೆ. ರಾಮಮೂರ್ತಿ, ಡಾ. ಅಶ್ವಥ್ ನಾರಾಯಣ ಸೇರಿದಂತೆ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಪೊಲೀಸರು ವಶಕ್ಕೆ ಪಡೆದ ಪ್ರಸಂಗ ನಡೆದಿದೆ.

ಖರ್ಗೆ ಹೇಳಿಕೆ ವಿರುದ್ಧ ಇಡೀ ದೇಶದಲ್ಲಿ ಬಿಜೆಪಿ ತಿರುಗಿ ಬಿದ್ದಿದೆ. ಮಲ್ಲಿಕಾರ್ಜುನ ಖರ್ಗೆ ಗೌರವಾನ್ವಿತ ವ್ಯಕ್ತಿ, ಆದರೆ, ದೆಹಲಿಗೆ ಹೋದ ಮೇಲೆ ಕೆಟ್ಟ ಪರಂಪರೆ ಶುರು ಮಾಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಯಾರ ಓಲೈಕೆಗೆ ಇಳಿದಿದ್ದಾರೆ ಈ ಮೊದಲು ಪ್ರಧಾನಿ ಮೋದಿಯನ್ನು ವಿಷ ಸರ್ಪ ಅಂದರು. ಕೆಟ್ಟ ಪದ ಬಳಸಿದರು, ಅವರ ತಾಯಿಗೂ ನಿಂದಿಸಿದರು. ಈಗ ಮೋದಿಯವರ ತಂದೆ ಬಗ್ಗೆ ಖರ್ಗೆ ಮಾತನಾಡಿದ್ದಾರೆ ಎಂದು ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

### ಕಾಂಗ್ರೆಸ್ ಪಕ್ಷದ ಅಧಃಪತನದ ಪರಮಾವಧಿ: ಎಚ್.ಡಿ.ಕುಮಾರಸ್ವಾಮಿ

ಪ್ರಧಾನಿ ಮೋದಿ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಅವಹೇಳನಕಾರಿ. ರಾಜಕೀಯ ಶಿಷ್ಟಾಚಾರದ ಸ್ಪಷ್ಟ ಉಲ್ಲಂಘನೆ, ಮಾನವೀಯತೆಯ ಅಣಕವಾಗಿದೆ. ಇದು ಖರ್ಗೆ ಅವರಲ್ಲಿ ಅಡಗಿರುವ ನಿಗೂಢ ಕ್ರೂರ ಮನಃಸ್ಥಿತಿಯ ಪ್ರತೀಕ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕೂಡ ಆರೋಪಿಸಿದ್ದಾರೆ. ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ ಎಂದು ಪುರಂದರದಾಸರು ಸುಮ್ಮನೆ ಹೇಳಿದ್ದಲ್ಲ. ಬಹುಶಃ ಇಂಥ ನಾಲಿಗೆಗಳನ್ನು ತಿದ್ದಬೇಕೆಂಬ ಉದ್ದೇಶದಿಂದಲೇ ಹೇಳಿರಬೇಕು. ಪ್ರಧಾನಿಗಳ ತಂದೆಯನ್ನು ಖರ್ಗೆ ರಾಜಕೀಯವಾಗಿ ಟಾರ್ಗೆಟ್ ಮಾಡಿದ್ದಾರೆ. ಖರ್ಗೆ ಅವರ ಹೇಳಿಕೆಯನ್ನು ಸಹಿಸಲು ಸಾಧ್ಯವಿಲ್ಲ. ಸಾರ್ವಜನಿಕ ಜೀವನದಲ್ಲಿ ಸುದೀರ್ಘ ಹಿರಿತನವಿದ್ದರೂ ಮಾತಿನಲ್ಲಿ ಸಣ್ಣತನ ತೋರಿದ್ದಾರೆ. ಅವರ ಈ ಸಣ್ಣತನ ಕ್ಷಮಾರ್ಹವಲ್ಲ. ಅವರ ವರ್ತನೆ ಕೇವಲ ಹತಾಶೆಯಷ್ಟೇ ಅಲ್ಲ, ನಾಚಿಕೆಗೇಡಿತನದ್ದು. ಕಾಂಗ್ರೆಸ್ ಪಕ್ಷದ ಅಧಃಪತನದ ಪರಮಾವಧಿ ಇದು ಎಂದವರು ಟೀಕಿಸಿದ್ದಾರೆ.

# ಸಿದ್ದರಾಮಯ್ಯ ಒಂಟಿಯಲ್ಲ, ನಾವೆಲ್ಲ ಅವರೊಂದಿಗಿದ್ದೇವೆ: ಡಾ.ಪರಮೇಶ್ವರ್

ಬೆಂಗಳೂರು, ಅ.26 ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂಟಿಯಾಗುವ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಅವರೊಂದಿಗಿದ್ದೇವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ನವೆಂಬರ್ 1ರಂದು ದೆಹಲಿಯಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಹಿನ್ನೆಲೆಯಲ್ಲಿ, ಅಂದು ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಅವರು, ಭೇಟಿಯ ವೇಳೆ ಏನು ಚರ್ಚೆಯಾಗಲಿದೆ ಎಂಬುದು ತಿಳಿದಿಲ್ಲ. ಅಲ್ಲಿಗೆ ಹೋದ ಬಳಿಕ ನಡೆಯುವ ಮಾತುಕತೆಗಳ ಬಗ್ಗೆ ಮಾಹಿತಿ ಲಭ್ಯವಾಗಬಹುದು. ಸಿದ್ದರಾಮಯ್ಯ ಒಂಟಿಯಾಗಿದ್ದಾರೆ ಎಂಬ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಅವರ ಬೆಂಬಲಕ್ಕೆ ಇದ್ದೇವೆ ಎಂದು ಸ್ಪಷ್ಟಪಡಿಸಿದರು.

**ಬರ ಪರಿಹಾರ ಬಿಡುಗಡೆಗೆ ಆದೇಶ**

ರೈತರಿಗೆ 2,500 ಬರ ಪರಿಹಾರ ಬಿಡುಗಡೆ ಮಾಡುವ ವಿಚಾರವಾಗಿ ಮಾತನಾಡಿದ ಪರಮೇಶ್ವರ್, ಪರಿಹಾರದ ಹಣ ಬಿಡುಗಡೆಗೆ ತಾವು ಕೇವಲ ಒತ್ತಾಯ ಮಾಡುವುದಿಲ್ಲ, ಬದಲಿಗೆ ಆದೇಶ ಮಾಡುತ್ತೇನೆ. ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ಒದಗಿಸುವ ವಿಚಾರದಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

### ರಾಹುಲ್ ಭೇಟಿಗೆ ಸಿದ್ದರಾಮಯ್ಯ ನಿರ್ಧಾರ

ಈ ಸ್ಟಿಂಗ್ ವಿವಾದವು ಕಾವು ಪಡೆದುಕೊಂಡಿರುವ ಬೆನ್ನಲ್ಲೇ, ಸಿದ್ದರಾಮಯ್ಯ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲು ನಿರ್ಧರಿಸಿದ್ದಾರೆ. ನವೆಂಬರ್ 2 ರಂದು ಭೇಟಿಗೆ ಸಮಯ ಕೋರಿದ್ದು, ಈ ವೇಳೆ ರಾಜ್ಯ ರಾಜಕೀಯ ವಿದ್ಯಮಾನಗಳು ಮತ್ತು ತಮ್ಮ ವಿರುದ್ಧ ನಡೆದಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಷಡ್ಯಂತ್ರದ ಕುರಿತು ವಿಸ್ತೃತವಾಗಿ ಚರ್ಚಿಸಲಿದ್ದಾರೆ ಎನ್ನಲಾಗಿದೆ.

# ಅಡುಗೆ ಮಾಡಿದವರನ್ನು ಬಿಟ್ಟು ಊಟ ಬಡಿಸಿದವರಿಗಾಗಿ ಹುಡುಕಾಟ: ಅಶೋಕ್

**ಬೆಂಗಳೂರು, ಅ.26:** ಸ್ಟಿಂಗ್ ವಿಚಾರವಾಗಿ ಅಡುಗೆ ಮಾಡಿದವರನ್ನು ಬಿಟ್ಟು ಊಟ ಬಡಿಸಿದವರನ್ನು ಹುಡುಕ್ತಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆಸಿದರು.ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅನ್ನ, ಜಿಲೇಬಿ ಹಾಕಿದವರ ಬಗ್ಗೆ ತನಿಖೆ ನಡೆಯುತ್ತಿದೆ. ಸ್ಟಿಂಗ್ ಮಾಡಿದವರು ಯಾರು ಅಂತ ತನಿಖೆ ನಡೆಯುತ್ತಿಲ್ಲ. ಅದರ ಬದಲು ಅಪ್‌ಲೋಡ್ ಮಾಡಿದ್ದು ಯಾರು, ಹಂಚಿದವರು ಯಾರು ಎಂದು ಹುಡುಕುತ್ತಿದ್ದಾರೆ. ಒಂದು ತಿಂಗಳ ನಂತರ ಏನೂ ಇಲ್ಲ ಅಂತ ತನಿಖಾ ವರದಿಯಲ್ಲಿ ಹೇಳುತ್ತಾರೆ. ಹೈಕಮಾಂಡ್‌ನಿಂದಲೂ ಕೇಸ್ ಮುಚ್ಚಿ ಹಾಕಿ ಅಂತ ಆದೇಶ ಬಂದಿದೆ. ವೇಣುಗೋಪಾಲ್ ಅವರು ಈ ಆದೇಶ ಮಾಡಿದ್ದಾರಂತೆ. ನಮಗೆ ಸ್ಟಿಂಗ್ ಬಗ್ಗೆ ಇವರ ತನಿಖೆ ಮೇಲೆ ನಂಬಿಕೆ ಇಲ್ಲ. ಇದರ ತನಿಖೆಯನ್ನು ನ್ಯಾಯಾಂಗ ತನಿಖೆ ಅಥವಾ ಸಿಬಿಐಗೆ ಕೊಟ್ಟರೆ ಮಾತ್ರ ಸತ್ಯ ಹೊರಗೆ ಬರುತ್ತದೆ ಎಂದು ಹೇಳಿದರು. ಕನ್ನಡಿಗರಿಗೆ ಉದ್ಯೋಗ ಇಲ್ಲ ಎಂಬ ಕನ್ನಡಿಗ ಯುವತಿ ಅಳಲು ತೋಡಿಕೊಂಡ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿ, ಡಿಕೆಶಿ ಆಡಳಿತ ಹೇಗಿದೆಯೋ ಹಾಗೇ ಕಂಪನಿಗಳ ವರ್ತನೆ ಇದೆ. ಖಾಸಗಿ ಕಂಪನಿಗಳನ್ನು ಕರೆದು ಸಿಎಂ ಮಾತಾಡಬೇಕಿತ್ತು. ಏನೂ ಮಾಡದೇ ಪೇಪರ್ ಸ್ಟೇಟ್‌ಮೆಂಟ್ ಕೊಡೋದು ಸರಿಯಲ್ಲ. ಕನ್ನಡಿಗರಿಗೆ ಅನ್ಯಾಯ ಆಗುತ್ತಿದ್ದರೂ ಸುಮ್ಮನೆ ಇದ್ದಾರೆ. ಆ ಕಂಪನಿಗಳನ್ನು ಕರೆದು ಮಾತಾಡಿ, ಕನ್ನಡಿಗರಿಗೆ ಕೆಲಸ ಸಿಗುವಂತೆ ಮಾಡಿ. ಬೇಕಾದರೆ ನಾವೇ ಖಾಸಗಿ ಕಂಪನಿಗಳ ಜತೆ ಸಭೆ ಮಾಡುತ್ತೇವೆ ಎಂದು ಟೀಕಿಸಿದರು.

# ಅಭಿವೃದ್ಧಿ ಕಾಮಗಾರಿಗಳನ್ನು ಸಮನ್ವಯದಿಂದ ಕೈಗೊಳ್ಳಿ: ಸಚಿವ ಕೃಷ್ಣ ಬೈರೇಗೌಡ

**ಬೆಂಗಳೂರು,ಅ.26:** ಬೆಂಗಳೂರು ನಗರಾಭಿವೃದ್ಧಿ ಹಾಗೂ ನಗರದಲ್ಲಿನ ಸಂಚಾರ ದಟ್ಟಣೆ ನಿವಾರಣೆ ಸೇರಿ ವಿವಿಧ ಪ್ರಮುಖ ವಿಚಾರಗಳಿಗೆ ಸಂಬಂಧಿಸಿದಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡಿ, ಸಂಚಾರ ದಟ್ಟಣೆ ನಿವಾರಣೆಗೆ ಕ್ರಮವಹಿಸಲು, ಒಳಚರಂಡಿ ವ್ಯವಸ್ಥೆ ಸುಧಾರಿಸಿ, ಪಾದಚಾರಿ ಮಾರ್ಗಗಳ ವಿಸ್ತರಣೆಗೆ ಯೋಜನೆ ರೂಪಿಸುವುದು, ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸುವುದು ಹಾಗೂ ನಗರದ ಪ್ರಮುಖ ಜಂಕ್ಷನ್‌ಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ, ರಸ್ತೆ ಕಾಮಗಾರಿಗಳನ್ನು ಸಮನ್ವಯದಿಂದ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆಯ ಜಂಕ್ಷನ್‌ನಿಂದ ಗೆದ್ದಲಹಳ್ಳಿವರೆಗಿನ ರಸ್ತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದ ಸಚಿವರು, ರಸ್ತೆ ಅಭಿವೃದ್ಧಿಯ ಜೊತೆಗೆ ಒಳಚರಂಡಿ ವ್ಯವಸ್ಥೆ, ಪಾದಚಾರಿ ಮಾರ್ಗಗಳು ಹಾಗೂ ಸುಗಮ ವಾಹನ ಸಂಚಾರಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಹಾಗೂ ಬಾಕಿ ಕಾಮಗಾರಿಗಳನ್ನು ಯೋಜಿತ ರೀತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆಯಲ್ಲಿನ ಒಳಚರಂಡಿ ವ್ಯವಸ್ಥೆಯನ್ನು ಪರಿಶೀಲಿಸಿ, ಒಳಚರಂಡಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಮಳೆನೀರು ಸರಾಗವಾಗಿ ಹರಿದುಹೋಗಲು ವ್ಯವಸ್ಥೆ ಕಲ್ಪಿಸಿ, ನೀರು ನಿಲುಗಡೆಯಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ರಸ್ತೆ ಅಭಿವೃದ್ಧಿ ಕಾಮಗಾರಿಗಳೊಂದಿಗೆ ಒಳಚರಂಡಿ ವ್ಯವಸ್ಥೆಯನ್ನೂ ಸಮಗ್ರವಾಗಿ ಯೋಜಿಸಿ, ಅಗತ್ಯವಿರುವ ಕಡೆಗಳಲ್ಲಿ ದುರಸ್ತಿ ಹಾಗೂ ಸುಧಾರಣಾ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ.



**ಜಂಕ್ಷನ್‌ಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ**

ಮುಖ್ಯ ರಸ್ತೆಯ ಜಂಕ್ಷನ್‌ಗಳಲ್ಲಿ ವಾಹನ ಸಂಚಾರ ಸುಗಮಗೊಳಿಸಲು ಸ್ಥಳೀಯ ಪರಿಸ್ಥಿತಿ ಹಾಗೂ ಸಂಚಾರದ ಪ್ರಮಾಣವನ್ನು ಆಧರಿಸಿ ವೈಜ್ಞಾನಿಕ ಅಭಿವೃದ್ಧಿ ಯೋಜನೆ ರೂಪಿಸಬೇಕು. ಜಂಕ್ಷನ್‌ಗಳಲ್ಲಿನ ಸಂಚಾರ ಸಮಸ್ಯೆಗಳನ್ನು ಗುರುತಿಸಿ, ರಸ್ತೆ ವಿನ್ಯಾಸ ಸುಧಾರಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು. ಪ್ರತಿಯೊಂದು ಜಂಕ್ಷನ್‌ನ ಸಮಸ್ಯೆಗಳಿಗೆ ಅನುಗುಣವಾಗಿ ಸೂಕ್ತ ಪರಿಹಾರ ರೂಪಿಸಿ, ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

**ಭೂಸ್ವಾಧೀನ ಹಾಗೂ ಜಾಗ ಹಸ್ತಾಂತರ ಪ್ರಕ್ರಿಯೆ ತ್ವರಿತಗೊಳಿಸಿ**

ಬೆಂಗಳೂರು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯವಿರುವ ಜಾಗದ ಲಭ್ಯತೆ ಹಾಗೂ ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆ ಗಳ ಕುರಿತು ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಜಾಗ ಹಸ್ತಾಂತರಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ವಿಳಂಬವಿಲ್ಲದೆ ಪೂರ್ಣಗೊಳಿಸಲು ಅಗತ್ಯ ಸಮನ್ವಯ ಸಾಧಿಸಬೇಕು. ಭೂಸ್ವಾಧೀನ ಅಥವಾ ಜಾಗ ಹಸ್ತಾಂತರದ ಕಾರಣದಿಂದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಅಡಚಣೆಯಾಗದಂತೆ ಬಾಕಿ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ದೇಶನ ಸಚಿವರು ನೀಡಿದರು.

### ಗುಂಡಿ ಮುಚ್ಚಿದ 4 ತಿಂಗಳಲ್ಲೇ ಮತ್ತೆ ಗುಂಡಿಮಯವಾದ ರಸ್ತೆಗಳು!

ಬೆಂಗಳೂರಿನ ರಸ್ತೆಗಳ ಗುಂಡಿ ಮುಚ್ಚಲು 631 ಕೋಟಿ ಖರ್ಚು ಮಾಡಿದ್ದರೂ, ನಾಲ್ಕು ತಿಂಗಳಲ್ಲೇ ರಸ್ತೆಗಳು ಮತ್ತೆ ಗುಂಡಿಗಳಾಗಿವೆ. ಇದೇನಾ ಡಿ.ಕೆ. ಶಿವಕುಮಾರ್ ಅವರ ಬ್ರ್ಯಾಂಡ್ ಬೆಂಗಳೂರು ಎಂದು ಪ್ರತಿಪಕ್ಷ ನಾಯಕ ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸಿಎಂ ಶಿವಕುಮಾರ್ ಅವರೇ, ಇದೇನು ಜನರ ಅನುಕೂಲಕ್ಕಾಗಿ ರಸ್ತೆ ನಿರ್ಮಿಸಿದ್ದೀರೋ, ಅಥವಾ ಕಮಿಷನ್ ಹೊಡೆಯಲು ಗುತ್ತಿಗೆದಾರರ ಕೈಯಲ್ಲಿ ಕಳಪೆ ಕಾಮಗಾರಿ ಮಾಡಿಸಿದ್ದೀರೋ ಎಂದು ಪ್ರಶ್ನಿಸಿದ್ದಾರೆ. ಬೆಂಗಳೂರಿನಲ್ಲಿ 631 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಎಸ್.ಎಂ. ಕೃಷ್ಣ ದಶಪಥ ರಸ್ತೆಯ ದುಸ್ಥಿತಿ ನೋಡಿದರೆ, ನಿಮ್ಮ ಸರ್ಕಾರದ ಆಡಳಿತದಲ್ಲಿ ಅಭಿವೃದ್ಧಿ ಎಂದರೆ ಏನು, ಅಸಲಿಗೆ ಯಾರ ಅಭಿವೃದ್ಧಿ ಆಗುತ್ತಿದೆ ಎಂಬುದು ಅರ್ಥವಾಗುತ್ತದೆ ಎಂದು ವ್ಯಂಗ್ಯವಾಡಿದ್ದಾರೆ. ರಸ್ತೆ ಉದ್ಘಾಟನೆಯ ಸಂಭ್ರಮ, ಪ್ರಚಾರದ ಅಬ್ಬರ, ಬೆನ್ನನ್ನು ತಾವೇ ತಟ್ಟಿಕೊಂಡು ಮಾಡಿದ ಸ್ವಪ್ರಶಂಸೆ - ಎಲ್ಲವೂ ಮುಗಿದು ಕೇವಲ ನಾಲ್ಕು ತಿಂಗಳು ಕಳೆದಿವೆ. ಅಷ್ಟರಲ್ಲೇ ರಸ್ತೆಯಲ್ಲಿ ಗುಂಡಿಗಳು, ಡಾಂಬರು ಕಿತ್ತುಹೋಗುವ ಸ್ಥಿತಿ, ರಸ್ತೆಯ ಮೇಲೆ ನೀರು ನಿಲ್ಲುವ ಸಮಸ್ಯೆ ಎದುರಾಗಿದೆ. ಕೋಟ್ಯಂತರ ವೆಚ್ಚದಲ್ಲಿ ನಿರ್ಮಿಸಿದ ರಸ್ತೆಗಳ ಆಯುಸ್ಸು ಕೇವಲ ನಾಲ್ಕು ತಿಂಗಳೇ? ಇದು ಕೇವಲ ಕಳಪೆ ಕಾಮಗಾರಿಯ ಪ್ರಶ್ನೆಯಲ್ಲ. ಇದು ಸಾರ್ವಜನಿಕ ಹಣದ ಸದ್ಬಳಕೆ, ಕಾಮಗಾರಿಯ ಗುಣಮಟ್ಟ ಮತ್ತು ಹೊಣೆಗಾರಿಕೆಯ ಪ್ರಶ್ನೆಯಾಗಿದೆ. ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಧೈರ್ಯ ಇದೆಯಾ, ಜನರ ತೆರಿಗೆ ಹಣಕ್ಕೆ ಹೊಣೆಗಾರರು ಯಾರು, ಕಳಪೆ ಕಾಮಗಾರಿ ನಡೆಸಿದವರನ್ನು ರಕ್ಷಿಸುತ್ತಿರುವವರು ಯಾರು ಎಂದು ಪ್ರಶ್ನಿಸಿದ್ದಾರೆ.

# ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ವಾಲ್ಮೀಕಿ ಜಯಂತಿ



**ಬೆಂಗಳೂರು,ಅ.26:** ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್ ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕುಲಪತಿಗಳಾದ ಪ್ರೊ.ರಮೇಶ್.ಬಿ.ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಕುಲಸಚಿವರಾದ ಎ.ನವೀನ್ ಜೋಸೆಫ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಬಿ.ಕೆ.ಗಿರಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ಕೆ.ಶಿವಶಂಕರ್, ಪ್ರೊ.ಪಿ.ಆರ್.ಚೇತನ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮಹರ್ಷಿ ವಾಲ್ಮೀಕಿಯವರ ಮಹಾಕಾವ್ಯ ಭಾರತೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಮೂಲ ಆಧಾರ ಗ್ರಂಥವಾಗಿದೆ ಎಂದು ಕುಲಪತಿ ಪ್ರೊ.ರಮೇಶ್.ಬಿ. ಬಣ್ಣಿಸಿದರು.

ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪುರವರ "ಶ್ರೀ ರಾಮಾಯಣ ದರ್ಶನಂ" ಮೇರುಕೃತಿ ಮೂಲ ರಾಮಾಯಣಕ್ಕೆ ಪ್ರಗತಿಪರ ಚಿಂತನೆಯ ಹೊಸ ಆಯಾಮ ಒದಗಿಸಿದರೆಂದು ಅವರು ವಿಶ್ಲೇಷಿಸಿದರು.

ಲಿಖಿತ ಮತ್ತು ಮೌಖಿಕ ಮಾದರಿಗಳ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿರುವ ರಾಮಾಯಣ ಮಹಾಕಾವ್ಯ ಅನೇಕ ರೂಪಾಂತರಗಳನ್ನು ಪಡೆದುಕೊಂಡಿದೆ ಎಂದು ಅವರು ವಿವರಿಸಿದರು.

ಬುಡಕಟ್ಟು ಜನರ ಗೊಂಡ ರಾಮಾಯಣ, ಜನಪದ ರಾಮಾಯಣ ಮುಂತಾದ ಸ್ವರೂಪಗಳನ್ನು ಉಲ್ಲೇಖಿಸಿದ ಅವರು ಗ್ರಾಮೀಣ ಪ್ರದೇಶದಲ್ಲಿ ರಾಮಾಯಣದ ಕಥಾವಸ್ತು ನಾಟಕ ಕಲೆ ಆಳವಾಗಿ ಬೇರೂರಲು ಪ್ರೇರಕವಾಗಿದೆ ಎಂದೂ ಪ್ರತಿಪಾದಿಸಿದರು.

ಕನ್ನಡ ಅಧ್ಯಯನ ವಿಭಾಗದ ಉಪನ್ಯಾಸಕರಾದ ಡಾ. ಎಸ್.ಅಖ್ತರ್ ಮತ್ತು ಡಾ.ಗಂಗಪ್ಪ ವಾಲ್ಮೀಕಿಯವರ ರಾಮಾಯಣ ಮಹಾಕಾವ್ಯದ ಮಹತ್ವದ ಕುರಿತು ಮಾತನಾಡಿದರು. ಡಾ.ಎಸ್.ಎಂ.ಗೋಪಿ ಕಾರ್ಯಕ್ರಮ ನಿರೂಪಿಸಿದರು..

# ಹೆಬ್ಬಾಳ ಜಂಕ್ಷನ್-ಮೇಖ್ರಿ ಸರ್ಕಲ್ ಕಿರು ಸುರಂಗಮಾರ್ಗ ನಿರ್ಮಾಣಕ್ಕೆ ತಾತ್ಕಾಲಿಕ ತಡೆ

**ಬೆಂಗಳೂರು, ಅ.26:** ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ನಿರ್ಮಿಸಲು ಉದ್ದೇಶಿಸಲಾಗಿದ್ದ ಕಿರು ಸುರಂಗ ಮಾರ್ಗ ನಿರ್ಮಾಣಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಮರಗಳ ತೆರವು ಕಾರ್ಯಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ (ಎನ್‌ಜಿಟಿ) ದಕ್ಷಿಣ ವಲಯ ಪೀಠ ತಡೆ ನೀಡಿದೆ.

ಯೋಜನೆಗೆ ಸಂಬಂಧಿಸಿದ ಅರ್ಜಿ ಇತ್ಯರ್ಥವಾಗುವವರೆಗೆ ಯಾವುದೇ ಮರಗಳನ್ನು ತೆರವುಗೊಳಿಸದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳಿಗೆ ಸೂಚಿಸಿದೆ. ಇದರಿಂದ ಸುರಂಗ ಮಾರ್ಗ ಯೋಜನೆಗೆ ಪರಿಸರ ಸಂಬಂಧಿತ ಕಾನೂನು ಅಡ್ಡಿ ಎದುರಾದಂತಾಗಿದೆ.

ಚೆನ್ನೈನಲ್ಲಿರುವ ಎನ್‌ಜಿಟಿಯ ದಕ್ಷಿಣ ವಲಯ ಪೀಠವು ಅಕ್ಟೋಬರ್ 16ರಂದು ಮಂಗಳೂರಿನ ಪರಿಸರ ಸಂಘಟನೆಯೊಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಈ ಮಧ್ಯಂತರ ಆದೇಶ ನೀಡಿದೆ. ಪ್ರಕರಣದ ಮುಂದಿನ ವಿಚಾರಣೆ ಡಿಸೆಂಬರ್ 15ರಂದು ನಡೆಯಲಿದೆ.

ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ಸುಮಾರು 2.3 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಿಸಲು ಬಿಡಿಎ ಉದ್ದೇಶಿಸಿದ್ದು, ಇದಕ್ಕಾಗಿ 70ಕ್ಕೂ ಹೆಚ್ಚು ಪ್ರಭೇದಗಳಿಗೆ ಸೇರಿದ ಒಟ್ಟು 1,128 ಮರಗಳನ್ನು ತೆರವುಗೊಳಿಸುವ ಪ್ರಸ್ತಾವವಿದೆ. ಆದರೆ, ಇಷ್ಟೊಂದು ಸಂಖ್ಯೆಯ ಮರಗಳನ್ನು ಕಡಿಯುವುದರಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ಹೆಬ್ಬಾಳ ಕೆರೆ, ಅದರ ಸುತ್ತಮುತ್ತಲಿನ ಜೌಗು ಪ್ರದೇಶಗಳು, ಅಂತರ್ಜಲ ಮಟ್ಟ ಹಾಗೂ ನೈಸರ್ಗಿಕ ನೀರು ಹರಿಯುವ ವ್ಯವಸ್ಥೆಗೆ ಯೋಜನೆಯಿಂದ ಹಾನಿಯಾಗುವ ಸಾಧ್ಯತೆಯಿದೆ ಎಂದು ಅರ್ಜಿದಾರರು ನ್ಯಾಯಾಧಿಕರಣದ ಗಮನಕ್ಕೆ ತಂದಿದ್ದಾರೆ. ಪರಿಸರದ ಮೇಲಿನ ಪರಿಣಾಮಗಳನ್ನು ಸಮರ್ಪಕವಾಗಿ ಪರಿಶೀಲಿಸದೆ ಮರಗಳ ತೆರವಿಗೆ ಅವಕಾಶ ನೀಡಬಾರದು ಎಂಬುದು ಅರ್ಜಿದಾರರ ವಾದವಾಗಿದೆ.ಸುರಂಗ ಮಾರ್ಗ ನಿರ್ಮಾಣಕ್ಕಾಗಿ ಮರಗಳನ್ನು ಕಡಿಯುವ ಬಿಡಿಎ ಪ್ರಸ್ತಾವಕ್ಕೆ ಸಾರ್ವಜನಿಕರಿಂದಲೂ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಈವರೆಗೆ ಸುಮಾರು 1,600 ಆಕ್ಷೇಪಣೆಗಳು ಸಲ್ಲಿಕೆಯಾಗಿವೆ ಎಂದು ತಿಳಿದುಬಂದಿದೆ.

ಮರಗಳ ತೆರವು ವಿಚಾರವನ್ನು ಪರಿಶೀಲಿಸಲು ರಚಿಸಲಾಗಿರುವ ಮರ ತಜ್ಞರ ಸಮಿತಿಯು ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸಲಿದೆ. ಜತೆಗೆ, ಯೋಜನಾ ಪ್ರದೇಶದಲ್ಲಿ ಸ್ಥಳ ಪರಿಶೀಲನೆ ನಡೆಸಿ ಎಷ್ಟು ಮರಗಳನ್ನು ಉಳಿಸಬಹುದು, ಎಷ್ಟು ಮರಗಳನ್ನು ಸ್ಥಳಾಂತರಿಸಬಹುದು ಹಾಗೂ ಅನಿವಾರ್ಯವಾಗಿ ಎಷ್ಟು ಮರಗಳನ್ನು ಕಡಿಯಬೇಕಾಗಬಹುದು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ. ಒಂದೆಡೆ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸುರಂಗ ಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದ್ದರೆ, ಮತ್ತೊಂದೆಡೆ ಮರಗಳ ಸಂರಕ್ಷಣೆ ಮತ್ತು ಜಲಮೂಲಗಳ ರಕ್ಷಣೆಯ ಪ್ರಶ್ನೆಗಳು ಮುನ್ನೆಲೆಗೆ ಬಂದಿವೆ. ಎನ್‌ಜಿಟಿಯ ಮಧ್ಯಂತರ ಆದೇಶದಿಂದ ಸದ್ಯಕ್ಕೆ ಮರ ತೆರವು ಕಾರ್ಯಕ್ಕೆ ತಡೆ ಬಿದ್ದಿದ್ದು, ಮುಂದಿನ ವಿಚಾರಣೆಯಲ್ಲಿ ನ್ಯಾಯಾಧಿಕರಣ ಕೈಗೊಳ್ಳುವ ನಿರ್ಧಾರ ಮಹತ್ವ ಪಡೆದುಕೊಂಡಿದೆ.



ಸೋಮವಾರ ಬೆಂಗಳೂರಿನ ಜಗನ್ನಾಥ ಭವನದಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ಬಿಜೆಪಿ ನಾಯಕರು ವಾಲ್ಮೀಕಿ ಜಯಂತಿ ಆಚರಿಸಿದರು.

# ಗೃಹಜ್ಯೋತಿ ಫಲಾನುಭವಿಗಳ ಮನೆ ಸಮೀಕ್ಷೆಗೆ ಅ.31 ಕೊನೇ ದಿನ, ಗಡುವು ವಿಸ್ತರಣೆಯಿಲ್ಲ

**ಬೆಂಗಳೂರು, ಅ.26:** ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ-ಮನೆ ಸಮೀಕ್ಷೆಗೆ ಅಕ್ಟೋಬರ್ 31 ಕೊನೆಯ ದಿನವಾಗಿದ್ದು, ಗಡುವು ವಿಸ್ತರಣೆ ಮಾಡುವುದಿಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ. ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಹಾಗೂ ಮನೆಗೆ ಬೀಗ ಹಾಕಿದ್ದರಿಂದ ಸಮೀಕ್ಷೆಗೆ ಒಳಪಡದ ಗ್ರಾಹಕರು ನಿಗದಿತ ದಿನದೊಳಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಮನವಿ ಮಾಡಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಕಳೆದ ಮೂರೂವರೆ ತಿಂಗಳಿನಿಂದ ನಡೆಯುತ್ತಿರುವ ಸಮೀಕ್ಷೆ ಬಹುತೇಕ ಪೂರ್ಣಗೊಂಡಿದ್ದು, ಅಕ್ಟೋಬರ್ 22ರ ವೇಳೆಗೆ ಶೇ.98.49ರಷ್ಟು ಪ್ರಗತಿ ಸಾಧಿಸಲಾಗಿದೆ. ಒಟ್ಟು 74,29,773 ಫಲಾನುಭವಿಗಳ ಪೈಕಿ 73,17,687 ಗ್ರಾಹಕರ ಸಮೀಕ್ಷೆ ಪೂರ್ಣಗೊಂಡಿದೆ. ಉಳಿದ ಗ್ರಾಹಕರನ್ನು ತಲುಪಲು ಬೆಸ್ಕಾಂ ಪ್ರಯತ್ನಿಸುತ್ತಿದ್ದು, ಸಮೀಕ್ಷೆಯಿಂದ ಹೊರಗುಳಿದವರಿಗೆ ದಾಖಲೆ ಸಲ್ಲಿಸಲು ಅಕ್ಟೋಬರ್ 31ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಭಾಗ್ಯಜ್ಯೋತಿ, ಕುಟೀರಜ್ಯೋತಿ ಹಾಗೂ ಅಮೃತಜ್ಯೋತಿ ಯೋಜನೆಗಳ ಗ್ರಾಹಕರನ್ನೂ ಒಳಗೊಂಡಂತೆ ಸಮೀಕ್ಷೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿರುವುದು, ಮನೆ ಖಾಲಿ ಇರುವುದು ಹಾಗೂ ಇತರ ಕಾರಣಗಳಿಂದ ಗ್ರಾಹಕರು ಲಭ್ಯವಾಗದಿರುವುದು ಕಂಡುಬಂದಿದೆ.

ಇಂತಹ ಮನೆಗಳಿಗೆ ಬೆಸ್ಕಾಂ ಸಿಬ್ಬಂದಿ ಮೂರು ಬಾರಿ ಭೇಟಿ ನೀಡಿದ್ದಾರೆ. ಅಲ್ಲದೆ, ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸಂಬಂಧಪಟ್ಟ ಗ್ರಾಹಕರ ಮೊಬೈಲ್‌ಗಳಿಗೆ ಸಂದೇಶವನ್ನೂ ಕಳುಹಿಸಲಾಗಿದೆ. ಆದರೂ ಸಮೀಕ್ಷೆಗೆ ಒಳಪಡದ ಗ್ರಾಹಕರು ದಾಖಲೆ ಸಲ್ಲಿಸಲು ಮುಂದಾಗಬೇಕು ಎಂದು ಇಲಾಖೆ ಸೂಚಿಸಿದೆ.

ಉಪವಿಭಾಗ ಕಚೇರಿಗೆ ತೆರಳಿ ದಾಖಲೆ ಸಲ್ಲಿಸಿ: ಮನೆಗೆ ಬೀಗ ಹಾಕಿದ್ದ ಅಥವಾ ಸಮೀಕ್ಷೆ ವೇಳೆ ಲಭ್ಯವಿರದ ಗ್ರಾಹಕರು ತಮ್ಮ ವ್ಯಾಪ್ತಿಯ ಬೆಸ್ಕಾಂ ಉಪವಿಭಾಗ ಕಚೇರಿಗೆ ಖುದ್ದಾಗಿ ತೆರಳಿ ಅಗತ್ಯ ದಾಖಲೆಗಳನ್ನು ಸಲ್ಲಿಸಬಹುದು. ರಾಜ್ಯ ಸರ್ಕಾರ ಈ ಅವಕಾಶ ಕಲ್ಪಿಸಿದ್ದು, ಅಕ್ಟೋಬರ್ 31ರೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಬೆಸ್ಕಾಂ ಮನವಿ ಮಾಡಿದೆ.

ಗಡುವಿನೊಳಗೆ ದಾಖಲೆ ಸಲ್ಲಿಸದಿದ್ದರೆ ಸಮೀಕ್ಷೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅವಕಾಶ ತಪ್ಪುವ ಸಾಧ್ಯತೆ ಇರುವುದರಿಂದ ಗ್ರಾಹಕರು ನಿರ್ಲಕ್ಷ್ಯ ವಹಿಸಬಾರದು. ಕೊನೆಯ ದಿನದವರೆಗೆ ಕಾಯದೆ ಆದಷ್ಟು ಬೇಗ ದಾಖಲೆ ಸಲ್ಲಿಸುವಂತೆ ಬೆಸ್ಕಾಂ ತಿಳಿಸಿದೆ.

# ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕಾನೂನಿನ ಅರಿವು ಶಿಕ್ಷಣ ಅತ್ಯಗತ್ಯ: ನಾಗಲಕ್ಷ್ಮೀ ಚೌಧರಿ ಪ್ರತಿಪಾದನೆ

**ಕಲಬುರಗಿ, ಅ. 26:** ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು, ಬಾಲ್ಯ ವಿವಾಹವನ್ನು ನಿರ್ಮೂಲನೆ ಮಾಡಲು ಮಕ್ಕಳಲ್ಲಿ ಮತ್ತು ಅವರ ಪೋಷಕರಲ್ಲಿ ಕಾನೂನಿನ ಅರಿವು ಹಾಗೂ ಶಿಕ್ಷಣದ ಮಹತ್ವ ಮೂಡಿಸುವುದು ಅಗತ್ಯ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಹೇಳಿದರು.


ಕಲಬುರಗಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ದೆಹಲಿಯ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ಹಾಗೂ ಸೇಂಟ್ ಮೇರಿಸ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಪೋಕ್ಸೊ ಕಾಯ್ದೆ ಮತ್ತು ಬಾಲ್ಯವಿವಾಹ ನಿಷೇಧ ಕಾನೂನಿನ ಕುರಿತು ಕಾನೂನು ನೆರವು ಹಾಗೂ ಅರಿವು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಸಂವಾದದಲ್ಲಿ ಮಾತನಾಡಿದರು.

ಕಲಬುರಗಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಜ್ಯ ಮಹಿಳಾ ಆಯೋಗ, ದೆಹಲಿಯ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ಹಾಗೂ ಸೇಂಟ್ ಮೇರಿಸ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಪೋಕ್ಸೊ ಕಾಯ್ದೆ ಮತ್ತು ಬಾಲ್ಯ ವಿವಾಹ ನಿಷೇಧ ಕಾನೂನಿನ ಕುರಿತು ಕಾನೂನು ನೆರವು ಹಾಗೂ ಅರಿವು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಇಂದಿಗೂ ನಡೆಯುತ್ತಿವೆ. ಇಂತಹ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಲು, ಅನ್ಯಾಯವನ್ನು ಸಹಿಸದೆ ಅದನ್ನು ಪ್ರಶ್ನಿಸಲು ಹೆಣ್ಣುಮಕ್ಕಳು ಧೈರ್ಯ ಬೆಳೆಸಿಕೊಳ್ಳಬೇಕು. ಇದಕ್ಕೆ ಶಿಕ್ಷಣದ ಜೊತೆಗೆ ಕಾನೂನಿನ ಅರಿವು ಕೂಡ ಅತ್ಯಂತ ಮುಖ್ಯ. ಪ್ರತಿಯೊಬ್ಬ ಮಗುವಿನ ಬದುಕಿನಲ್ಲಿ ಜ್ಞಾನ ಮತ್ತು ಅರಿವಿನ ದೀಪ ಬೆಳಗಬೇಕು. ಆಗ ಮಾತ್ರ ಮಕ್ಕಳು ತಮ್ಮ ಹಕ್ಕುಗಳನ್ನು ಅರಿತುಕೊಂಡು, ಸಂಕಷ್ಟದ ಸಂದರ್ಭಗಳಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಲಬುರಗಿ ಜಿಲ್ಲೆಯಲ್ಲಿ ಈ ವರ್ಷ 66 ಬಾಲ್ಯವಿವಾಹಗಳು ನಡೆದಿರುವುದು ಆತಂಕಕಾರಿ ಸಂಗತಿಯಾಗಿದೆ. ಬಡತನ, ಆರ್ಥಿಕ ಸಂಕಷ್ಟ ಹಾಗೂ ಹೆಣ್ಣುಮಕ್ಕಳು ದೊಡ್ಡವರಾಗಿದ್ದಾರೆ, ಬೇಗ ಮದುವೆ ಮಾಡಿಬಿಡೋಣ ಎಂಬ ಮನೋಭಾವ ಬಾಲ್ಯವಿವಾಹಕ್ಕೆ ಕಾರಣವಾಗುತ್ತವೆ. ಆದರೆ, ಮದುವೆಯೇ ಪರಿಹಾರವಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸಿ, ಉತ್ತಮ ಶಿಕ್ಷಣ ನೀಡುವ ಮೂಲಕ ಸ್ವಾವಲಂಬಿಗಳನ್ನಾಗಿ ಬೆಳೆಸಬೇಕು. ತಮ್ಮ ಬದುಕಿನ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವ ಶಕ್ತಿಯನ್ನು ಮಕ್ಕಳಲ್ಲಿ ಬೆಳೆಸಿದಾಗ ಮಾತ್ರ ನಿಜವಾದ ಸಬಲೀಕರಣ ಸಾಧ್ಯ ಎಂದು ಹೇಳಿದರು.

ಹದಿಹರೆಯದಲ್ಲಿ ಪ್ರೀತಿ, ಆಕರ್ಷಣೆ ಉಂಟಾಗುವುದು ಸಹಜ. ಆದರೆ, ಆ ವಯಸ್ಸಿನಲ್ಲಿ ತಮ್ಮ ನಿರ್ಧಾರಗಳ ಪರಿಣಾಮಗಳು ಹಾಗೂ ಭವಿಷ್ಯದ ಮೇಲೆ ಅವು ಬೀರುವ ಪ್ರಭಾವದ ಬಗ್ಗೆ ಸಂಪೂರ್ಣ ಅರಿವು ಇರುವುದಿಲ್ಲ. ಹಾಗಾಗಿ, ವಿದ್ಯಾರ್ಥಿಗಳು ತಮ್ಮ ವಯಸ್ಸು, ಶಿಕ್ಷಣ ಮತ್ತು ಭವಿಷ್ಯದ ಗುರಿಗಳಿಗೆ ಆದ್ಯತೆ ನೀಡಬೇಕು. ಭಾವನೆಗಳಿಗೆ ಒಳಗಾಗಿ ಶಿಕ್ಷಣದಿಂದ ದೂರವಾಗದೆ, ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಮಕ್ಕಳು ಪೋಕ್ಸೊ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾನೂನು ಹಾಗೂ ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ಯಾರಾದರೂ ದೌರ್ಜನ್ಯ ಎಸಗಿದರೆ ಅಥವಾ ಬಾಲ್ಯವಿವಾಹಕ್ಕೆ ಒತ್ತಾಯಿಸಿದರೆ ಮೌನವಾಗಿರದೆ ಪೋಷಕರು, ಶಿಕ್ಷಕರು ಹಾಗೂ ಅಧಿಕಾರಿಗಳ ಗಮನಕ್ಕೆ ತರಬೇಕು. ಕಾನೂನಿನ ಅರಿವು ಮಕ್ಕಳಿಗೆ ರಕ್ಷಣೆ ನೀಡುವುದರ ಜೊತೆಗೆ ಆತ್ಮವಿಶ್ವಾಸದಿಂದ ಬದುಕುವ ಶಕ್ತಿಯನ್ನೂ ನೀಡುತ್ತದೆ ಎಂದು ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದರು.

ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವುದು, ಅವರ ಶಿಕ್ಷಣವನ್ನು ಮುಂದುವರಿಸುವುದು ಹಾಗೂ ಬಾಲ್ಯವಿವಾಹ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಅವರು ಕರೆ ನೀಡಿದರು.

# ಇಎಸ್‌ಐಸಿ ಆಸ್ಪತ್ರೆ ಒಪಿಡಿ ಪ್ರಿಂಟರ್ ನಿಧಾನಗತಿ: ರೋಗಿಗಳಿಗೆ ಕಿರಿಕಿರಿ


ಕಲಬುರಗಿಯ ಇಎಸ್‌ಐಸಿ ಆಸ್ಪತ್ರೆಯ ಒಪಿಡಿ ವಿಭಾಗದಲ್ಲಿ ಚೀಟಿ ಪಡೆಯಲು ತಾಸುಗಟ್ಟಲೇ ಕಾದು ನಿಂತಿರುವ ರೋಗಿಗಳು ಮತ್ತು ಸಂಬಂಧಿಕರು.

**ಕಲಬುರಗಿ, ಅ. 26:** ನಗರದ ಸೇಡಂ ರಸ್ತೆಯಲ್ಲಿರುವ ಇಎಸ್‌ಐ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಬೃಹತ್ ಕಟ್ಟಡದಲ್ಲಿ ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್‌ಗಳ ಬಳಕೆಯಿಂದ ರೋಗಿಗಳು ತೊಂದರೆ ಅನುಭವಿಸುವಂತಾಗಿದೆ. ಒಪಿಡಿ ಚೀಟಿ ಪಡೆಯಲು ರೋಗಿಗಳು ಹಾಗೂ ಅವರ ಸಂಬಂಧಿಕರು ತಾಸುಗಟ್ಟಲೇ ಪಾಳಿಯಲ್ಲಿ ನಿಂತು ತೊಂದರೆ ಅನುಭವಿಸುತ್ತಿದ್ದಾರೆ.

> ಆಸ್ಪತ್ರೆಯಲ್ಲಿ ಬಳಸುತ್ತಿರುವ ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್‌ಗಳಿಂದ ರೋಗಿಗಳಿಗಾದ ತೊಂದರೆ ಆಗುತ್ತಿದ್ದಲ್ಲಿ ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಅಗತ್ಯ ಇದ್ದಲ್ಲಿ ಬದಲಾವಣೆ ಮಾಡಲಾಗುವುದು. ಇಂದೇ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ.
> – ಡಾ.ಧನಾಜಿ ಎಸ್.ಜಾಧವ್, ಇಎಸ್‌ಐ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಡೀನ್.

ಪ್ರತಿ ತಿಂಗಳು ಇಎಸ್‌ಐ ಆಸ್ಪತ್ರೆಯಲ್ಲಿ ಅಂದಾಜು 35 ಸಾವಿರಕ್ಕಿಂತ ಹೆಚ್ಚಿನ ರೋಗಿಗಳು ಒಪಿಡಿ ಹಾಗೂ ಒಳರೋಗಿಯಾಗಿ ವೈದ್ಯಕೀಯ ಸೇವೆ ಪಡೆಯುತ್ತಾರೆ. ಇಎಸ್‌ಐ ದಂತ ವಿಭಾಗಕ್ಕೂ ಇತ್ತೀಚೆಗೆ ಹೆಚ್ಚಿನ ರೋಗಿಗಳು ಭೇಟಿ ನೀಡುತ್ತಿದ್ದಾರೆ.

ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್‌ಗಳ ನಿಧಾನಗತಿಯ ಕೆಲಸದಿಂದ ಇಎಸ್‌ಐ ಕಾರ್ಡ್ ಹೊಂದಿದ ಮತ್ತು ಕಾರ್ಡ್ ಇಲ್ಲದ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಒಪಿಡಿ ಚೀಟಿ ಸಿಗುತ್ತಿಲ್ಲ. ಇಎಸ್‌ಐ ದಂತ ವಿಭಾಗದಲ್ಲಿಯೂ ಇದೇ ಸಮಸ್ಯೆ ಇದೆ. ಒಪಿಡಿ ಕೌಂಟರ್‌ನಲ್ಲಿ ರೋಗಿಯ ವಿವರ ಪಡೆದು ಪ್ರಿಂಟ್ ಕೊಟ್ಟರೆ ಅದು ಪ್ರಿಂಟ್ ಆಗಲು 40 ಸೆಕೆಂಡ್‌ಗಳಿಗಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದೆ. ಆಧುನಿಕ ಪ್ರಿಂಟರ್‌ಗಳಿದ್ದರೆ ಕೇವಲ 2–3 ಸೆಕೆಂಡ್‌ಗಳಲ್ಲಿ ಪ್ರಿಂಟ್ ಪಡೆಯಬಹುದು.

ಅಲ್ಲದೇ, ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್ ಮೂಲಕ ನೀಡಿದ ಒಪಿಡಿ ಚೀಟಿಯಲ್ಲಿ ರೋಗಿಗಳ ನೋಂದಣಿ ಸಂಖ್ಯೆ, ಹೆಸರು ಮತ್ತು ವಯಸ್ಸು ಇನ್ನಿತರ ವಿವರಗಳು ಸರಿಯಾಗಿ ಕಾಣಿಸುವುದಿಲ್ಲ ಎಂಬುದು ರೋಗಿಗಳ ಅಳಲು. ಹರಸಾಹಸ ಮಾಡಿ ಒಪಿಡಿ ಚೀಟಿಯನ್ನು ಪಡೆದ ಮೇಲೆ ವೈದ್ಯರ ಬಳಿ ಹೋದರೆ, ಅಲ್ಲಿ ಹೆಸರು ನಮೂದು ಮಾಡಿಕೊಳ್ಳುವ ಅಟೆಂಡರ್ ಅಥವಾ ಶುಶ್ರೂಷಕರು ನಿಮ್ಮ ಹೆಸರು ಸಹಿತ ಬೇರೆ ವಿವರಗಳು ಕಾಣಿಸುತ್ತಿಲ್ಲ ಎನ್ನುತ್ತಾರೆ. ಅಲ್ಲಿ ಮತ್ತೊಮ್ಮೆ ಹೆಸರು, ವಯಸ್ಸು ಹೇಳಬೇಕಾಗುತ್ತಿದೆ.

ವೈದ್ಯರು ಪರೀಕ್ಷಿಸಿದ ನಂತರ ಅವರು ಬರೆದ ಔಷಧಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡಬೇಕು. ಅವರು ಕೂಡ ಒಪಿಡಿ ಚೀಟಿಯಲ್ಲಿರುವ ಸಣ್ಣ ಮತ್ತು ಅಸ್ಪಷ್ಟ ಅಕ್ಷರಗಳಿಂದಾಗಿ ಸಮಸ್ಯೆ ಎದುರಿಸುತ್ತಾರೆ. ಬಳಿಕ ಔಷಧಾಲಯಕ್ಕೆ ಹೋದರೆ, ಅಲ್ಲಿರುವ ಫಾರ್ಮಾಸಿಸ್ಟ್, ಕಾರ್ಬನ್ ಕಾಪಿಯಲ್ಲಿ ವೈದ್ಯರು ಬರೆದ ಔಷಧಗಳು ಕಾಣಿಸುತ್ತಿಲ್ಲ ಎಂದು ಪೆನ್ನಿನಿಂದ ಬರೆದ ಒರಿಜಿನಲ್ ಕಾಪಿ ತೆಗೆದುಕೊಳ್ಳುತ್ತಾರೆ.

ಯಾವ ಸಮಯಕ್ಕೆ ಯಾವ ಮಾತ್ರೆ, ಟಾನಿಕ್ ಅಥವಾ ಇನ್ನಿತರ ಔಷಧಗಳನ್ನು ತೆಗೆದುಕೊಳ್ಳಬೇಕು ಎಂದು ಕೇಳಲು ರೋಗಿಗಳು ಮರಳಿ ಶುಶ್ರೂಷಕರ ಬಳಿ ತೆರಳಿದರೆ ಇನ್ನೊಂದು ಕಾಪಿಯಲ್ಲಿ ಸರಿಯಾಗಿ ಅಕ್ಷರಗಳು ಮೂಡದ ಕಾರಣ ಅವರೂ ಸಮಯ ತಿಳಿಸಲು ಹರಸಾಹಸ ಮಾಡಬೇಕಾಗುತ್ತದೆ. ಅವರು ಮತ್ತೊಮ್ಮೆ ವೈದ್ಯರಿಂದ ತಿಳಿದುಕೊಳ್ಳಬೇಕಾಗುತ್ತಿದೆ.

# ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಶಶಿಕುಮಾರ್ ಬದಲಾಯಿಸದಿದ್ದರೆ ಸುಪ್ರೀಂ ಮೊರೆ

**ಎಸ್‌ಐಟಿ ಮುಖ್ಯಸ್ಥರ ನೇಮಕಕ್ಕೆ ಸೌಜನ್ಯ ಪೋಷಕರ ಆಕ್ಷೇಪ: ದ.ಕ. ದೊಂದಿಗೆ ಆಡಳಿತಾತ್ಮಕ ಸಂಪರ್ಕವಿಲ್ಲದ ಅಧಿಕಾರಿ ನೇಮಕಕ್ಕೆ ಬೇಡಿಕೆ**

**ಮಂಗಳೂರು, ಅ.26:** ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗೆ ಸುಪ್ರೀಂ ಕೋರ್ಟ್ ಆದೇಶ ನೀಡಿದ ಬೆನ್ನಲ್ಲೇ ರಚನೆಯಾಗಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ನೇತೃತ್ವದ ವಿಚಾರ ಮತ್ತೆ ಚರ್ಚೆಗೆ ಬಂದಿದೆ. ಎಸ್‌ಐಟಿ ಮುಖ್ಯಸ್ಥರಾಗಿ ಐಪಿಎಸ್ ಅಧಿಕಾರಿ ಎನ್.ಶಶಿಕುಮಾರ್ ಅವರನ್ನು ನೇಮಕ ಮಾಡಿರುವುದಕ್ಕೆ ಸೌಜನ್ಯಳ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ರಾಜ್ಯ ಸರ್ಕಾರ ಎಸ್‌ಐಟಿ ಮುಖ್ಯಸ್ಥರನ್ನು ಬದಲಾಯಿಸದಿದ್ದರೆ, ಈ ವಿಚಾರವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಲು ಮುಂದಾಗಿದ್ದಾರೆ ಎಂದು ತಿಳಿದು ಬಂದಿದೆ.

ಎಸ್‌ಐಟಿ ಮುಖ್ಯಸ್ಥ ಶಶಿಕುಮಾರ್ ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮಂಗಳೂರು ಪೊಲೀಸ್ ಆಯುಕ್ತರಾಗಿಯೂ ಕಾರ್ಯನಿರ್ವಹಿಸಿದ್ದರು. ಈ ಹಿಂದಿನ ಸೇವಾ ಹಿನ್ನೆಲೆಯೇ ಸೌಜನ್ಯಳ ಪೋಷಕರ ಆತಂಕಕ್ಕೆ ಪ್ರಮುಖ ಕಾರಣವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆ ಕರ್ತವ್ಯ ನಿರ್ವಹಿಸಿರುವ ಅಧಿಕಾರಿಗಳ ಬದಲಿಗೆ, ಆ ಜಿಲ್ಲೆಯೊಂದಿಗೆ ಹಿಂದಿನ ಆಡಳಿತಾತ್ಮಕ ಸಂಪರ್ಕವಿಲ್ಲದ ಅಧಿಕಾರಿಗಳನ್ನು ನೇಮಿಸಬೇಕು ಎಂಬುದು ಕುಟುಂಬದ ಪ್ರಮುಖ ಬೇಡಿಕೆಯಾಗಿದೆ.

ಪರೋಕ್ಷವಾಗಿಯಾಗಲಿ, ಪ್ರತ್ಯಕ್ಷವಾಗಿಯಾಗಲಿ ಸಂಪರ್ಕ ಇರುವ ಸಾಧ್ಯತೆಯನ್ನು ಕುಟುಂಬದ ಬೆಂಬಲಿಗರು ಪ್ರಶ್ನಿಸುತ್ತಿದ್ದಾರೆ. ಸೌಜನ್ಯ ಪ್ರಕರಣದಲ್ಲಿ ಹಲವು ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಡುತ್ತಿರುವ ಕುಟುಂಬಕ್ಕೆ ವಿವಿಧ ಹೋರಾಟಗಾರರು ಹಾಗೂ ಸಾಮಾಜಿಕ ಕಾರ್ಯಕರ್ತರು ಬೆಂಬಲ ವ್ಯಕ್ತಪಡಿಸಿದ್ದಾರೆ. ಎಸ್‌ಐಟಿ ರಚನೆಯಾದ ಬಳಿಕವೂ ತಂಡದ ಸದಸ್ಯರ ನೇಮಕದ ಬಗ್ಗೆ ಆಕ್ಷೇಪಗಳು ವ್ಯಕ್ತವಾಗಿದ್ದು, ತನಿಖೆಯ ವಿಶ್ವಾಸಾರ್ಹತೆ ಕಾಪಾಡಲು ಅಧಿಕಾರಿಗಳ ಆಯ್ಕೆಯಲ್ಲಿ ಹೆಚ್ಚಿನ ಪಾರದರ್ಶಕತೆ ಇರಬೇಕೆಂಬ ಒತ್ತಾಯ ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ಸೌಜನ್ಯಳ ಪೋಷಕರೊಂದಿಗೆ ಕೈಜೋಡಿಸಿರುವ ಹೋರಾಟಗಾರರು, ಸರ್ಕಾರವು ಎಸ್‌ಐಟಿ ಮುಖ್ಯಸ್ಥರನ್ನು ಬದಲಾಯಿಸುವಂತೆ ಒತ್ತಡ ಹೇರುವ ಪ್ರಯತ್ನದಲ್ಲಿದ್ದಾರೆ ಎನ್ನಲಾಗಿದೆ. ಈಗ ಎಸ್‌ಐಟಿ ಮುಖ್ಯಸ್ಥರನ್ನು ಬದಲಾಯಿಸಬೇಕೆಂಬ ಬೇಡಿಕೆ ಸರ್ಕಾರದ ಮುಂದಿನ ನಿರ್ಧಾರಕ್ಕೆ ಸಂಬಂಧಿಸಿದ ಪ್ರಮುಖ ವಿಚಾರವಾಗಿದೆ. ಮತ್ತೊಂದೆಡೆ, ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮೂರು ತಿಂಗಳ ಗಡುವಿನೊಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವ ಹೊಣೆ ಎಸ್‌ಐಟಿಯ ಮೇಲಿದೆ. ಅಧಿಕಾರಿಗಳ ಬದಲಾವಣೆಯ ಬೇಡಿಕೆ ಮತ್ತು ತನಿಖೆಯ ಕಾಲಮಿತಿ ಎರಡನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ. ಸುಮಾರು 14 ವರ್ಷಗಳಿಂದ ಉತ್ತರ ಸಿಗದ ಸೌಜನ್ಯ ಪ್ರಕರಣದಲ್ಲಿ ಮರುತನಿಖೆಯ ಆದೇಶವು ಕುಟುಂಬದಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ. ಆದರೆ ತನಿಖೆ ಆರಂಭವಾಗಿರುವ ಹಂತದಲ್ಲೇ ಎಸ್‌ಐಟಿ ಮುಖ್ಯಸ್ಥರ ನೇಮಕದ ಕುರಿತು ಆಕ್ಷೇಪಗಳು ವ್ಯಕ್ತವಾಗಿರುವುದು ಹೊಸ ಚರ್ಚೆಗೆ ಕಾರಣವಾಗಿದೆ.

# ಮನ್‌ಕೀ ಬಾತ್‌ನಲ್ಲೇ ಸದ್ದು ಮಾಡಿದ ತೊಗರಿಬೇಳೆ, ಖಡಕ್ ರೊಟ್ಟಿ

**ಕಲಬುರಗಿ ಅಭಿವೃದ್ಧಿ ಬಗ್ಗೆ ಕೇಂದ್ರವೇ ಪುರಾವೆ ನೀಡಿದೆ: ಬಿಜೆಪಿ ನಾಯಕರ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ವ್ಯಂಗ್ಯ**



**ಕಲಬುರಗಿ, ಅ.26:** ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪದೇಪದೆ ಪ್ರಶ್ನೆ ಮಾಡುತ್ತಿದ್ದ ಪ್ರತಿಪಕ್ಷ ಬಿಜೆಪಿ ನಾಯಕರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ. ನನ್ನ ಕೆಲಸಗಳ ಬಗ್ಗೆ ಬಿಜೆಪಿಯವರು ಪ್ರಶ್ನೆ ಮಾಡುವುದಕ್ಕಿಂತ ಕೇಂದ್ರ ಸರ್ಕಾರವೇ ಪುರಾವೆಗಳನ್ನು ನೀಡುತ್ತಿದೆ ಎಂದಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲೇ ನಮ್ಮ ಕೆಲಸಗಳು ಸದ್ದು ಮಾಡಿವೆ ಎಂದು ವ್ಯಂಗ್ಯವಾಡಿದ್ದಾರೆ.

ಕಲಬುರಗಿ ತೊಗರಿಬೇಳೆ ಮತ್ತು ಖಡಕ್ ರೊಟ್ಟಿಗಳ ಬಗ್ಗೆ ಪ್ರಧಾನಿ ಮೋದಿ ಅವರು ಮನ್ ಕೀ ಬಾತ್‌ನಲ್ಲಿ ಪ್ರಸ್ತಾಪಿಸಿರುವುದನ್ನು ಪ್ರಿಯಾಂಕ್ ಖರ್ಗೆ ಉಲ್ಲೇಖಿಸಿದ್ದಾರೆ. ರೊಟ್ಟಿಗಳ ಬ್ರಾಂಡಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಯಿಂದ ಕಲಬುರಗಿ ರೊಟ್ಟಿಗಳಿಗೆ ಈಗ ಜಾಗತಿಕ ಮಾರುಕಟ್ಟೆ ಸಿಕ್ಕಿದೆ. ಅಲ್ಲದೆ, ಜಿಐ ಟ್ಯಾಗ್ ಪಡೆದಿರುವ ಕಲಬುರಗಿ ತೊಗರಿಯನ್ನು ಮಾಲ್ಡೀವ್ಸ್‌ಗೆ ರಫ್ತು ಮಾಡುತ್ತಿರುವ ಉಪಕ್ರಮವನ್ನೂ ಮೋದಿ ಪ್ರಸ್ತಾಪಿಸಿರುವುದಾಗಿ ಅವರು ತಿಳಿಸಿದ್ದಾರೆ.

ಜಿಲ್ಲೆಯ ತೊಗರಿ ಮಾರುಕಟ್ಟೆಯನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸಿದ್ದರಿಂದ ರೈತರಿಗೆ ಶೇ. 30ರಷ್ಟು ಹೆಚ್ಚು ಬೆಲೆ ಸಿಗುವಂತೆ ಮಾಡಲಾಗಿದೆ. ಇದರೊಂದಿಗೆ ಹೆಸರು, ತೊಗರಿ, ಉದ್ದು, ಹುರುಳಿ ಮುಂತಾದ ಬೆಳೆಗಳನ್ನು ಸ್ಥಳೀಯವಾಗಿ ಮೌಲ್ಯವರ್ಧನೆ ಮಾಡಿ ಎನರ್ಜಿ ಬಾರ್‌ಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುವ ವಿಶಿಷ್ಟ ಕಾರ್ಯಕ್ರಮವೂ ಜಾರಿಯಲ್ಲಿದೆ. ಕಲಬುರಗಿ ಪಲ್ಸ್, ಭೀಮಾ ಪಲ್ಸ್, ಖಡಕ್ ರೊಟ್ಟಿ ಹಾಗೂ ಕಮಲಾಪುರ ಕೆಂಪು ಬಾಳೆಯಂತಹ ರೈತರ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಗುರುತು ತಂದುಕೊಡುವ ಮೂಲಕ ರೈತರು ಮತ್ತು ಕಾರ್ಮಿಕರನ್ನು ಆರ್ಥಿಕವಾಗಿ ಸಬಲರನ್ನಾಗಿಸುವುದು ನಮ್ಮ ಉದ್ದೇಶ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಬಿಜೆಪಿಯವರು ನನ್ನನ್ನು ಪ್ರಶ್ನಿಸುವ ಮತ್ತು ಟೀಕಿಸುವ ಮೊದಲು ಪ್ರಧಾನಿ ಮೋದಿಯವರ ಮನ್ ಕೀ ಬಾತ್ ಕೇಳಲಿ, ಆ ಬಳಿಕ ತಮ್ಮ ಆತ್ಮಸಾಕ್ಷಿಯಿಂದ ಮಾತನಾಡಲಿ ಎಂದು ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

### ಶಿಸ್ತಿನಿಂದ ನಡೆದ ಆರ್‌ಎಸ್‌ಎಸ್ ಪಥಸಂಚಲನ

# ಸಂಘವೆಂದರೆ ಭಾರತೀಯರೆಲ್ಲ ಒಂದು ವಿಭಜನೆ ಸಲ್ಲ: ನರೇಂದ್ರ ಕರೆ

**ಕಲಬುರಗಿ, ಅ.26:** ಭಾರತೀಯರೆಂದರೆ ಅವಿಭಕ್ತ ಕುಟುಂಬ, ವಿಶ್ವ ಕುಟುಂಬ ಎಂಬುದು ನಮ್ಮ ಧ್ಯೇಯ. ಅಂತೆಯೇ ಕುಟುಂಬದಂತೆಯೇ ಸಹಜೀವನ ನಡೆಸುವುದು. ಇವೆಲ್ಲವೂ ಸೇರಿದಾಗಲೇ ಸಂಘ ಉದ್ಭವವಾಗುತ್ತದೆ. ಸಂಘವೆಂದರೆ ಪ್ರತ್ಯೇಕತೆಗೆ ಅವಕಶವಿಲ್ಲ. ಭಾರತೀಯರೆಲ್ಲ ಒಂದು. ಒಂದಾಗಿಸುವುದೇ ಸಂಘದ ಮೂಲ ಉದ್ದೇಶ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉತ್ತರ ಪ್ರಾಂತ ಪ್ರಚಾರಕ ನರೇಂದ್ರ ಅವರು ಹೇಳಿದರು.


ಕಲಬುರಗಿ ನಗರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಹಾಗೂ ವಿಜಯದಶಮಿ ಅಂಗವಾಗಿ ಶಾಂತಿಯುತ ಆಕರ್ಷಕ ಪಥಸಂಚಲನ ನಡೆಯಿತು.

ಸಂಘದ ಶತಮಾನೋತ್ಸವ ಮತ್ತು ವಿಜಯದಶಮಿ ಸಮಾರೋಪದ ಅಂಗವಾಗಿ ನಡೆದ ಗಣವೇಷಧಾರಿಗಳಿಂದ ನಗರದ ವಿವಿಧ ಬಡಾವಣೆಗಳ ಮೂಲಕ ಪಥಸಂಚಲನದ ನಂತರ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ನಡೆದ ಸಂಘದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಸಂಘದಲ್ಲಿ ಜಾತಿ ಬೇಧ ಇಲ್ಲವೇ ಇಲ್ಲ. ಎಲ್ಲರೂ ಒಂದಾಗಿ, ಒಗ್ಗಟ್ಟಾಗಿರುವುದು ಸಹಜೀವನ. ಅಂದರೆ ಎಲ್ಲರೂ ಒಂದು ಕುಟುಂಬದಂತೆ ಜೀವನ ನಡೆಸುವದು ಪ್ರತಿಯೊಬ್ಬ ಭಾರತೀಯನ ಧ್ಯೇಯವಾಗಿರಬೇಕು.

ಅನಾದಿ ಕಾಲದಿಂದಲೂ ಸಹಜೀವನ ಮತ್ತು ಅವಿಭಕ್ತ ಕುಟುಂಬ ಭಾರತವು ವಿಶ್ವಕ್ಕೆ ಮಾದರಿಯಾಗಿದೆ. ಇಂದಿನ ಆಧುನಿಕ ಜೀವನದಲ್ಲಿ ನಮ್ಮ ಪುರಾತನ ವ್ಯವಸ್ಥೆ ಬಿದ್ದುಹೋಗುತ್ತಿದೆ. ಇದರಿಂದಲೇ ಕುಟುಂಬಗಳ ಕಲಹ ಉಂಟಾಗಿ ಕುಟುಂಬಗಳು ಆರ್ಥಿಕ ಅಭದ್ರತೆಯಿಂದ ನರಳುವಂತೆ ಮಾಡಿದೆ. ಕುಟುಂಬ ಎಂದರೆ ದೇಶ, ಕುಟುಂಬ ನಷ್ಟ ಅನುಭವಿಸಿದರೆ ದೇಶವೂ ನಷ್ಟಕ್ಕೆ ಗುರಿಯಾಗುತ್ತದೆ ಎಂಬುದಮನ್ನು ಅರಿಯಬೇಕಿದೆ. ದೇಶವಿದ್ದರೆ ನಾವು, ದೇಶವೇ ಇಲ್ಲವಾದರೆ ನಾವೂ ಇಲ್ಲ, ನಮ್ಮ ಕುಟುಂಬವೂ ಇಲ್ಲ. ಇವೆಲ್ಲವುಗಳನ್ನೂ ರಕ್ಷಿಸಿಕೊಂಡು ಹೋಗಲು ಸಂಕಲ್ಪ ಮಾಡಬೇಕಿದೆ ಎಂದು ಕಿವಿಮಾತು ಹೇಳಿದರು.

**ಪಥಸಂಚಲನಕ್ಕೆ ಷರತ್ತುಗಳು:** ಪ್ರತಿ ವರ್ಷವೂ ವಿಜಯದಶಮಿಗೆ ಪಥಸಂಚಲನ ನಡೆಸುತ್ತ ಬಂದಿದ್ದೇವೆ. ಎಂದಿಗೂ ಯಾವುದೇ ವಿವಾದ ಕಲಹಗಳಿಗೆ ಅವಕಾಶವಿಲ್ಲದಂತೆ, ಯಾವುದೇ ಉದ್ರೇಕಕಾರಿ ಪ್ರಚೋದಿತ ಭಾಷಣಗಳಿಲ್ಲದೇ ಶಾಂತ ರೀತಿಯಿಂದ ಪೊಲೀಸರು ಸೂಚಿಸಿರುವ ಮಾರ್ಗದಲ್ಲೇ ಪಥಸಂಚಲನ ನಡೆಯುತ್ತ ಬಂದಿದೆ.

ಈಗಲೂ ಕೂಡ ನಗರ ಪೊಲೀಸ್ ಆಯುಕ್ತರ ಷರತ್ತುಬದ್ಧ ಅನುಮತಿಯೊಂದಿಗೆ ನಗರದಲ್ಲಿ ಆಕರ್ಷಕ ಪಥ ಸಂಚಲನ ಮಾಡಿದರು. ಸುಮಾರು ನಾಲ್ಕು ಕಿ.ಮೀ. ದೂರದವರೆಗೆ ಗಣವೇಷಧಾರಿ ಆರ್‌ಎಸ್‌ಎಸ್ ಕಾರ್ಯಕರ್ತರು ಶಿಸ್ತುಬದ್ಧವಾಗಿ ಪಥಸಂಚಲನದಲ್ಲಿ ಪಾಲ್ಗೊಂಡರು.

ನಗರದ ನೆಹರು ಗಂಜ್ ಪ್ರದೇಶದ ಜಿಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಿಂದ ಪ್ರಾರಂಭವಾದ ಪಥಸಂಚಲನವು ಮಿಜಗುರಿ ಕ್ರಾಸ್, ಚಡ್ಡಿ ಹೊಟೇಲ್, ಸರಾಫ್ ಬಜಾರ್, ಗಣೇಶ ಮಂದಿರ, ಸೂಪರ್ ಮಾರ್ಕೆಟ್, ಜಗತ್ ವೃತ್ತದ ಮೂಲಕ ಶ್ರೀ ಶರಣಬಸವೇಶ್ವರ ಕೆರೆಯ ಪಕ್ಕದಲ್ಲಿರುವ ಜಾತ್ರಾ ಮೈದಾನಕ್ಕೆ ಆಗಮಿಸಿ ಸಮಾವೇಶಗೊಂಡಿತು.

ಮಾರ್ಗ ಮಧ್ಯೆ ಅನೇಕ ಕಡೆಗಳಲ್ಲಿ ಮಹಿಳೆಯರು ಕಾರ್ಯಕರ್ತರಿಗೆ ಹೂಮಳೆಗರೆದರು. ಪಥ ಸಂಚಲನದ ನಂತರ ಬಹಿರಂಗ ವೇದಿಕೆಯ ಮೇಲೆ ಇದ್ದ ಆರ್‌ಎಸ್‌ಎಸ್ ಜಿಲ್ಲಾ ಸಂಘಸಂಚಾಲಕ ಅಶೋಕ್ ಪಾಟೀಲ್, ಅತಿಥಿ ವೆಂಕಟೇಶ್ ಗಿಲ್ಡಾ, ಉತ್ತರ ಪ್ರಾಂತ್ಯದ ನರೇಂದ್ರ ಅವರು ಮಾತನಾಡಿದರು. ಪಥ ಸಂಚಲನದಲ್ಲಿ ಮಾಜಿ ಸಂಸದ ಡಾ. ಉಮೇಶ್ ಜಾಧವ್, ಶಾಸಕರಾದ ಬಸವರಾಜ್ ಮತ್ತಿಮೂಡ್, ಡಾ. ಬಿ.ಜಿ. ಪಾಟೀಲ್, ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಚಂದು ಪಾಟೀಲ್, ಮುಖಂಡರಾದ ಮಹಾಜನ್, ಡಾ. ಅಂಬಾರಾಯ್ ಅಷ್ಟಗಿ ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು.

# ಬೆಳೆವಿಮೆ ಹಣ ಬಿಡುಗಡೆಗೆ ಆಗ್ರಹ: ಟೋಲ್‌ನಾಕಾ ಬಂದ್ ಮಾಡಿ ರೈತರಿಂದ ಪ್ರತಿಭಟನೆ

**ಕಲಬುರಗಿ, ಅ. 26:** ಜಿಲ್ಲೆಯಲ್ಲಿ ಅನಾವೃಷ್ಟಿಯಿಂದ ಅಪಾರ ಬೆಳೆ ಹಾನಿಯಾಗಿದ್ದು, ರೈತರಿಗೆ ಶೇ. 100ರಷ್ಟು ಬೆಳೆ ವಿಮೆ ಹಣ ಮಂಜೂರು ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತಸಂಘ (ಕೆಪಿಆರ್‌ಎಸ್)ದ ನೇತೃತ್ವದಲ್ಲಿ ರೈತರು ನಗರದ ಹೊರವಲಯದ ಸೇಡಂ ರಸ್ತೆಯಲ್ಲಿರುವ ಮಾಡಬೂಳ ಟೋಲ್‌ನಾಕಾ ಬಂದ್ ಮಾಡಿ ಧರಣಿ ನಡೆಸಿದರು.


ಕಲಬುರಗಿ ನಗರದ ಹೊರವಲಯದಲ್ಲಿರುವ ಸೇಡಂ ರಸ್ತೆಯ ಟೋಲ್ ನಾಕಾ ಬಂದ್ ಮಾಡಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು, ರೈತರಿಗೆ ಶೇ.100ರಷ್ಟು ಬೆಳವಿಮೆ ಹಣ ಬಿಡುಗಡೆಯೂ ಸೇರಿದಂತೆ ವಿವಿಧ ಬೆಡಿಕೆಗಳಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ತೊಗರಿಬೆಳೆ ಮೇಲೆ ಜಿಲ್ಲೆಯ ಆರ್ಥಿಕತೆ ನಿರ್ಧಾರವಾಗುತ್ತದೆ. ಆದರೆ, ಐದು ತಿಂಗಳಿಂದ ಮಳೆ ಬರದ ಕಾರಣ ತೀವ್ರ ಬರಗಾಲ ಆವರಿಸಿದ್ದು, ಬಿತ್ತಿದ್ದ ಅಲ್ಪಸ್ವಲ್ಪ ಬೆಳೆಯೂ ಒಣಗಿದೆ. ಇದರಿಂದ ರೈತರು ತತ್ತರಿಸಿ ಹೋಗಿದ್ದಾರೆ. ಸರ್ಕಾರ ತೊಗರಿ ಬೆಳೆಗಾರರಿಗೆ ಇಲ್ಲಿಯವರೆಗೆ ನಯಾಪೈಸೆ ಪರಿಹಾರ ನೀಡಿಲ್ಲ ಎಂದು ಧರಣಿ ನಿರತರು ಆಕ್ರೋಶ ವ್ಯಕ್ತಪಡಿಸಿದರು.

ಹಳ್ಳಕೊಳ್ಳ, ನಾಲಾ, ನದಿ, ಬಾವಿ, ಬೋರ್‌ವೆಲ್‌ಗಳು ಬತ್ತಿವೆ. ಮುಂಗಾರು ಬೆಳೆಗಳಾದ ತೊಗರಿ, ಹೆಸರು, ಉದ್ದು, ಸೋಯಾಬಿನ್ ಸಂಪೂರ್ಣ ಕೈಕೊಟ್ಟಿವೆ. ಉರಿಬಿಸಿಲಿನ ತಾಪದಿಂದಾಗಿ ಹಿಂಗಾರು ಬೆಳೆಗಳಾದ ಜೋಳ, ಕಡಲೆ, ಶೇಂಗಾ, ಗೋಧಿ ಬೆಳೆಯುವಂತಿಲ್ಲ. ದನಕರುಗಳಿಗೂ ಮೇವಿಲ್ಲ ಎಂದು ಅಳಲು ತೋಡಿ ಕೊಂಡರು.

ತೊಗರಿ ಮತ್ತು ಹತ್ತಿ ಬೆಳೆಗಾರರ ರಕ್ಷಣೆಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜಾರಿಗೆ ತರಬೇಕು. ಪಂಪ್‌ಸೆಟ್ ರೈತರಿಗೆ ಹಗಲು ಹೊತ್ತಿನಲ್ಲಿ ತ್ರೀ ಫೇಸ್ ವಿದ್ಯುತ್ ನೀಡಬೇಕು. ಕೆಟ್ಟ ಟಿ.ಸಿಗಳನ್ನು ತಕ್ಷಣ ದುರಸ್ತಿ ಮಾಡಬೇಕು. ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವಾಗ ಟೋಲ್‌ನಾಕಾದಲ್ಲಿ ರೈತರಿಂದ ಹಣ ವಸೂಲಿ ಕೈಬಿಡಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಮಾತನಾಡಿ, ರಾಜ್ಯ ಸರ್ಕಾರ ಬರ ಕುರಿತು ವಿಶೇಷ ಅಧಿವೇಶನ ನಡೆಸಿ, ಭಿಕ್ಷೆ ನೀಡಿದ ಹಾಗೆ ರೈತರಿಗೆ ಕೇವಲ 2,500 ಘೋಷಣೆ ಮಾಡಿದೆ. ಈ ಅವೈಜ್ಞಾನಿಕ ಬರ ಪರಿಹಾರವನ್ನು ರೈತ ಸಂಘಟನೆಗಳು ಖಂಡಿಸುತ್ತವೆ ಎಂದು ಅವರು ಆಗ್ರಹಿಸಿದರು.

ಕೇಂದ್ರ ಸರ್ಕಾರದವರು ಕಣ್ಣು ಮತ್ತು ಕಿವಿಮುಚ್ಚಿ ಕುಳಿತಂತಾಗಿದೆ. ಅವರಿಗೆ ರೈತರ ನೋವು, ಸಂಕಷ್ಟ ಕಾಣುತ್ತಿಲ್ಲ. ಆಕ್ರಂದನ ಕಿವಿಗೆ ಕೇಳುತ್ತಿಲ್ಲ. ತಕ್ಷಣ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ರೈತರ ಸಾಲ ಮನ್ನಾ ಮಾಡಬೇಕು. ರಾಜ್ಯ ಸರ್ಕಾರ ಡಿಸಿಸಿ ಬ್ಯಾಂಕ್ ಮತ್ತು ವಿಎಸ್‌ಎಸ್‌ಎನ್ ಸೊಸೈಟಿಗಳ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಮತ್ತು ಕೇಂದ್ರ ಕೃಷಿ ಸಚಿವರಿಗೆ ಬರೆದ ಮನವಿಪತ್ರವನ್ನು ಕಲಬುರಗಿ ತಹಶೀಲ್ದಾರ್ ಕೆ.ಆನಂದ ಶೀಲ, ಆಹಾರ ಇಲಾಖೆಯ ಉಪನಿರ್ದೇಶಕ ಮಾರುತಿ ಬ್ಯಾಕೋಡ್

ವೀರಣ್ಣಾ ಮಂಗಾಣಿ, ಕರೆಪ್ಪ ಕರಗೊಂಡ, ಸಿದ್ದು ಎಸ್.ಎಲ್., ಜಫರ್‌ಖಾನ್ ಮಿರಿಯಾಣ, ಶರಣಪ್ಪ ಪೂಜಾರಿ ವಚ್ಚಾ, ದಿಲೀಪ್ ನಾಗೂರೆ ಸೇರಿದಂತೆ ಅನೇಕರ ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಅ.31ರಂದು ಕೋಟ್ಯಂತರ ರೂ.ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಸಿದ್ಧತೆ

**ಸಿಎಂಗೆ ಎಚ್‌ಡಿಕೆ ಬರೆದ ಪತ್ರದ ಬೆನ್ನಲ್ಲೇ ಮಂಡ್ಯದ ವಿ.ವಿ. ಆವರಣದಲ್ಲಿ ಕಾರ್ಯಕ್ರಮಕ್ಕೆ ಸಿದ್ಧತೆ**

**ಮಂಡ್ಯ, ಅ.26:** ಜಿಲ್ಲೆಯ ಅಭಿವೃದ್ಧಿ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ರಾಜಕೀಯ ವಾಕ್ಸಮರ ಮತ್ತೊಂದು ಹಂತಕ್ಕೆ ತಲುಪುವ ಸೂಚನೆ ಸಿಕ್ಕಿದೆ.

ಅಕ್ಟೋಬರ್ 31ರಂದು ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಯುತ್ತಿದ್ದು, ನೂರಾರು ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಯೋಜಿಸಲಾಗಿದೆ. ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ಅಗತ್ಯವಾದ ಜಾಗ ಒದಗಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಎಚ್.ಡಿ. ಕುಮಾರಸ್ವಾಮಿ ಪತ್ರ ಬರೆದ ಬೆನ್ನಲ್ಲೇ ಈ ಕಾರ್ಯಕ್ರಮದ ಸಿದ್ಧತೆಗಳು ಗಮನ ಸೆಳೆದಿವೆ. ಅಭಿವೃದ್ಧಿ ಕಾಮಗಾರಿಗಳ ಮೂಲಕ ಜಿಲ್ಲೆಯ ಪ್ರಗತಿಗೆ ತಮ್ಮ ಸರ್ಕಾರ ನೀಡಿರುವ ಕೊಡುಗೆಯನ್ನು ಜನರ ಮುಂದಿಡಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ ಎಂಬ ರಾಜಕೀಯ ಚರ್ಚೆಯೂ ನಡೆಯುತ್ತಿದೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ 10 ಸಾವಿರ ಕೋಟಿ ರೂಪಾಯಿ ನೀಡಿದೆ ಎಂಬ ವಿಚಾರವನ್ನು



ಕಾರ್ಯಕ್ರಮದ ಮೂಲಕ ಜನರಿಗೆ ತಲುಪಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ ಎನ್ನಲಾಗಿದೆ. ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರು ಜಿಲ್ಲೆಗೆ ನೀಡಿರುವ ಕೊಡುಗೆ ಏನು ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ರಾಜಕೀಯವಾಗಿ ತಿರುಗೇಟು ನೀಡುವ ಪ್ರಯತ್ನ ನಡೆಯುತ್ತಿದೆ ಎಂಬ ವಿಶ್ಲೇಷಣೆಗಳೂ ಕೇಳಿಬರುತ್ತಿವೆ

ಇದರ ನಡುವೆ, ಮಂಡ್ಯ ಅಭಿವೃದ್ಧಿಗೆ 10 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಎನ್ನುವ ಹೇಳಿಕೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಲೆಕ್ಕ ಕೇಳಿದ್ದಾರೆ. ಹೀಗಾಗಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚ, ಸರ್ಕಾರದ ಕೊಡುಗೆ ಮತ್ತು ಕೈಗಾರಿಕೆ ಸ್ಥಾಪನೆಗೆ ಸಂಬಂಧಿಸಿದ ವಿಚಾರಗಳು ಉಭಯ ನಾಯಕರ ನಡುವಿನ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಗಿವೆ. ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಬೃಹತ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ನೂರಾರು ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪ್ರದರ್ಶಿಸಲು ಸಿದ್ಧತೆ ನಡೆದಿದೆ.

ಈ ಕಾರ್ಯಕ್ರಮವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ವೇದಿಕೆಯಾಗಿರುವುದರ ಜೊತೆಗೆ, ಮಂಡ್ಯದ ಅಭಿವೃದ್ಧಿಯಲ್ಲಿ ಯಾರ ಕೊಡುಗೆ ಎಷ್ಟು ಎಂಬ ರಾಜಕೀಯ ಚರ್ಚೆಗೂ ವೇದಿಕೆಯಾಗುವ ಸಾಧ್ಯತೆಯಿದೆ.

ಆದರೆ, ಕಾರ್ಯಕ್ರಮ ದಲ್ಲಿ ಯಾವ ಕಾಮಗಾರಿಗಳಿಗೆ ಚಾಲನೆ ದೊರೆಯಲಿದೆ ಮತ್ತು ಒಟ್ಟು ಎಷ್ಟು ಮೊತ್ತದ ಯೋಜನೆಗಳನ್ನು ಘೋಷಿಸಲಾಗುತ್ತದೆ ಎಂಬ ವಿವರಗಳು ಅಧಿಕೃತವಾಗಿ ಸ್ಪಷ್ಟವಾದ ಬಳಿಕವೇ ಸಂಪೂರ್ಣ ಚಿತ್ರಣ ತಿಳಿಯಲಿದೆ.




ದಿನಾಂಕ:30.10.2026 ರಿಂದ 10.11.2026 ರವರೆಗೆ

| ಪ್ರೇಕ್ಷಣೀಯ/ಯಾತ್ರಾ ಸ್ಥಳಗಳು | ವಾಹನ ಹೊರಡುವ ಸಮಯ ಹಾಗೂ ಪ್ರಯಾಣದ ಒಟ್ಟು ಕಿ.ಮೀ | ಟಿಕೆಟ್ ಮೊತ್ತ ರೂ ಗಳಲ್ಲಿ |
|---|---|---|
| ಹಾಸನ-ಶ್ರೀ ಹಾಸನಾಂಬ ಹಾಗೂ ಸಿದ್ದೇಶ್ವರ ದೇವಾಲಯ ದರ್ಶನ, ದೇವಿಗೆರೆಕಲ್ಯಾಣಿ-ಕೆಂಚಮ್ಮನ ಹೊಸಕೋಟೆ ದೇವಾಲಯ- ಹಾಸನ. | ಬೆಳಗ್ಗೆ 08.00, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 90 ಕಿ.ಮೀ (ಬುಧವಾರ, ಶುಕ್ರವಾರ ಮತ್ತು ಭಾನುವಾರ) | (ರೂ 1000 ಶ್ರೀ ಹಾಸನಾಂಬ ದೇವಿಯ ದರ್ಶನದ ಟಿಕೆಟ್ ಒಳಗೊಂಡಂತೆ)+ 400/- ಒಟ್ಟು= 1400/- |
| ಹಾಸನ-ವಾಟೆಹೊಳೆ ಡ್ಯಾಂ-ಜನಾರ್ಧನಸ್ವಾಮಿ ದೇವಸ್ಥಾನ, ಪಾಳ್ಯ-ಮರಗಡಿ ಜಲಪಾತ-ಬೆಟ್ಟದ ಭೈರವೇಶ್ವರ ದೇವಸ್ಥಾನ-ಹಾಸನ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 184 ಕಿ.ಮೀ, | 500/- |
| ಹಾಸನ-ಮಂಜರಾಬಾದ್ ಕೋಟೆ, ಮೂಕನಮನೆ ಜಲಪಾತ, ಬಿಸಿಲೆ ಘಾಟ್ ವೀಕ್ಷಣಾ ಕೇಂದ್ರ-ಹಾಸನ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 192 ಕಿ.ಮೀ | 525/- |
| ಹಾಸನ- ಶ್ರೀ ಚನ್ನಕೇಶವ ದೇವಾಲಯ ಬೇಲೂರು-ಜಲಸಾಹಸ ಕ್ರೀಡಾ ಕೇಂದ್ರ-ಯಗಚಿ-ಶ್ರೀ ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ- ಹೊಯ್ಸಳೇಶ್ವರ ದೇವಾಲಯ- ಹಳೇಬೀಡು ವರದರಾಜ ಸ್ವಾಮಿ ದೇವಾಲಯ ಕೊಂಡಜ್ಜಿ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 117 ಕಿ.ಮೀ *ದಾಸೋಹ ಲಭ್ಯವಿರುತ್ತದೆ. ಶ್ರೀ ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ) | 375/- |
| ಹಾಸನ-ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ದೇವಾಲಯ-ನುಗ್ಗೇಹಳ್ಳಿ-ಶ್ರವಣಬೆಳಗೊಳ-ವಿಂಧ್ಯಗಿರಿ ಬೆಟ್ಟ-ಚಂದ್ರಗಿರಿ ಬೆಟ್ಟ-ಬೆಲಸಿಂದ ಪಾರ್ಕ್-ಹಾಸನ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 132 ಕಿ.ಮೀ *ದಾಸೋಹ ಲಭ್ಯವಿರುತ್ತದೆ. (ಜೈನ ಮಠ ಶ್ರವಣಬೆಳಗೊಳ) | 400/- |
| ಹಾಸನ-ಭೂಚೇಶ್ವರ ದೇವಾಲಯ ಕೋರವಂಗಲ- ಕೇಶವ ದೇವಾಲಯ ಮತ್ತು ಸೋಮೇಶ್ವರ ದೇವಸ್ಥಾನ ಹಾರನಹಳ್ಳಿ-ಮಾಲೇಕಲ್ಲು ತಿರುಪತಿ ದೇವಾಲಯ-ಜೇನುಕಲ್ಲು ಸಿದ್ದೇಶ್ವರ ಬೆಟ್ಟ -ಮಹಾತ್ಮ ಗಾಂಧಿ-ಚಿತಾಭಸ್ಮ-ಅರಸೀಕೆರೆ -ನರಸಿಂಹಸ್ವಾಮಿ ದೇವಾಲಯ-ಶಾಂತಿಗ್ರಾಮ-ಗೆಂಡೆಕಟ್ಟೆ ಫಾರೆಸ್ಟ್, ಹಾಸನ-ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 134 ಕಿ.ಮೀ, *ದಾಸೋಹ ಲಭ್ಯವಿರುತ್ತದೆ. (ಶ್ರೀ ಜೇನುಕಲ್ ಸಿದ್ದೇಶ್ವರ ಬೆಟ್ಟ) | 400/- |
| ಹಾಸನ-ಹಾಲುವಾಗಿಲು ಕಟ್ಟೆ-ಶೆಟ್ಟಿಹಳ್ಳಿ ಚರ್ಚ್-ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಕೋನಾಪುರ-ಹೇಮಾವತಿ ಜಲಾಶಯ, ಗೊರೂರು-ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ರಾಮೇಶ್ವರ ದೇವಸ್ಥಾನ, ರಾಮನಾಥಪುರ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 143 ಕಿ.ಮೀ | 400/- |
| ಹಾಸನ-ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯ ಜಾವಗಲ್-ಶ್ರೀ ಚನ್ನಕೇಶವ ದೇವಸ್ಥಾನ ಅರಕೆರೆ-ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಬೆಟ್ಟದಪುರ-ಬಾಣಾವರ ಕೋಟೆ-ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಬಿಳಿಕಲ್ಲು-ಹಾಸನ. | ಬೆಳಗ್ಗೆ 07.30, ನಗರ ಬಸ್ ನಿಲ್ದಾಣ, ಹಾಸನ ಒಟ್ಟು 181 ಕಿ.ಮೀ | 500/- |

ಮಕ್ಕಳಿಗೆ ಪ್ರತ್ಯೇಕ ದರ | ಊಟ, ಪ್ರವೇಶ ಶುಲ್ಕ ಪ್ರತ್ಯೇಕ | ಆಗಮನ ಸಮಯ ಸಂಜೆ ಸುಮಾರು 7 ಗಂಟೆಗೆ

ಸದರಿ ಪ್ಯಾಕೇಜ್ ಪ್ರವಾಸ ಸಂಬಂಧ ಕರಾರಸಾನಿಗಮದ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:
7760990518, 7760990519, 7760990520, 7760990523

ವೆಬ್‌ಸೈಟ್ ವಿಳಾಸ: www.ksrtc.in

ಕರಾರಸಾನಿಗಮ - ಸುರಕ್ಷತೆ, ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

080 2625 2625 Follow us on : facebook/Ksrtc Karnataka YouTube.com/channel/KSRTC.KARNATAKA Twitter/KSRTC_journeys ksrtc.karnatakagov


# ಹೊಸ ಪೀಳಿಗೆಗಾಗಿ ದೇಸಿಕಲೆ ಉಳಿಸಿ: ಬಸವರಾಜ ಕಳಸ ಕರೆ

**ರಾಯಚೂರು, ಅ.26:** ಇಂದಿನ ಆಧುನಿಕ ಯುಗದಲ್ಲಿ ನಶಿಸಿ ಹೋಗುತ್ತಿರುವ ನಮ್ಮ ನಾಡಿನ ದೇಸಿಕಲೆಗಳು ಉಳಿಯಬೇಕೆಂದರೆ ಇಂದಿನ ಯುವಪೀಳಿಗೆಗೆ ನಮ್ಮ ಸಂಸ್ಕೃತಿಯ ಕಲೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಡೆಯಬೇಕಿದೆ ಎಂದು ಹೋರಾಟಗಾರ ಬಸವರಾಜ ಕಳಸ ಕಳವಳ ವ್ಯಕ್ತಪಡಿಸಿದರು.

ನಗರದ ಮನರಂಜನ ಕೇಂದ್ರದಲ್ಲಿ ನಡೆದ ಮೇಘ ಕಲಾನಿಕೇತನ ಹಮ್ಮಿಕೊಂಡಿದ್ದ ದಸರಾ ಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭರತನಾಟ್ಯ ಕೂಚಿಪುಡಿ, ತೊಗಲುಗೊಂಬೆ ಆಟ, ಜಾನಪದ ನೃತ್ಯ, ಜಾನಪದ ಗೀತೆ, ಭಾವಗೀತೆ, ಯಕ್ಷಗಾನ ಬಯಲಾಟ ಇವುಗಳು ನಮ್ಮ ನಾಡಿನ ದೇಸಿಕಲೆಗಳಾಗಿದ್ದು ಈ ಕಲೆಗಳು ಉಳಿಯಬೇಕೆಂದರೆ ಇಂಥ ಸಂಘಟನೆಗಳು ಮುಂದೆ ಬಂದು ಇಂದು ಉತ್ತಮ ಕಾರ್ಯಕ್ರಮಗಳನ್ನು ಮಾಡಿ ಜನರಿಗೆ ಮತ್ತು ಯುವಕರಿಗೆ ಜಾಗೃತಿ ಮೂಡಿಸುವ ಮನಮುಟ್ಟುವ ಕಾರ್ಯಕ್ರಮ ಇದಾಗಿದೆ ಎಂದರು .ಶಾಮಣ್ಣ ಮಾಚನೂರು, ಮೇಘ ಮಾತನಾಡಿದರು.

ಸುಗಮ ಸಂಗೀತವನ್ನು ವೆಂಕಟೇಶ ಆಲ್ಕೋಡ್ ಸೇತುಮಾಧವ ಸಂಗೀತ ನುಡಿಸಿದರೆ ಗಾಯಕರಾದ ಮೇಘ ಝಾನ್ಸಿರಾಣಿ ಶ್ರೀ ಗೌರಿ ಪಲ್ಲಕ್ಕಿ ರಾಜಶೇಖರ. ಚಿರಂಜೀವಿ ಯಾದವ್. ವಾಸುಕಿ ಕರುಣಮ್ ಶೈಲಜಾ ಸಂಗೀತ ಶಾಂತಪ್ಪ ಇವರು ಉತ್ತಮ ಗಾಯನವನ್ನು ಪ್ರದರ್ಶನ ಮಾಡಿದರು. ಶ್ರೀಗೌರಿ ಪಲ್ಲಕ್ಕಿ ಭರತನಾಟ್ಯವನ್ನು ಪ್ರದರ್ಶಿಸಿದರು. ನಗರ ಬಿಜೆಪಿ ಘಟಕದ ಅಧ್ಯಕ್ಷ ಪೆಪ್ಸಿ ಗೋವಿಂದ. ಕಾಂಗ್ರೆಸ್ ಮುಖಂಡರಾದ ಸತ್ಯನಾಥ. ಉದ್ಯಮಿ ವೀರೇಂದ್ರ ಪಾಟೀಲ ಹರವಿ. ಬಿಜೆಪಿ ಮುಖಂಡರಾದ ಕರಿಯಪ್ಪ ನಾಯಕ. ಎಂ.ನರೇಂದ್ರ ಅತಿಥಿಗಳಾಗಿ ಭಾಗವಹಿಸಿದ್ದರು. ಮಾರುತಿ ಬಡಿಗೇರ್ ಸ್ವಾಗತಿಸಿದರು. ಸಮಾಜ ಸೇವಕರಾದ ಭಾರತಿ ಮಸ್ಕಿ ಮತ್ತು ತುಳಸಿ ಯಾದವ್ ವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ 17 ಜನ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.




ರಾಯಚೂರು ನಗರದ ಮನರಂಜನ ಕೇಂದ್ರದಲ್ಲಿ ನಡೆದ ಮೇಘ ಕಲಾ ನಿಕೇತನ ಹಮ್ಮಿಕೊಂಡಿದ್ದ ದಸರಾ ಸಂಭ್ರಮವನ್ನು ಹೋರಾಟಗಾರ ಬಸವರಾಜ ಕಳಸ ಅವರು ಉದ್ಘಾಟಿಸಿ ಮಾತನಾಡಿದರು.

# ಮರಣವೇ ಮಹಾನವಮಿ ಮಹೋತ್ಸವಕ್ಕೆ ತೆರೆ

ಬೀದರ್, ಅ. 26: ಲಿಂಗಾಯತ ಮಹಾ ಮಠದ ವತಿಯಿಂದ ನಗರದ ಬಸವಗಿರಿಯಲ್ಲಿ ಹಮ್ಮಿಕೊಂಡಿದ್ದ ಒಂಬತ್ತು ದಿನಗಳ ಮರಣವೇ ಮಹಾನವಮಿ ಮಹೋತ್ಸವ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವಕ್ಕೆ ತೆರೆ ಬಿದ್ದಿತು.

ಕೊನೆಯ ದಿನ ನಡೆದ ಕಲ್ಯಾಣ ಕ್ರಾಂತಿ ವಿಜಯೋತ್ಸವ ಗೋಷ್ಠಿಯು ಕಲ್ಯಾಣ ಕ್ರಾಂತಿಯ ಮೇಲೆ ಬೆಳಕು ಚೆಲ್ಲಿತು. ಸತ್ಯ ಸ್ಥಾಪನೆಗಾಗಿ ಶರಣರು ಪ್ರಾಣ ಕೊಟ್ಟರು. ಶರಣರ ತ್ಯಾಗ, ಬಲಿದಾನ ಎಂದೆಂದಿಗೂ ಮರೆಯಲಾಗದು ಎಂದು ಗೋಷ್ಠಿಯ ಸಾನ್ನಿಧ್ಯ ವಹಿಸಿದ್ದ ಪುರುಷಕಟ್ಟೆಯ ಚನ್ನಬಸವಣ್ಣ ಹೇಳಿದರು.

ಬಸವಣ್ಣನವರ ಜನನದೊಂದಿಗೆ ಕಲ್ಯಾಣ ಕ್ರಾಂತಿ ಆರಂಭವಾಯಿತು. ಅವರು ಹುಟ್ಟಿದಾಕ್ಷಣವೇ ಒಬ್ಬ ಅಂತ್ಯಜನ ಶಿಕ್ಷೆ ರದ್ದಾಯಿತು ಎಂದು ತಿಳಿಸಿದರು.

ಶರಣರು ಸಂಪ್ರದಾಯ ವಾದಿಗಳನ್ನು ಎದುರಿಸಿ ಉಳವಿಯ ಕಾಡಿನಲ್ಲಿ ವಚನಗಳನ್ನು ಉಳಿಸಿ ರಕ್ಷಿಸಿದರು. ಉಳವಿ ಕಾಡಿನಿಂದ ಮತ್ತೆ ನಾಡಿಗೆ ವಚನಗಳನ್ನು ತಂದ ಶ್ರೇಯಸ್ಸು ಅಕ್ಕನಾಗಮ್ಮ ಅವರಿಗೆ ಸಲ್ಲುತ್ತದೆ. ಇದರ ಸವಿ ನೆನಪಿಗಾಗಿಯೇ ಕಲ್ಯಾಣ ಕ್ರಾಂತಿ ವಿಜಯೋತ್ಸವ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಅನುಭಾವ ಮಂಡಿಸಿದ ಡಾ. ದೇವಕಿ ನಾಗೂರೆ, ಮನುಕುಲದ ಇತಿಹಾಸದಲ್ಲಿ ಕಲ್ಯಾಣ ಕ್ರಾಂತಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಅಂದು ಕಲ್ಯಾಣ ಕೈಲಾಸಕ್ಕೆ ನಿಚ್ಚಣಿಕೆಯಾಗಿತ್ತು ಎಂದರು.

ಜ್ಯೋತಿ ಸಿ. ಪಾಟೀಲ ವಚನ ಪಠಣಗೈದು ಗೋಷ್ಠಿಯನ್ನು ಉದ್ಘಾಟಿಸಿದರು. ಲಲಿತಾ ಜಿ. ಮೋಳಕೆರೆ ಅಧ್ಯಕ್ಷತೆ ವಹಿಸಿದ್ದರು. ರೇಣುಕಾ ಬಿ. ಖಂಡ್ರೆ, ಸುನೀತಾ ಸೋಮನಾಥ ಪಾಟೀಲ, ವಿಜಯಲಕ್ಷ್ಮಿ ಗೋರ್ಟೆಕರ್ ಇದ್ದರು.

ವಚನಶ್ರೀ, ಗುರುಶ್ರೀ, ಶ್ಯಾಮಲಾ ಎಲಿ, ಮಲ್ಲಮ್ಮ ಹೆಬ್ಬಾಳೆ ವಚನ ಗಾಯನ ಮಾಡಿದರು. ವೈಷ್ಣವಿ ಅಭಿಷೇಕ ಜಾನಪದ ನೃತ್ಯ ಪ್ರಸ್ತುತಪಡಿಸಿದರು. ಉಷಾ ಬೆಳಕೋಟಿ ಸ್ವಾಗತಿಸಿದರು. ಲಾವಣ್ಯ ಹಂಗರಗಿ ನಿರೂಪಿಸಿದರು. ಸಂಗೀತಾ ರಾಜಶೇಖರ ಪಾಟೀಲ ದಾಸೋಹಗೈದರು.




ಬೀದರನ ಬಸವಗಿರಿಯಲ್ಲಿ ಲಿಂಗಾಯತ ಮಹಾಸಭಾ ವತಿಯಿಂದ ನಡೆದ ಒಂಭತ್ತು ದಿನಗಳ ಮರಣವೇ ಮಹಾನವಮಿ ಮಹೋತ್ಸವ ಹಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವ ಸಮಾರೋಪಗೊಂಡಿತು.

# ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಮೋದಿಯವರ ಬಳಿ ಕ್ಷಮೆಯಾಚಿಸಬೇಕು: ಭಗವಂತ ಖೂಬಾ



ಬೀದರ್, ಅ.26: ಕಾಂಗ್ರೇಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪಾಟ್ನಾದಲ್ಲಿ ಅವರ ಪಕ್ಷದ ಸಭೆಯಲ್ಲಿ ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ತಂದೆಯ ಕುರಿತು ನೀಡಿರುವ ಆಕ್ಷೇಪಾರ್ಹ ಹೇಳಿಕೆಯನ್ನು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಖಂಡಿಸಿದ್ದಾರೆ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಪ್ರಧಾನಿಗಳಿಗೆ ನಿಂದಿಸಿರುವುದು, ದೇಶದ ಜನತೆಗೆ ಮಾಡಿರುವ ಅವಮಾನವಾಗಿದೆ, ಕೂಡಲೆ ಅವರು ದೇಶದ ಜನತೆಗೆ ಮತ್ತು ಪ್ರಧಾನಿಗಳಿಗೆ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರಾಗಿ, ಹತಾಷಾ ಭಾವನೆಯಿಂದ ಇಂತಹ ನೀಚ ಹೇಳಿಕೆಗಳು ನೀಡುವುದರ ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ ಇದು ಸರಿಯಲ್ಲಾ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮೇಲಿಂದ ಮೇಲೆ ಹೊರದೇಶಕ್ಕೆ ಪ್ರಯಾಣಿಸುತ್ತ, ಒಬ್ಬ ಗಂಭೀರತೆ ಇಲ್ಲದ ನಾಯಕ ಆಗಿದ್ದಾರೆ ಮತ್ತು ಮುಂದೆಯೂ ಪ್ರಧಾನಿಯಾಗಿ ನರೇಂದ್ರ ಮೋದಿಯವರೇ ಮುಂದುವರೆಯಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಸಭೆಯಲ್ಲಿಯೆ ಕಾಂಗ್ರೆಸ್ ಕಾರ್ಯಕರ್ತ ತನ್ನ ಮನದಾಳದ ಮಾತು ಹೇಳಿದ್ದಾರೆ.

ಇದರಿಂದ ಅವಮಾನಿತರಾದ ಖರ್ಗೆಯವರು ಅಸಹನೆಯಿಂದ ಇಂತಹ ನೀಚ ಹೇಳಿಕೆ ನೀಡಿರುವುದು ಶೋಭೆ ತರುವುದಿಲ್ಲಾ ಎಂದು ಖೂಬಾ ಆಕ್ರೋಷ ಹೊರಹಾಕಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿದ್ದು, ಇಂತಹ ನಿಂದನೆಗಳ ಮೂಲಕ, ಅವರ ಪಕ್ಷದವರಿಗೆ ಮತ್ತು ದೇಶದ್ರೋಹಿಗಳ ಜೊತೆ ನಿಲ್ಲುತ್ತಿರುವ ಕೆಲವು ಸಂಘಟನೆಗಳಿಗೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿರುವಂತಿದೆ ಎಂದಿದ್ದಾರೆ, ಆದರೆ ಇಂತಹ ಹೇಳಿಕೆಗಳಿಂದ ಖರ್ಗೆಯವರು ಏನು ಸಾಧಿಸುವುದಿಲ್ಲಾ, ಹೊರತಾಗಿ ಸಮಾಜದ ಕಣ್ಣಲ್ಲಿ ಇನ್ನಷ್ಟು ಕೆಳಗೆ ಬಿಳಲಿದ್ದಾರೆ, ಖರ್ಗೆಯವರು ತನ್ನ ಇದೆ ಚಾಳಿ ಮುಂದುವರೆಸಿದರೆ ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರದು ಎಂದು ತಿಳಿಸಿದ್ದಾರೆ.

ಮೇಲಿಂದ ಮೇಲೆ ಕಾಂಗ್ರೆಸ್ ಪಕ್ಷದ ನಾಯಕರುಗಳು ಇಂತಹ ತುಚ್ಛ ಹೇಳಿಕೆ ನೀಡುವ ಮೂಲಕ ಮತ್ತು ಸಮರ್ಥಿಸಿಕೊಳ್ಳುವ ಮೂಲಕ ಅವರ ಕಾಂಗ್ರೆಸ್ ಪಕ್ಷದ ಸಂಸ್ಕೃತಿ, ಸಂಸ್ಕಾರ ಮತ್ತು ದೇಶದ ಬಗ್ಗೆ, ದೇಶದ ಪ್ರಧಾನಿಗಳ ಬಗ್ಗೆ ಅವರಿಗಿರುವ ವಿಷಕಾರಿ ಮನೋಭಾವನೆ ಜನರ ಮುಂದೆ ಹೊರಹಾಕುತ್ತಿದ್ದಾರೆ, ಇಂತಹದರಿಂದ ಮೋದಿ ಯವರಿಗೆ ಕುಂದುಸಲಿಕೆ ಮತ್ತು ದೇಶದ ಬಲಿಷ್ಠ ಅಭಿವೃದ್ಧಿ ಸಂಕಲ್ಪದಿಂದ ಹಿಂದೆ ಸರಿಸಲಿಕೆ ಸಾಧ್ಯವಿಲ್ಲಾ ಮತ್ತು ಕಾಂಗ್ರೆಸ್‌ನವರ ಇಂತಹ ಕೆಟ್ಟ ಕರ್ಮಗಳಿಂದಲೆ ದೇಶದಲ್ಲಿ ಕಾಂಗ್ರೆಸ್ ಪಕ್ಷ ದುಸ್ಥಿತಿಗೆ ಬರಲು ಕಾರಣವಾಗಿದೆ ಎಂದು ಭಗವಂತ ಖೂಬಾ ಆಕ್ರೋಷ ವ್ಯಕ್ತಪಡಿಸಿದ್ದಾರೆ.

# ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜಿನಾಮೆಗೆ ಆಗ್ರಹಿಸಿ ಮೆರವಣಿಗೆ

**ಬೀದರ್, ಅ. 26:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಿ, ಪ್ರಜಾಪ್ರಭುತ್ವ ಮರು ಸ್ಥಾಪಿಸಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಸೇವೆಯಿಂದ ವಜಾಗೊಳಿಸಿ, ಅವರನ್ನು ಬಂಧಿಸುವಂತೆ ಆಗ್ರಹಿಸಿ ನಗರದಲ್ಲಿ ತಿರಂಗಾ ಯಾತ್ರೆ ನಡೆಸಲಾಯಿತು.

ಎಸ್‌ಐಆರ್ ವಿರೋಧಿ ಒಕ್ಕೂಟ, ಸಂಯುಕ್ತ ಕಿಸಾನ್ ಮೋರ್ಚಾ, ಜಾತ್ಯತೀತ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನಾಕಾರರು ಜಮಾಯಿಸಿದರು. ಒಂದು ಕೈಯಲ್ಲಿ ತ್ರಿವರ್ಣ ಧ್ವಜ, ಇನ್ನೊಂದು ಕೈಯಲ್ಲಿ ಎಸ್‌ಐಆರ್ ವಿರೋಧಿ ಭಿತ್ತಿ ಪತ್ರಗಳನ್ನು ಹಿಡಿದು, ಘೋಷಣೆ ಕೂಗಿದರು. ನಗರದ ಪ್ರಮುಖ ಮಾರ್ಗಗಳಲ್ಲಿ ರ‍್ಯಾಲಿ ನಡೆಸಿ, ಪುನಃ ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡರು.

ರಾಷ್ಟ್ರಮಟ್ಟದಲ್ಲಿ ತಿರಂಗಾ ಯಾತ್ರೆಗೆ ಕರೆ ಕೊಟ್ಟಿದ್ದರಿಂದ ನಗರದಲ್ಲಿ ರ‍್ಯಾಲಿ ನಡೆಸಲಾಯಿತು. ಮುಖಂಡ ಓಂಪ್ರಕಾಶ್ ರೊಟ್ಟೆ ಮಾತನಾಡಿ, ಕೇಂದ್ರ ಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಪ್ರಭಾವಕ್ಕೆ ಒಳಗಾಗಿ ಮತದಾರರ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಸುತ್ತಿದೆ. ಸಂವಿಧಾನಬದ್ಧ ಹಕ್ಕುಗಳಿಗೆ ಧಕ್ಕೆ ತರುತ್ತಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕು. ಯಾವುದೇ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಒತ್ತಾಯಿಸಿದರು.

ಹರ್ ಹಾಥ್ ಮೇ ತಿರಂಗಾ, ಹರ್ ಗಲಿ ಮೇ ಜಂತರ್ ಮಂತರ್' ಎಂಬ ಘೋಷಣೆಯೊಂದಿಗೆ ಜನರನ್ನು ಸಂಘಟಿಸಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸಲು ಸಾಮೂಹಿಕ ಹೋರಾಟ ರೂಪಿಸುವ ಅಗತ್ಯವಿದೆ. ದೇಶದ ಭವಿಷ್ಯ ಯುವಜನರ ಕೈಯಲ್ಲಿದೆ. ಪ್ರಜಾಪ್ರಭುತ್ವವನ್ನು ಮರಳಿ ಪಡೆಯುವ ಹೋರಾಟದಲ್ಲಿ ಎಲ್ಲರೂ ಕೈಜೋಡಿಸಬೇಕು. ಎಸ್‌ಐಆರ್ ರದ್ದತಿಗಾಗಿ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕು. ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಪ್ರಶ್ನಿಸಬೇಕು ಎಂದು ಹೇಳಿದರು.

ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ, ಮತದಾರರ ಪಟ್ಟಿಯಿಂದ ಅಳಿಸಲಾಗಿರುವ ಅರ್ಹ ಮತದಾರರ ಹೆಸರುಗಳನ್ನು ಮರು ಸ್ಥಾಪಿಸಬೇಕು. ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆ–2023ಕ್ಕೆ ಮಾಡಲಾದ ತಿದ್ದುಪಡಿಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.




ಬೀದರನಲ್ಲಿ ಇಂಡಿ ಕೂಟದಿಂದ ಮುಜಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ ಅವರು ರಾಜಿನಾಮೆ ನೀಡಬೇಕು ಇಲ್ಲವಾದರೆ ಅವರನ್ನು ಸೇವೆಯಿಂದ ವಜಾಗೊಳಿಸಬೇಕು ಆಗ್ರಹಿಸಿ ನಗರದಲ್ಲಿ ತಿರಂಗಾ ಯಾತ್ರೆ ನಡೆಸಲಾಯಿತು.

# ಸ್ವಾತಂತ್ರ್ಯ ಹೋರಾಟಗಾರರ ಬದುಕು ಮಕ್ಕಳಿಗೆ ಪ್ರೇರಣೆ: ಅಯ್ಯನ ಕಥೆಗಳು ಕೃತಿ ಅಭಿಯಾನ ಉದ್ಘಾಟನೆ

**ಕಲಬುರಗಿ, ಅ.26:** ಸ್ವಾತಂತ್ರ್ಯ ಹೋರಾಟಗಾರರ ಬದುಕು ಮತ್ತು ಸಾಧನೆ ಮಕ್ಕಳಿಗೆ ಪ್ರೇರಣೆಯಾಗುವುದಲ್ಲದೆ ಅಂತಹ ಮಹಾನ್ ವ್ಯಕ್ತಿಗಳು ರಚಿಸಿದ ಕೃತಿ ದೇಶಪ್ರೇಮ, ಪ್ರೀತಿ, ಸೌಹಾರ್ದ, ಮಾನವೀಯ ಮೌಲ್ಯಗಳನ್ನು ಬೋಧಿಸುತ್ತವೆ ಎಂದು ನಗರದ ರಾಘವೇಂದ್ರ ಪೊಲೀಸ್ ಠಾಣೆಯ ಪಿಎಸ್‌ಐ ಯಶೋಧಾ ಕಟಕೆ ಹೇಳಿದರು.

ಕಲಬುರಗಿಯ ಸೈಯದ್ ಚಿಂಚೋಳಿಯ ಚಂದ್ರಶೇಖರ್ ಪಾಟೀಲ್ ರೇವೂರ್ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಶ್ರೀಮತಿ ಬಾಲಮ್ಮ ಮಹಾದೇವಪ್ಪ ಕಡೇಚೂರ್ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ದಿ.ಮಹಾದೇವಪ್ಪ ಕಡೇಚೂರ್ ಅವರು ಮಕ್ಕಳಿಗಾಗಿ ಬರೆದ "ಅಯ್ಯನ ಕಥೆಗಳು" ಕೃತಿಯನ್ನು ಶಾಲೆಗೆ ಹಸ್ತಾಂತರಿಸುವ ಅಭಿಯಾನದ ನಾಲ್ಕನೇ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಮಕ್ಕಳು ಇಂದಿನ ಪ್ರಜೆಗಳು. ಮಕ್ಕಳು ನಾಡಿನ ಸಂಪತ್ತು. ರಾಷ್ಟ್ರ ಭಕ್ತ ಮಕ್ಕಳ ನಿರ್ಮಾಣಕ್ಕೆ ಉತ್ತಮ ಪುಸ್ತಕಗಳ ಓದು ಅಗತ್ಯವಾಗಿದ್ದು ಸ್ವಾತಂತ್ರ್ಯ ಯೋಧರು, ಸೈನಿಕರು, ಹೆತ್ತ ತಂದೆ ತಾಯಿ ಮತ್ತು ರೈತರು ನಮ್ಮ ಮಕ್ಕಳಿಗೆ ಹೀರೋಗಳಾಗಬೇಕು. ತ್ರಿವರ್ಣ ಧ್ವಜ ಹಾರಾಡಲು ಸೈನಿಕರ ತ್ಯಾಗಮಯ ಬದುಕು ಇದೆ. ನಮ್ಮ ಮಕ್ಕಳು ಸ್ವಚ್ಛಂದವಾಗಿ ಜೀವನ ಮಾಡಲು ಹೆತ್ತವರ ಕೊಡುಗೆ ಇದ್ದು ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ, ಅವರಿಂದ ರಚಿತ ಕೃತಿಗಳು ಮಕ್ಕಳ ಸಾಧನಗೆ ಪ್ರೇರಣೆ ನೀಡುತ್ತವೆ ಎಂದರು.

ಪುಸ್ತಕ ಜ್ಞಾನ ವಿಸ್ತರಣೆಗೆ ಮೂಲ : ಸಂಧ್ಯಾ ಹೊನಗುಂಟಿಕರ್

ಪುಸ್ತಕಗಳ ಓದು ಮನಸ್ಸಿಗೆ ಮುದ ನೀಡುತ್ತದೆ ಜ್ಞಾನ ಮತ್ತು ತಿಳುವಳಿಕೆಯನ್ನು ಹೆಚ್ಚಿಸುತ್ತದೆ ಎಂದು ಖ್ಯಾತ ಕಥೆಗಾರ್ತಿ, ಸಾಹಿತಿ ಸಂಧ್ಯಾ ಹೊನಗುಂಟಿಕರ್ ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಅವರು ಮನೆಗಳಲ್ಲಿ ಅಜ್ಜ, ಅಜ್ಜಿಯರ ಕಥೆ ಕೇಳಿ, ಪುಸ್ತಕ ಓದಿನಿಂದ ಕಲ್ಪನಾ ಶಕ್ತಿ ವಿಸ್ತರಣೆಯಾಗಿ ಸಾಧನೆ ಮಾಡಲು ಎಲ್ಲರಿಗೂ ಉತ್ತೇಜನ ದೊರಕುತ್ತದೆ. ಪುಸ್ತಕ ಪ್ರೀತಿ, ಗೌರವ ಹೊಂದಿದಾಗ ಪುಸ್ತಕವು ಮಸ್ತಕವನ್ನು ತುಂಬಿಕೊಳ್ಳುತ್ತದೆ.

ಸಾಧನೆ ಮಾಡಲು ವ್ಯಕ್ತಿತ್ವಕ್ಕೆ ಪ್ರೇರಣೆ ಸಿಗುತ್ತದೆ, ಅಯ್ಯನ ಕಥೆಗಳು ಕೃತಿ ಇಂತಹ ಸಣ್ಣ ಸಣ್ಣ ಕಥೆಗಳ ಗುಚ್ಛವಾಗಿದ್ದು ಮಕ್ಕಳ ಆಸಕ್ತಿಗೆ ತಕ್ಕಂತೆ ಹಾಸ್ಯ, ಪರಿಸರ, ಪ್ರಾಣಿ, ದೆವ್ವ, ಹಾಗೂ ನೀತಿ ಬೋಧಕ ಕಥೆಗಳನ್ನು ಹೊಂದಿವೆ, ಮಕ್ಕಳು ಓದಿ ಜ್ಞಾನ ಸಂಪನ್ನರಾಗಬೇಕು ಎಂದು ಕಥೆಗಳ ಮೂಲಕ ಮಕ್ಕಳಿಗೆ ತಿಳಿಹೇಳಿದರು.

ಶಾಲೆಯ ಅಧ್ಯಕ್ಷೆ ಸುನಿತಾ ಅನಿಲ್ ಕುಮಾರ್ ಡಾಂಗೆ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಅನಿಲ್ ಕುಮಾರ್ ಡಾಂಗೆ ಮಾತನಾಡಿ ಮಕ್ಕಳ ಕೈಗೆ ಸ್ವಾತಂತ್ರ್ಯ ಯೋಧರ ಕೃತಿಯ ಹಸ್ತಾಂತರ ಉತ್ತಮ ಕೆಲಸ ಎಂದು ಶ್ಲಾಘಿಸಿದರು. ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಪ್ರಾಸ್ತಾವಿಕವಾಗಿ ಮಾತನಾಡಿ ನಗರದ ಶಾಲೆಗಿಂತಲೂ ಗ್ರಾಮೀಣ ಪ್ರದೇಶದ ಶಾಲೆಗಳಿಗೆ ಈ ಕೃತಿಗಳನ್ನು ಹಸ್ತಾಂತರಿಸಲು ಉದ್ದೇಶಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿ ಈ ವರ್ಷ ಹೋಮಿಯೋಪತಿ ವೈದ್ಯ ಸೀಟು ಪಡೆದ ರುಚಿತಾ ಡಾಂಗೆ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು . ಮುಖ್ಯ ಗುರುಗಳಾದ ಸುನಿತಾ ಪೂಜಾರಿ ಟ್ರಸ್ಟಿ, ಮಹೇಶ್, ಕಡೇಚೂರ್, ಶಿಕ್ಷಕರಾದ ಜಗದೇವಿ ಉಮಾದೇವಿ ಪ್ರಿಯಾಂಕಾ , ಚೆನ್ನಮ್ಮ, ಶಿವಲೀಲಾ, ಐಶ್ವರ್ಯ, ಉಪಸ್ಥಿತರಿದ್ದರು ಆಡಳಿತಾಧಿಕಾರಿ ಸುಚೇತ್ ಡಾಂಗೆ ನಿರೂಪಿಸಿ ಧನ್ಯವಾದ ಸಲ್ಲಿಸಿದರು.




### ಮಕ್ಕಳಿಗೆ ಕಥೆ ಹೇಳುವ ಸ್ಪರ್ಧೆ

ಮಕ್ಕಳಲ್ಲಿ ಕಥೆಗಳ ಹಾಗೂ ಓದಿನ ಮೇಲಿನ ಆಸಕ್ತಿ ಹೆಚ್ಚಿಸಲು ಶಾಲೆಯಲ್ಲಿ ಪ್ರತಿ ಶನಿವಾರ "ಅಯ್ಯನ ಕಥೆಗಳು" ಕೃತಿಯಲ್ಲಿನ ಕಥೆ ಸೇರಿದಂತೆ ಇತರ ಪುಸ್ತಕಗಳ ಕಥೆ ಹೇಳುವ ಸ್ಪರ್ಧೆಯನ್ನು ಹಮ್ಮಿಕೊಂಡು ಉತ್ತಮ ಪ್ರಸ್ತುತಿಗೆ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಸತ್ಕರಿಸುವ ಸಂಪ್ರದಾಯ ಆರಂಭಿಸಲಾಗುವುದು.

– ಸುಚೇತ್ ಡಾಂಗೆ, ಆಡಳಿತಾಧಿಕಾರಿ

# ಅಂಕೋಲಾ: ಬಂಗಾರಪ್ಪ ಜನ್ಮದಿನಾಚರಣೆ

ಅಂಕೋಲಾ : ಬಡವರ ಬಂಧು ಶೋಷಿತ, ದೀನದಲಿತರ ನಾಯಕ ಎಂದೇ ಗುರುತಿಸಿ ಕೊಂಡಿರುವ ಎಸ್. ಬಂಗಾರಪ್ಪ ಅವರ 94 ನೇ ಜನ್ಮ ದಿನದ ನಿಮಿತ್ತ ಪಟ್ಟಣದ ನಾಮಧಾರಿ ಸಭಾಭವನದಲ್ಲಿ ಜನ್ಮದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ನಾಮಧಾರಿ ಗಣೇಶೋತ್ಸವ ಸಮಿತಿಯ ಕಾರ್ಯದರ್ಶಿ ರಾಜೇಶ ಮಿತ್ರಾ ನಾಯ್ಕ ಮಾತನಾಡಿ, ಬಂಗಾರಪ್ಪ ಅವರು ಅಧಿಕಾರದಲ್ಲಿ ಇದ್ದಾಗ ಸಾಕಷ್ಟು ಯೋಜನೆಗಳನ್ನು ಜಾರಿ ಗೊಳಿಸಿದರು. ಅಧಿಕಾರ ಇಲ್ಲದಿದ್ದಾಗ ಯಾರೇ ಬಂದರೂ ಅವರಿಗೆ ನೆರವು ನೀಡುತ್ತಿದ್ದರು. ಇಂತಹ ಅಪರೂಪದ ರಾಜಕಾರಣಿಗಳು ಹೆಚ್ಚಾದರೆ ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು. ನಾಮಧಾರಿ ಅಭಿವೃದ್ಧಿ ಒಕ್ಕೂಟದ ಅಧ್ಯಕ್ಷ ನಾಗೇಶನಾಯ್ಕ ಮಾತನಾಡಿ, ಎಸ್.ಬಂಗಾರಪ್ಪ ಅವರು ಬಡವರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದರು. ಅವರು ಅಧಿಕಾರದಲ್ಲಿದ್ದಾಗ ಅವರು ನೀಡಿದ ಕೊಡುಗೆ ಮಹತ್ವದ್ದಾಗಿದೆ. ಜಾತಿ ಮತ ನೋಡದೇ ಇಂದಿಗೂ ಕೂಡ ಬಂಗಾರಪ್ಪ ಅಭಿಮಾನಿಗಳು ರಾಜ್ಯಾದ್ಯಂತ ಇದ್ದಾರೆ ಎಂದರು.

ಈ ಸಂದರ್ಭದಲ್ಲಿ ಶ್ರೀಧರ ನಾಯ್ಕ, ರಮೇಶ ಎಸ್.ನಾಯ್ಕ, ಗೋವಿಂದ್ರಾಯ ನಾಯ್ಕ, ತೆ ಹಲವರು ಉಪಸ್ಥಿತರಿದ್ದರು.

# ದಸರಾದಲ್ಲಿ ಸಮಸ್ಯೆ: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಜತೆ ಮಾತುಕತೆಗೆ ಸರ್ಕಾರ ಸಿದ್ಧ

## ಜಟ್ಟಿ ಕಾಳಗದ ದಿನ ಗೊಂದಲವಾಗಿರುವುದು ಬಿಟ್ಟರೆ ಎಲ್ಲವೂ ಸುಸೂತ್ರವಾಗಿ ನಡೆದಿದೆ: ಸಚಿವ ಯತೀಂದ್ರ ಪುನರುಚ್ಚಾರ

**ಮೈಸೂರು, ಅ.26:** ಚಿನ್ನದ ಅಂಬಾರಿ ಸಂಪೂರ್ಣವಾಗಿ ಅರಮನೆಯ ಆಸ್ತಿ, ದಸರಾ ಸಂದರ್ಭದಲ್ಲಿ ನಾವು ಹಣಕೊಟ್ಟು ತೆಗೆದುಕೊಳ್ಳುತ್ತೇವೆ. ದಸರಾ ಸಮಯದಲ್ಲಾದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದರೆ, ರಾಜಮಾತೆ ಪ್ರಮೋದಾದೇವಿ ಒಡೆಯರ್ ಜೊತೆ ಮಾತುಕತೆಗೆ ಸರ್ಕಾರ ಸಿದ್ಧವಿದೆ ಎಂದು ಉಸ್ತುವಾರಿ ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಪ್ರಮೋದಾದೇವಿ ಒಡೆಯರ್ ಈ ಬಾರಿಯ ದಸರಾ ಅವ್ಯವಸ್ಥೆ ಹಾಗೂ ಇತರೆ ಸಲಹೆ ಸಹಿತ 4 ಪುಟದ ಮಾಧ್ಯಮ ಪ್ರಕಟಣೆ ನೀಡಿರುವ ಬಗ್ಗೆ ಸಚಿವ ಯತೀಂದ್ರ ಸಿದ್ದರಾಮಯ್ಯ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಮಾಧ್ಯಮಗಳ ಜೊತೆ ಮಾತನಾಡಿ, ನಾವು ಮೊದಲಿನಿಂದಲೂ ಅವರ ಸಂಪರ್ಕದಲ್ಲಿದ್ದೇವೆ. ಅವರಿಗೆ ಅಧಿಕೃತ ಸ್ವಾಗತ ಕೋರಿದ್ದೇವೆ. ಅವರ ಸಹಾಯ ಕೋರಿ ಮನವಿ ಮಾಡಿದ್ದೆವು. ಮೊದಲಿನಿಂದಲೂ ಅವರಿಗೆ ಎಲ್ಲಾ ಸಹಕಾರ ನೀಡಿದ್ದೇವೆ. ವಿಜಯದಶಮಿಯ ದಿನ ಜಟ್ಟಿ ಕಾಳಗದ ದಿನ ಗೊಂದಲ ಆಗಿದೆ. ಅದನ್ನು ಹೊರತುಪಡಿಸಿ ಯಾವುದೇ ತೊಂದರೆ ಆಗಿಲ್ಲ. ಆದರೂ ಅವರು ಪತ್ರ ಬರೆದಿದ್ದಾರೆ. ಈಗ ಸರ್ಕಾರ ಅದಕ್ಕೆ ಉತ್ತರ ಕೊಡಲಿದೆ ಎಂದರು.

ಏಳು ದಿನ ದಸರಾ ಬೇಡ, ಎರಡು ದಿನ ಅರಮನೆ ಮುಕ್ತವಾಗಿಡಿ ಎಂಬ ವಿಚಾರದ ಕುರಿತು ಸರ್ಕಾರದಿಂದ ಅಧಿಕೃತ ಉತ್ತರ ನೀಡಲಾಗುವುದು. ಈ ಕುರಿತು ಏನನ್ನೂ ಹೇಳಲು ಬಯಸುವುದಿಲ್ಲ. ಅವರ ಜೊತೆ ಮಾತನಾಡಲು ಸಿದ್ಧರಿದ್ದೇವೆ. ಅವರು ಕರೆದರೆ ಹೋಗಿ ಮಾತನಾಡುತ್ತೇವೆ. ಪ್ರತಿ ವರ್ಷ ಇಂತಹ ತೊಂದರೆ ಉಂಟಾಗುತ್ತವೆ. ಜನ ಸೇರುವಾಗ ಏನು ಮಾಡಲು ಆಗಲ್ಲ ಎಂದು ಹೇಳಿದರು.



ಪ್ಯಾಲೇಸ್ ಬೋರ್ಡ್ ಸರ್ಕಾರದ್ದು, ಜಾಗ ಸರ್ಕಾರದ್ದು. ರಾಜಮನೆತನಕ್ಕೆ ಏನು ಗೌರವ ಕೊಡಬೇಕೋ, ಅವರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೋ ಎಲ್ಲವನ್ನೂ ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ಈಗಲೂ ಕೂಡ ಮುಂದುವರಿಸಿಕೊಂಡು ಬಂದಿದ್ದೇವೆ. ಸಮಸ್ಯೆಗಳಿದ್ದರೆ ಸರ್ಕಾರಕ್ಕೆ ನೇರವಾಗಿ ಹೇಳಲಿ, ಖಂಡಿತವಾಗಿಯೂ ಅದನ್ನು ಬಗೆಹರಿಸಲು ನಾವು ಸಿದ್ಧರಿದ್ದೇವೆ ಎಂದು ತಿಳಿಸಿದರು.

1971ರಿಂದ ಸರ್ಕಾರ ಅಧಿಕೃತ ದಸರಾ ನಡೆಸುತ್ತಿದೆ. ಸ್ವಾತಂತ್ರ್ಯ ಬಂದ ಮೇಲೆ ನಾಡಹಬ್ಬ ಆಗಿದೆ. ಸರ್ಕಾರ ದಸರಾ ನಡೆಸಲು ಅವಕಾಶ ಮಾಡಿಕೊಡಬೇಕು. ಅದೇ ರೀತಿ ರಾಜಮನೆತನ ದಸರಾ ನಡೆಸಲು ನಾವು ಅವಕಾಶ ಮಾಡಿಕೊಡಬೇಕು. ಅವರು ಧಾರ್ಮಿಕ ಕಾರ್ಯ ನಡೆಸಲು ಸ್ವತಂತ್ರರು, ಖಾಸಗಿ ದಸರಾ ನಡೆಸಲು ಅವಕಾಶವಿದೆ. ಹೀಗಾಗಿ ಸಮನ್ವಯತೆ ಎಂಬುದು ಮುಖ್ಯವಾಗಿದೆ. ಇಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾದರೆ ಸಮಸ್ಯೆ ಬಗೆಹರಿಸಲು ಸರ್ಕಾರ ಸಿದ್ಧ ಎಂದು ತಿಳಿಸಿದರು.

ಪೊಲೀಸ್ ಇಲಾಖೆಯಿಂದ ತೊಂದರೆ ಉಂಟಾಗಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ಜಟ್ಟಿಗಳು–ಪೊಲೀಸರ ನಡುವೆ ಸಮನ್ವಯದ ಕೊರತೆ ಉಂಟಾಗಿದೆ. ಅಂಬಾರಿ ಕಟ್ಟುವ ವಿಚಾರದಲ್ಲಿಯೂ ಬೇರೆಯವರು ಬಂದ ವಿಚಾರ, ಪೊಲೀಸರು ಬಿಡದಿದ್ದರೂ ಒಂದಿಬ್ಬರು ಹೋಗಿರಬಹುದು. ಈ ಸಮಸ್ಯೆಗಳನ್ನು ಕುಳಿತು ಬಗೆಹರಿಸಬಹುದು. ಪೊಲೀಸರಿಂದಾದ ತೊಂದರೆ ಕುರಿತ ಸಲಹೆಗಳನ್ನು ಬಗೆಹರಿಸಲು ನಾವು ಸಿದ್ಧ ಎಂದು ಹೇಳಿದರು.

ಸರ್ಕಾರ 7 ದಿನ ದಸರಾ ಆಚರಿಸುವ ವಿಚಾರ ಕುರಿತು ಮಾತನಾಡಿ, ಅವರು ಹೇಳಿದಂತೆ ಮಾಡಲು ಸಾಧ್ಯವಿಲ್ಲ. ಈ ಕುರಿತು ಸರ್ಕಾರ ಕೂಡ ಒಪ್ಪುವುದಿಲ್ಲ, ಸರ್ಕಾರದ ತೀರ್ಮಾನದಂತೆ ದಸರಾ ಮಹೋತ್ಸವ ನಡೆಯಲಿದೆ. ಅಂತಿಮ ತೀರ್ಮಾನ ಸರ್ಕಾರ ತೆಗೆದುಕೊಳ್ಳಲಿದೆ ಎಂದರು.ಜೆಟ್ಟಿಗಳ ವಿಚಾರದಲ್ಲಿ ಪೊಲೀಸರ ಹಸ್ತಕ್ಷೇಪ ಕುರಿತು ಮಾತನಾಡಿ, ಎಸಿಪಿ, ಡಿಸಿಪಿಗಳ ಹಸ್ತಕ್ಷೇಪಕ್ಕೆ ಪೊಲೀಸರ ವರ್ಶನ್ ಬೇರೆ ಇದೆ. ಪೊಲೀಸ್ ಕಮಿಷನರ್ ಅವರಿಂದ ಮಾಹಿತಿ ಪಡೆದುಕೊಳ್ಳುತ್ತೇವೆ. ಆ ಬಳಿಕ ಸೂಕ್ತ ಉತ್ತರ ಕೊಡುತ್ತೇವೆ ಎಂದು ಹೇಳಿದರು.

# ಯಾವಾಗ ಎಂಬುದು ಮುಖ್ಯವಲ್ಲ: ಟ್ರಂಪ್ ಒಪ್ಪಿಗೆ ನೀಡಿದ 96 ಗಂಟೆಗಳ ಒಳಗೆ ಇರಾನ್ ಮೇಲೆ ದಾಳಿ ಮಾಡಲು ಅಮೆರಿಕ ಸಿದ್ಧ

**ವಾಷಿಂಗ್ಟನ್, ಅ.26:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಆದೇಶ ಬಂದ 96 ಗಂಟೆಗಳ ಒಳಗೆ ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಪಡೆಗಳು ಇರಾನ್ ವಿರುದ್ಧ ಸಂಭಾವ್ಯವಾಗಿ ಪ್ರಮುಖ ಮಿಲಿಟರಿ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ಸಿದ್ಧವಾಗಿವೆ, ದಾಳಿಗಳನ್ನು ನಡೆಸಲು ಈ ಪ್ರದೇಶದಲ್ಲಿ ಸಾಕಷ್ಟು ಮಿಲಿಟರಿ ಸ್ವತ್ತುಗಳನ್ನು ನಿಯೋಜಿಸಲಾಗಿದೆ ಎಂದು ಅಮೆರಿಕದ ಇಬ್ಬರು ಅಧಿಕಾರಿಗಳು ಹೇಳುತ್ತಾರೆ. ಟ್ರಂಪ್ ಅವರ ಅಂತಿಮ ನಿರ್ಧಾರದ ಬಗ್ಗೆ ಅನಿಶ್ಚಿತತೆ ಮತ್ತು ಸಂಘರ್ಷವನ್ನು ಕೊನೆಗೊಳಿಸಲು ನಿರಂತರ ರಾಜತಾಂತ್ರಿಕ ಪ್ರಯತ್ನಗಳ ಹೊರತಾಗಿಯೂ, ವಾಷಿಂಗ್ಟನ್ ಟೆಹ್ರಾನ್ ವಿರುದ್ಧ ದೊಡ್ಡ ಪ್ರಮಾಣದ ಯುದ್ಧ ಕಾರ್ಯಾಚರಣೆಗಳನ್ನು ಪುನರಾರಂಭಿಸಬಹುದು ಎಂಬ ಸೂಚನೆಗಳು ಹೆಚ್ಚುತ್ತಿರುವ ಮಧ್ಯೆ ಈ ಸಿದ್ಧತೆಗಳು ಬಂದಿವೆ. ಸಂಭಾವ್ಯ ಗುರಿಗಳಲ್ಲಿ ಇರಾನಿನ ಇಂಧನ ಮೂಲಸೌಕರ್ಯ, ಮಿಲಿಟರಿ ಸ್ಥಾಪನೆಗಳು ಮತ್ತು ಪರಮಾಣು ಸೌಲಭ್ಯಗಳು ಸೇರಿವೆ. "ಇದು ಒಂದು ದೊಡ್ಡ ಪ್ರಯತ್ನವಾಗಿರುತ್ತದೆ" ಎಂದು ಅಧಿಕಾರಿಗಳಲ್ಲಿ ಒಬ್ಬರು ಸಂಭಾವ್ಯ ಕಾರ್ಯಾಚರಣೆಯ ಪ್ರಮಾಣವನ್ನು ವಿವರಿಸುತ್ತಾರೆ. ಯೋಜಿತ ದಾಳಿಗಳು ಇರಾನಿನ ರಾಡಾರ್‌ಗಳು, ಕ್ಷಿಪಣಿ ಉಡಾವಣಾಕಾರಗಳು ಮತ್ತು ತ್ವರಿತವಾಗಿ ಪುನರ್ನಿರ್ಮಿಸಬಹುದಾದ ಇತರ ಮಿಲಿಟರಿ ಸ್ವತ್ತುಗಳ ಮೇಲಿನ ಸೀಮಿತ ದಾಳಿಗಳನ್ನು ಮೀರಿ ಹೋಗಬಹುದು, ಇವು ಈ ವರ್ಷದ ಆರಂಭದಲ್ಲಿ ಟ್ರಂಪ್ ಪೂರ್ಣಯುದ್ಧ ಕಾರ್ಯಾಚರಣೆಗಳನ್ನು ನಿಲ್ಲಿಸಿದಾಗಿನಿಂದ ಯುಎಸ್ ಕಾರ್ಯಾಚರಣೆಗಳನ್ನು ನಿರೂಪಿಸಿವೆ. ಆಂತರಿಕ ಮಿಲಿಟರಿ ಯೋಜನೆಯೊಂದಿಗೆ ಪರಿಚಿತವಾಗಿರುವ ಹಲವಾರು ಪ್ರಸ್ತುತ ಮತ್ತು ಮಾಜಿ ಯುಎಸ್ ಅಧಿಕಾರಿಗಳು ಟ್ರಂಪ್ ನವೀಕರಿಸಿದ ಮಿಲಿಟರಿ ಕ್ರಮವನ್ನು ಅಧಿಕಾರ ನೀಡುತ್ತಾರೆಯೇ ಎಂಬ ಪ್ರಶ್ನೆ ಹೆಚ್ಚುತ್ತಿದೆ ಎಂದು ನಂಬುತ್ತಾರೆ. ವರ್ಷದ ಅಂತ್ಯದ ಮೊದಲು ಆದೇಶ ಬರಬಹುದು ಎಂದು ಕೆಲವರು ನಂಬುತ್ತಾರೆ, ಆದಾಗ್ಯೂ ನವೆಂಬರ್ 3 ರಂದು ಅಮೆರಿಕದ ಮಧ್ಯಂತರ ಚುನಾವಣೆಗಳ ನಂತರದ ಅವಧಿ ಹೆಚ್ಚು ಸಾಧ್ಯತೆ ಇದೆ ಎಂದು ಪರಿಗಣಿಸಲಾಗಿದೆ. ಯುದ್ಧ ಪುನರಾರಂಭವಾದರೆ ಅಮೆರಿಕ ಮತ್ತು ಇಸ್ರೇಲ್ ಇರಾನಿನ ಪ್ರತೀಕಾರದ ನಿರೀಕ್ಷೆಯನ್ನು ಎದುರಿಸುತ್ತಿರುವುದರಿಂದ ನವೀಕರಿಸಿದ ಸಿದ್ಧತೆಗಳು ಬಂದಿವೆ. ಇತ್ತೀಚಿನ ಅಮೆರಿಕದ ಗುಪ್ತಚರ ಮೌಲ್ಯಮಾಪನಗಳು ಟೆಹ್ರಾನ್ ಮತ್ತು ಯೆಮೆನ್‌ನ ಹೌತಿ ಬಂಡುಕೋರರು ಹೊಸ ದಾಳಿಯ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ ಎಂದು ಸಿಎನ್‌ಎನ್ ಉಲ್ಲೇಖಿಸಿದ ಮೌಲ್ಯಮಾಪನಗಳೊಂದಿಗೆ ಪರಿಚಿತ ಮೂಲಗಳು ತಿಳಿಸಿವೆ. ಇರಾನ್ ಮತ್ತು ಹೌತಿಗಳು ಪ್ರದೇಶದಾದ್ಯಂತ ಅಮೆರಿಕನ್ ಸಿಬ್ಬಂದಿ ಮತ್ತು ಸೌಲಭ್ಯಗಳನ್ನು ಗುರಿಯಾಗಿಸುವ ಮೂಲಕ ತಕ್ಷಣವೇ ಪ್ರತಿಕ್ರಿಯಿಸಬಹುದು, ಮಧ್ಯಪ್ರಾಚ್ಯವನ್ನು ಮೀರಿ ದಾಳಿ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ಇಸ್ರೇಲಿ ಸುದ್ದಿ ಪೋರ್ಟಲ್ ವೈನೆಟ್‌ಗೆ ತಿಳಿಸಿವೆ. ರಾಷ್ಟ್ರೀಯ ಗುಪ್ತಚರ ನಿರ್ದೇಶಕ ಜೇ ಕ್ಲೇಟನ್ ಅವರು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊಗೆ ಅಕ್ಟೋಬರ್ 23 ರಂದು ಬರೆದ ಜ್ಞಾಪಕ ಪತ್ರದಲ್ಲಿ, ಮಧ್ಯಪ್ರಾಚ್ಯ ಮತ್ತು ಇತರ ದೇಶಗಳಲ್ಲಿ ಸಂಚು ಪ್ರಯತ್ನಗಳು ಮುಂದುವರಿದ ಹಂತಗಳನ್ನು ತಲುಪಿದ್ದು, ಇರಾನ್ ಅಮೆರಿಕನ್ ಸಿಬ್ಬಂದಿಯನ್ನು ಗುರಿಯಾಗಿಸುವ ಪ್ರಯತ್ನಗಳನ್ನು ಗಣನೀಯವಾಗಿ ಹೆಚ್ಚಿಸಿದೆ ಎಂದು ಯುಎಸ್ ಗುಪ್ತಚರ ಇಲಾಖೆ ಕಂಡುಹಿಡಿದಿದೆ ಎಂದು ಹೇಳಿದರು.

**ಯುಎಸ್ ಗುಪ್ತಚರ ಅಧಿಕಾರಿಗಳು ಟೆಹ್ರಾನ್ ಮತ್ತು ಹೌತಿಗಳು ಪ್ರಸ್ತುತ ಪೂರ್ವಭಾವಿ ದಾಳಿಗಳನ್ನು ನಡೆಸುವ ಸಾಧ್ಯತೆಯಿಲ್ಲ ಆದರೆ ಅಮೆರಿಕನ್ ಅಥವಾ ಇಸ್ರೇಲಿ ಪಡೆಗಳು ಮೊದಲು ಇರಾನ್ ಮೇಲೆ ದಾಳಿ ಮಾಡಿದರೆ ಪ್ರತೀಕಾರ ತೀರಿಸಿಕೊಳ್ಳುತ್ತಾರೆ ಎಂದು ನಂಬುತ್ತಾರೆ.**



# ಡೆಮೋಕ್ರಾಟ್‌ಗಳು 229 ಹೌಸ್ ಸೀಟ್‌ಗಳನ್ನು ಗೆಲ್ಲುವ ನಿರೀಕ್ಷೆ

**ವಾಷಿಂಗ್ಟನ್, ಅ.26:** ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಯಲ್ಲಿ ಡೆಮೋಕ್ರಾಟ್‌ಗಳು ಯುಎಸ್ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ 229 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿದೆ, ಹಣದುಬ್ಬರ ಮತ್ತು ಆರ್ಥಿಕ ಆತಂಕವು ಮತದಾರರ ಮೇಲೆ ತೂಗುತ್ತಿದೆ, ಯಾವುದೇ ಪಕ್ಷವು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸ್ಪಷ್ಟ ಯೋಜನೆಯನ್ನು ಹೊಂದಿದೆ ಎಂದು ಬಹುಮತವನ್ನು ಮನವರಿಕೆ ಮಾಡದಿದ್ದರೂ ಸಹ, ಸಿಬಿಎಸ್ ನ್ಯೂಸ್ ಸಮೀಕ್ಷೆಯ ಪ್ರಕಾರ. ಈ ಪ್ರಕ್ಷೇಪಣವು ಡೆಮೋಕ್ರಾಟ್‌ಗಳಿಗೆ ಹೌಸ್ ಅನ್ನು ಮರಳಿ ಪಡೆಯಲು ಸಂಭಾವ್ಯ ಮಾರ್ಗವನ್ನು ನೀಡುತ್ತದೆ, ಅವರ ಸ್ಥಾನಗಳ ಸಂಖ್ಯೆ ಬಹುಶಃ 230 ರ ದಶಕವನ್ನು ತಲುಪಬಹುದು. ಆದಾಗ್ಯೂ, ರಿಪಬ್ಲಿಕನ್ನರು ತಮ್ಮ ಬಹುಮತವನ್ನು ಹಿಡಿದಿಟ್ಟುಕೊಳ್ಳುವ ಕಿರಿದಾದ ಮಾರ್ಗವನ್ನು ಉಳಿಸಿಕೊಂಡಿದ್ದಾರೆ. ಇತ್ತೀಚಿನ ವಾರಗಳಲ್ಲಿ ಡೆಮೋಕ್ರಾಟಿಕ್ ಪ್ರಯೋಜನವು ಸ್ಥಿರವಾಗಿದೆ ಆದರೆ ವಿಸ್ತರಿಸಿಲ್ಲ, ಇದು ನಿರ್ಣಾಯಕ ಚುನಾವಣಾ ಅಲೆ ಇನ್ನೂ ಹೊರಹೊಮ್ಮಿಲ್ಲ ಎಂದು ಸೂಚಿಸುತ್ತದೆ. ಸಿಬಿಎಸ್ ನ್ಯೂಸ್/ ಯೂಗೋವ್ ಸಮೀಕ್ಷೆಯು ಅಕ್ಟೋಬರ್ 21 ಮತ್ತು 23 ರ ನಡುವೆ 2,355 ಯುಎಸ್ ವಯಸ್ಕರನ್ನು ಒಳಗೊಂಡಿದೆ. ಒಟ್ಟಾರೆ ಮಾದರಿಗೆ ದೋಷದ ಅಂತರವು 2.6 ಶೇಕಡಾ ಅಂಕಗಳಷ್ಟಿತ್ತು.

**ಡೆಮೋಕ್ರಾಟಿಕ್ vs ರಿಪಬ್ಲಿಕನ್ :**

10 ಡೆಮೋಕ್ರಾಟಿಕ್ ಮತದಾರರಲ್ಲಿ ಏಳಕ್ಕೂ ಹೆಚ್ಚು ಜನರು ತಮ್ಮ ಕಾಂಗ್ರೆಸ್ ಮತವು ಟ್ರಂಪ್ ಅನ್ನು ವಿರೋಧಿಸುವ ಉದ್ದೇಶವನ್ನು ಹೊಂದಿದೆ ಎಂದು ಹೇಳಿದರು. 10 ರಲ್ಲಿ ಸುಮಾರು ನಾಲ್ವರು ಡೆಮಾಕ್ರಟಿಕ್ ಮತದಾರರು ತಮ್ಮ ಪಕ್ಷಕ್ಕೆ ಸ್ಪಷ್ಟ ಯೋಜನೆ ಇದೆ ಎಂದು ನಂಬುವುದಿಲ್ಲ ಎಂದು ಹೇಳಿದರು, ಟ್ರಂಪ್‌ಗೆ ವಿರೋಧವು ಅವರ ಮುಖ್ಯ ಪ್ರೇರಣೆಯಾಗಿದೆ. ರಿಪಬ್ಲಿಕನ್ ಬೆಂಬಲಿಗರು ಅಧ್ಯಕ್ಷರನ್ನು ಬೆಂಬಲಿಸಲು ಮತ ಚಲಾಯಿಸುತ್ತಿದ್ದಾರೆ ಎಂದು ಹೇಳಿದರು, ಆದಾಗ್ಯೂ ಈ ಪ್ರೇರಣೆ ಡೆಮೋಕ್ರಾಟ್‌ಗಳಲ್ಲಿ ಟ್ರಂಪ್ ವಿರೋಧಿ ಭಾವನೆಗಿಂತ ಕಡಿಮೆ ವ್ಯಾಪಕವಾಗಿತ್ತು. ರಿಪಬ್ಲಿಕನ್ನರಲ್ಲಿ, ಸುಮಾರು 10 ರಲ್ಲಿ ನಾಲ್ವರು ತಮ್ಮ ಮತವು ಟ್ರಂಪ್ ಬಗ್ಗೆ ಅಲ್ಲ ಎಂದು ಹೇಳಿದರು. ಅವರು ಒಂಬತ್ತು ರಿಪಬ್ಲಿಕನ್ನರು ಎಂದು ಗುರುತಿಸಿಕೊಳ್ಳುವ ಸಾಧ್ಯತೆ ಕಡಿಮೆ ಮತ್ತು ಅಧ್ಯಕ್ಷರ ಬಲವಾದ ಅನುಮೋದನೆಗಿಂತ ಮಧ್ಯಮವಾಗಿ ವ್ಯಕ್ತಪಡಿಸುವ ಪ್ರವೃತ್ತಿಯನ್ನು ಹೊಂದಿದ್ದರು, ಆದರೆ ಡೆಮಾಕ್ರಟಿಕ್ ಪಕ್ಷವನ್ನು ಪ್ರತಿಕೂಲವಾಗಿ ನೋಡುವುದನ್ನು ಮುಂದುವರೆಸಿದರು.



ರಿಪಬ್ಲಿಕನ್ ಪಕ್ಷದ ಚಿಹ್ನೆ ಆನೆ, ಮತ್ತು ಡೆಮಾಕ್ರಟಿಕ್ ಪಕ್ಷದ ಚಿಹ್ನೆ ಕತ್ತೆ.

# ಭಾರತದಿಂದ ಮೊದಲ ಬಾರಿಗೆ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ಆಯೋಜನೆ

**ನಿಂಗ್ಬೊ (ಚೀನಾ), ಅಕ್ಟೋಬರ್ 26:** ಅಹಮದಾಬಾದ್‌ಗೆ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ 2029 ರ ಆತಿಥ್ಯದ ಹಕ್ಕುಗಳನ್ನು ನೀಡಲಾಗಿದೆ, ಇದು ಜಾಗತಿಕ ಪ್ರದರ್ಶನವನ್ನು ಭಾರತದಲ್ಲಿ ಮೊದಲ ಬಾರಿಗೆ ಆಯೋಜಿಸಲಿದೆ. ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಫೆಡರೇಶನ್ (ಐಡಬ್ಲ್ಯೂಎಫ್) ಭಾನುವಾರ ಇಲ್ಲಿ ನಡೆದ ಕಾರ್ಯಕಾರಿ ಮಂಡಳಿಯ ಸಭೆಯ ನಂತರ ಗುಜರಾತ್ ಅನ್ನು ಆತಿಥೇಯ ಎಂದು ದೃಢಪಡಿಸಿತು. ಸಭೆಯಲ್ಲಿ, ರಷ್ಯಾದ ಮಾಸ್ಕೋ 2030 ರ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗಳನ್ನು ಆಯೋಜಿಸುತ್ತದೆ ಎಂದು ನಿರ್ಧರಿಸಲಾಯಿತು ಎಂದು olympics.com ವರದಿ ಮಾಡಿದೆ. ಏತನ್ಮಧ್ಯೆ, 2028 ರ ವಿಶ್ವ ಯುವ ಚಾಂಪಿಯನ್‌ಶಿಪ್‌ಗಳನ್ನು ಕೊಸೊವೊದ ಪ್ರಿಶ್ಟಿನಾಗೆ ಮತ್ತು 2028 ರ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ಗಳನ್ನು ವೆನೆಜುವೆಲಾದ ಕ್ಯಾರಕಾಸ್‌ಗೆ ನೀಡಲಾಯಿತು.



# ಇಸ್ರೇಲ್ ಚುನಾವಣೆ: 7.3 ದಶಲಕ್ಷ ಮತದಾರರು

## ಅಧಿಕಾರಕ್ಕಾಗಿ ನೆತನ್ಯಾಹು ಹೋರಾಟ, 61 ಸ್ಥಾನಗಳನ್ನು ಗೆಲ್ಲುವ ಕಸರತ್ತು

**ಟೆಲ್ ಅವಿವ್, ಅ.26:** ಇಸ್ರೇಲ್‌ನ ರಾಜಕೀಯ ನಾಯಕತ್ವವನ್ನೇ ಬದಲಾಯಿಸಬಲ್ಲ ಮತ್ತು ದೇಶದ ಭದ್ರತಾ ನೀತಿ ಹಾಗೂ ವಿಶಾಲ ಮಧ್ಯಪ್ರಾಚ್ಯದೊಂದಿಗಿನ ಸಂಬಂಧದ ಮೇಲೆ ಪ್ರಭಾವ ಬೀರಬಲ್ಲ ಚುನಾವಣೆಗೆ, ಏಳು ಮಿಲಿಯನ್‌ಗಿಂತಲೂ ಹೆಚ್ಚು ಇಸ್ರೇಲಿಗಳು ಮತ ಚಲಾಯಿಸಲು ಸಿದ್ಧರಾಗುತ್ತಿದ್ದಾರೆ. ಆದರೆ ಇಲ್ಲಿನ ಅತಿ ದೊಡ್ಡ ಪ್ರಶ್ನೆ ಏನೆಂದರೆ, ಯಾರು ಹೆಚ್ಚು ಮತಗಳನ್ನು ಪಡೆಯುತ್ತಾರೆ ಎಂಬುದು ಮಾತ್ರವಲ್ಲ; ಬದಲಾಗಿ, ಸರ್ಕಾರ ನಡೆಸಲು ಅಗತ್ಯವಿರುವ ಸಂಸದೀಯ ಬಹುಮತವನ್ನು ಯಾರು ಒಗ್ಗೂಡಿಸಬಲ್ಲರು ಎಂಬುದು ಮುಖ್ಯವಾಗಿದೆ.

ಇಸ್ರೇಲ್‌ನ ಕೇಂದ್ರ ಚುನಾವಣಾ ಸಮಿತಿಯು 690 ದಶಲಕ್ಷ ಇಸ್ರೇಲಿ ಹೊಸ ಶೆಕೆಲ್‌ಗಳ ವೆಚ್ಚದಲ್ಲಿ ದೇಶಾದ್ಯಂತ ಚುನಾವಣಾ ಪ್ರಕ್ರಿಯೆಗೆ ಸಿದ್ಧತೆ ನಡೆಸಿದೆ. 'ದಿ ಟೈಮ್ಸ್ ಆಫ್ ಇಸ್ರೇಲ್' ವರದಿಯ ಪ್ರಕಾರ, ಸುಮಾರು 7.3 ದಶಲಕ್ಷ ನಾಗರಿಕರು ಮತ ಚಲಾಯಿಸಲು ಅರ್ಹರಾಗಿದ್ದಾರೆ. ಮತದಾನದ ದಿನದಂದು 12,018 ಮತಗಟ್ಟೆಗಳು, 18,000 ಮತಪೆಟ್ಟಿಗೆಗಳು ಮತ್ತು ಸುಮಾರು 1,00,000 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಕ್ಟೋಬರ್ 27, ಮಂಗಳವಾರದಂದು ಬೆಳಗ್ಗೆ 7 ರಿಂದ ರಾತ್ರಿ 10 ರವರೆಗೆ ಮತದಾನ ನಡೆಯಲಿದೆ.

**ಮಂಗಳವಾರ ಇಸ್ರೇಲ್ ನಿರ್ಣಾಯಕ ಚುನಾವಣೆಯನ್ನು ಎದುರಿಸುತ್ತಿದೆ. ಇದಕ್ಕಾಗಿ 12,018 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 1,00,000 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೆಂಜಮಿನ್ ನೆತನ್ಯಾಹು ಮತ್ತು ಅವರ ಪ್ರತಿಸ್ಪರ್ಧಿಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ.**

# ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಿಗೆ ರಾಜ್ಯಪಾಲೆ ಡಾ. ಸುಧಾ ಯಾದವ್ ಅಭಿನಂದನೆ

**ಬೆಂಗಳೂರು, ಅ.26:** ಕಾಮನ್‌ವೆಲ್ತ್ ಕ್ರೀಡಾಕೂಟ, ಏಷ್ಯನ್ ಕ್ರೀಡಾಕೂಟ ಹಾಗೂ ಪ್ಯಾರಾ ಏಷ್ಯನ್ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆದ್ದು ಭಾರತಕ್ಕೆ ಹಾಗೂ ಕರ್ನಾಟಕಕ್ಕೆ ಹೆಮ್ಮೆ ತಂದಿರುವ ರಾಜ್ಯದ ಕ್ರೀಡಾಪಟುಗಳಿಗೆ ರಾಜ್ಯಪಾಲೆ ಡಾ. ಸುಧಾ ಯಾದವ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಜಪಾನ್‌ನಲ್ಲಿ ನಡೆದ 20ನೇ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕಗಳನ್ನು ಗೆದ್ದ ಕ್ರಿಕೆಟ್ ಆಟಗಾರ್ತಿ ಶ್ರೇಯಾಂಕಾ ಪಾಟೀಲ್, ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ಗೆದ್ದ ಪೂವಮ್ಮ ಎಂ.ಆರ್., ಗಾಲ್ಫ್‌ನಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ಗೆದ್ದ ಪ್ರಣವಿ ಅರಸ್ ಹಾಗೂ ಹಾಕಿಯಲ್ಲಿ ಚಿನ್ನದ ಪದಕ ಗೆದ್ದ ಮೊಹಿತ್ ಎಚ್.ಎಸ್., ಶೂಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದ ತಿಲೋತ್ತಮಾ ಸೇನ್, ಗಾಲ್ಫ್‌ನ ಅದಿತಿ ಅಶೋಕ್, ಬ್ಯಾಡ್ಮಿಂಟನ್‌ನಲ್ಲಿ ಕಂಚಿನ ಪದಕ ಗೆದ್ದ ಆಯುಷ್ ಶೆಟ್ಟಿ ಹಾಗೂ ಅಥ್ಲೆಟಿಕ್ಸ್‌ನ ಸ್ನೇಹಾ ಎಸ್. ಎಸ್. ಅವರ ಸಾಧನೆಯನ್ನು ರಾಜ್ಯಪಾಲರು ಶ್ಲಾಘಿಸಿದ್ದಾರೆ.

ಸ್ಕಾಟ್‌ಲ್ಯಾಂಡ್‌ನಲ್ಲಿ ನಡೆದ 23ನೇ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪ್ಯಾರಾ ಅಥ್ಲೆಟಿಕ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ ಕೆ.ಎಸ್. ಶಿಲ್ಪಾ, ಜಪಾನ್‌ನಲ್ಲಿ ನಡೆದ 5ನೇ ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಪ್ಯಾರಾ ಅಥ್ಲೆಟಿಕ್ಸ್ ಕ್ರೀಡಾಪಟು ಸೌಮ್ಯ, ಬೆಳ್ಳಿ ಪದಕ ಗೆದ್ದ ರಾಧಾ ವೆಂಕಟೇಶ್ ಹಾಗೂ ಕಂಚಿನ ಪದಕ ವಿಜೇತರಾದ ಶರತ್ ಮಕನಹಳ್ಳಿ ಶಂಕರಪ್ಪ (ಪ್ಯಾರಾ ಅಥ್ಲೆಟಿಕ್ಸ್), ಸ್ವಾತಿಕ್ ಪಾಟೀಲ್, ತೇಜಸ್ ನಂದಕುಮಾರ್ ಮತ್ತು ನಿರಂಜನ್ ಮುಕುಂದನ್ (ಪ್ಯಾರಾ ಈಜು), ಪಲ್ಲವಿ ಕಳುವೆಹಳ್ಳಿ ಮಂಜುನಾಥ (ಪ್ಯಾರಾ ಬ್ಯಾಡ್ಮಿಂಟನ್) ಅವರ ಸಾಧನೆಗಳನ್ನು ಡಾ.ಸುಧಾ ಯಾದವ್ ಅಭಿನಂದಿಸಿದ್ದಾರೆ.



ಕ್ರೀಡಾಪಟುಗಳ ಪರಿಶ್ರಮ, ಶಿಸ್ತು, ಸಮರ್ಪಣೆ ಮತ್ತು ಛಲವು ಯುವಜನರಿಗೆ ಸ್ಫೂರ್ತಿಯಾಗಿದೆ. ಅಂತರರಾಷ್ಟ್ರೀಯ ಕ್ರೀಡಾವೇದಿಕೆಯಲ್ಲಿ ತಮ್ಮ ಪ್ರತಿಭೆಯನ್ನು ಮೆರೆದು ಕರ್ನಾಟಕ ಹಾಗೂ ಭಾರತದ ಕೀರ್ತಿಯನ್ನು ಹೆಚ್ಚಿಸಿರುವ ಈ ಕ್ರೀಡಾಪಟುಗಳು ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಸಾಧನೆಗಳನ್ನು ಮಾಡಿ ದೇಶದ ಕ್ರೀಡಾಕ್ಷೇತ್ರಕ್ಕೆ ಮತ್ತಷ್ಟು ಗೌರವ ತಂದುಕೊಡಲಿ ಎಂದು ರಾಜ್ಯಪಾಲೆ ಡಾ. ಸುಧಾ ಯಾದವ್ ಅವರು ಹಾರೈಸಿದ್ದಾರೆ.

# ರಣಜಿ ಟ್ರೋಫಿ: ಐದು ವಿಕೆಟ್ ಕಬಳಿಸಿದ ಶಿಖರ್ ಶೆಟ್ಟಿ, ಕರ್ನಾಟಕಕ್ಕೆ ಮರಳಿದ ಲಯ

**ಮೈಸೂರು, ಅ.26:** ಆಂಧ್ರ ಮತ್ತು ಸೌರಾಷ್ಟ್ರ ವಿರುದ್ಧದ ಮೊದಲ ಎರಡು ಪಂದ್ಯಗಳಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ್ದ ಕರ್ನಾಟಕ ತಂಡ, ಸೋಮವಾರ ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯೂ ಕ್ರಿಕೆಟ್ ಕ್ರೀಂಗಣದಲ್ಲಿ ತ್ರಿಪುರಾ ವಿರುದ್ಧದ ಪಂದ್ಯದಲ್ಲಿ ಲಯ ಕಂಡುಕೊಂಡಿತು. ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ (5/54) ಅಮೋಘ ಬೌಲಿಂಗ್ ಪ್ರದರ್ಶಿಸಿ ತಂಡಕ್ಕೆ ಆಸರೆಯಾದರು. ಇವರೊಂದಿಗೆ ಮನ್ವಂತ್ ಕುಮಾರ್ (3/23) ಕೂಡ ಪರಿಣಾಮಕಾರಿ ಬೌಲಿಂಗ್ ನಡೆಸಿದರು. ಇದರಿಂದಾಗಿ, ತಪ್ಪುಗಳ ಸರಮಾಲೆಯನ್ನೇ ಸೃಷ್ಟಿಸಿದ ತ್ರಿಪುರಾ ತಂಡವು 82 ಓವರ್‌ಗಳಲ್ಲಿ 194 ರನ್‌ಗಳಿಗೆ ಆಲೌಟ್ ಆಯಿತು. ದಿನದ ಅಂತ್ಯಕ್ಕೆ ಕರ್ನಾಟಕ ತಂಡವು 6 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 10 ರನ್ ಗಳಿಸಿದೆ.

**ಕರ್ನಾಟಕ (ಮೊದಲ ಇನ್ನಿಂಗ್ಸ್):**

10/1 (6 ಓವರ್) ದಮ್ ಬಿ ಅಭಿಜಿತ್ 1 (9 ಎಸೆತ); ರೋಹನ್ ಪಾಟೀಲ್ (ಬ್ಯಾಟಿಂಗ್) 9 (22 ಎಸೆತ, 1 ಬೌಂಡರಿ); ವೈಶಾಖ್ ವಿಜಯ್‌ಕುಮಾರ್ (ಬ್ಯಾಟಿಂಗ್) 0 (5 ಎಸೆತ).

**ತ್ರಿಪುರಾ (ಮೊದಲ ಇನ್ನಿಂಗ್ಸ್):**

ತ್ರಿಪುರಾ ಬ್ಯಾಟರ್‌ಗಳು ಆರಂಭದಲ್ಲಿ ಅತ್ಯಂತ ಶಿಸ್ತುಬದ್ಧ ತಂತ್ರಗಾರಿಕೆಯನ್ನು ಪ್ರದರ್ಶಿಸಿ, ಸುಲಭವಾಗಿ ರನ್ ಗಳಿಸುತ್ತಾ ಸಾಗಿದರು. ಎಂಟನೇ ಓವರ್‌ನಲ್ಲಿ ವೈಶಾಖ್ ಅವರ ಎಸೆತವನ್ನು ಪಾಯಿಂಟ್ ದಿಕ್ಕಿನಲ್ಲಿ ಕಟ್ ಮಾಡುವ ಮೂಲಕ ಬಿಕ್ರಮ್‌ಕುಮಾರ್ ದಾಸ್ (51 ರನ್, 80 ಎಸೆತಗಳು) ತ್ರಿಪುರಾ ಪರ ಮೊದಲ ಬೌಂಡರಿ ದಾಖಲಿಸಿದರು. ನಂತರ ಶಿಖರ್ ಶೆಟ್ಟಿ ಅವರು ಪರ್ವೇಜ್ ಸುಲ್ತಾನ್ (2) ಅವರನ್ನು ಔಟ್ ಮಾಡಿದರು. ಬಳಿಕ ಅಭಿಜಿತ್ ಅವರನ್ನು ವಿಕೆಟ್ ಮುಂದೆ ಸಿಲುಕಿಸುವ (ಎಲ್‌ಬಿಡಬ್ಲ್ಯೂ) ಮೂಲಕ ಶಿಖರ್ ತಮ್ಮ ಐದು ವಿಕೆಟ್‌ಗಳ ಸಾಧನೆಯನ್ನು ಪೂರ್ಣಗೊಳಿಸಿದರು. ತ್ರಿಪುರಾ ತಂಡವು 82 ಓವರ್‌ಗಳಲ್ಲಿ 194 ರನ್‌ಗಳಿಗೆ ಆಲೌಟ್ ಆಯಿತು.



# ಏಷ್ಯನ್ ಗೇಮ್ಸ್ ಪದಕ ವಿಜೇತ ಕೆಐಐಟಿ, ಕಿಸ್ ಸಾಧಕರಿಗೆ ಸನ್ಮಾನ

## ಒಟ್ಟು ರೂ.2.5 ಕೋಟಿ ಮೊತ್ತದ ಬಹುಮಾನ ವಿತರಣೆ

**ಭುವನೇಶ್ವರ, ಅಕ್ಟೋಬರ್ 26:** ಜಪಾನ್ನ ಐಚಿ– ನಗೋಯಾದಲ್ಲಿ ನಡೆದ 20 ನೇ ಏಷ್ಯನ್ ಗೇಮ್ಸ್ ನ ವಿವಿಧ ಕ್ರೀಡೆಗಳಲ್ಲಿ ಪದಕ ಪಡೆದ ಇಲ್ಲಿನ ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಮತ್ತು ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ (ಕಿಸ್) ನ ಕ್ರೀಡಾಪಟುಗಳನ್ನು ಸಂಸ್ಥೆಯ ಆವರಣದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸಂಸ್ಥೆಯ ಕ್ರೀಡಾಪಟುಗಳು ಒಟ್ಟು 21 ಪದಕಗಳನ್ನು ಪಡೆದಿದ್ದು, ಇದರಲ್ಲಿ 3 ಚಿನ್ನ, 7 ಬೆಳ್ಳಿ ಮತ್ತು 11 ಕಂಚಿನ ಪದಕಗಳು ಸೇರಿವೆ. ಒಟ್ಟು 57 ಕ್ರೀಡಾಪಟುಗಳು ಏಷ್ಯನ್ ಗೇಮ್ಸ್ನಲ್ಲಿ ಭಾಗವಹಿಸಿದ್ದರು. ಇವರೊಂದಿಗೆ ಗ್ಲಾಸ್ಗೋದಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ 5 ಪದಕಗಳನ್ನು ಗೆದ್ದ ಕ್ರೀಡಾಪಟುಗಳನ್ನೂ ಸಮಾರಂಭದಲ್ಲಿ ಗೌರವಿಸಲಾಯಿತು. ಒಟ್ಟು 14 ಕೆಐಐಟಿ ವಿದ್ಯಾರ್ಥಿಗಳು ಗ್ಲಾಸ್ಗೋದಲ್ಲಿ ದೇಶವನ್ನು ಪ್ರತಿನಿಧಿಸಿದ್ದರು.

**ಒಂದು ಕೋಟಿ ಬಹುಮಾನ ಘೋಷಣೆ**

**ಏಷ್ಯನ್ ಗೇಮ್ಸ್ ಪದಕ ವಿಜೇತರ ಅಭಿನಂದನಾ ಸಮಾರಂಭದಲ್ಲಿ ಪ್ರೊ.ಅಚ್ಯುತ ಸಮಂತ ಅವರು, ಒಂದು ಮಹತ್ವದ ಘೋಷಣೆಯನ್ನೂ ಮಾಡಿದರು. 2028 ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಂಪಿಕ್ಸ್ ಗೇಮ್ಸ್‌ನಲ್ಲಿ ಭಾಗವಹಿಸಿ ಚಿನ್ನದ ಪದಕ ಗೆಲ್ಲುವ ಸಂಸ್ಥೆಯ ಕ್ರೀಡಾಪಟುವಿಗೆ ರೂ.1 ಕೋಟಿ ಬಹುಮಾನ ನೀಡುವುದಾಗಿ ಪ್ರಕಟಿಸಿದರು.**

**ಕ್ರೀಡಾ ಸಾಧನೆ ಮಾಡುವವರಿಗೆ ಸ್ಫೂರ್ತಿ**

ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಒಂದೇ ವಿಶ್ವವಿದ್ಯಾಲಯ ಇಂತಹ ಅಸಾಧಾರಣ ಸಾಧನೆ ಮಾಡಿರುವುದು ವಿಶೇಷವಾಗಿದೆ. ದೇಶದ ಕ್ರೀಡಾ ಕ್ಷೇತ್ರಕ್ಕೆ ಕೆಐಐಟಿ ಹಾಗೂ ಕಿಸ್ ನೀಡುತ್ತಿರುವ ಕೊಡುಗೆಯನ್ನು ಪ್ರಶಂಸಿಸಲಾಗುತ್ತಿದೆ. ವಿಶ್ವಮಟ್ಟದ ಕ್ರೀಡಾ ಪ್ರತಿಭೆಗಳನ್ನು ಪೋಷಿಸುವ ಸಂಸ್ಥೆಯ ಬದ್ಧತೆ ಎಂತಹುದು ಇದರಿಂದ ತಿಳಿಯಲಿದೆ. ಪದಕ ಗೆದ್ದ ಚಾಂಪಿಯನ್‌ಗಳು ದೇಶಕ್ಕೆ ಕೀರ್ತಿ ತಂದಿರುವುದಲ್ಲದೆ, ಕ್ರೀಡೆಯಲ್ಲಿ ಸಾಧನೆ ಮಾಡುವ ದೊಡ್ಡ ಕನಸು ಕಾಣಲು ಸ್ಫೂರ್ತಿಯನ್ನೂ ನೀಡಿದ್ದಾರೆ.

**ಸಾಧನೆಯ ಛಲ ಹುಟ್ಟಿಸುವ ವಾತಾವರಣ**

ಸಮಂತ ಅವರು ಸಮಾನವಾದ ದೃಢ ನಂಬಿಕೆಯಿಂದ ತರಗತಿ ಕೊಠಡಿ ಮತ್ತು ಆಟದ ಮೈದಾನಗಳನ್ನು ನಿರ್ಮಿಸಿದ್ದಾರೆ. ಇಲ್ಲಿನ ವಿದ್ಯಾರ್ಥಿ ಇವೆರಡರ ನಡುವೆ ಯಾವುದಾದರೊಂದನ್ನು ಆರಿಸಿಕೊಳ್ಳಲೇಬೇಕೆಂಬ ಒತ್ತಾಯವನ್ನೂ ಅವರು ಮಾಡುವುದಿಲ್ಲ. ಇಲ್ಲಿನ ವಾತಾವರಣವೇ ಕ್ರೀಡಾಪಟುಗಳಲ್ಲಿ ಸಾಧಿಸಬೇಕೆಂಬ ಛಲವನ್ನು ಹುಟ್ಟಿಸುತ್ತದೆ. ಆಗ ಅದಕ್ಕೆ ಸರಿಯಾದ ಪ್ರೋತ್ಸಾಹ ಸಿಕ್ಕರೆ ಅವರ ಪದಕದ ಹಾದಿಯೂ ಸುಗಮವಾಗುತ್ತದೆ. ಅದಕ್ಕೆಂದೇ ಕ್ರೀಡಾಪಟುಗಳಿಗೆ ಉಚಿತ ತರಬೇತಿ, ಮುಕ್ತ ಆಯ್ಕೆ ಪ್ರಕ್ರಿಯೆ ಮತ್ತು ವಿಶ್ವದರ್ಜೆಯ ಸೌಲಭ್ಯಗಳನ್ನು ಒದಗಿಸಿದ್ದಾರೆ.

**ಅಚ್ಯುತ ಸಮಂತ ಅವರ ದೂರದೃಷ್ಟಿ**

ಸಂಸ್ಥೆಯ ಕ್ರೀಡಾಪಟುಗಳ ಈ ಸಾಧನೆಯ ಹಿಂದೆ ಸಂಸ್ಥಾಪಕರಾದ ಅಚ್ಯುತ ಸಮಂತ ಅವರ ದೂರದೃಷ್ಟಿ ಹಾಗೂ ಬದ್ಧತೆಯೂ ಮಹತ್ವದಾಗಿದೆ.

ಅವರ ದೃಢವಾದ ಪ್ರೋತ್ಸಾಹ ಮತ್ತು ಸಮರ್ಪಣಾ ಭಾವವು ಶಿಕ್ಷಣದಂತೆ ಕ್ರೀಡೆಯಲ್ಲೂ ಮೇಲ್ಪಂಕ್ತಿ ಪಡೆಯಲು ಕಾರಣವಾಗಿದೆ. ಎರಡೂ ಸಂಸ್ಥೆಗಳಲ್ಲಿ ಕೇವಲ ಶಿಕ್ಷಣವಷ್ಟೇ ಅಲ್ಲ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸುವ, ಪೋಷಿಸುವ ಕನಸುಗಳಿಗೆ ಬಲ ನೀಡಲಾಗುತ್ತದೆ. ಭವಿಷ್ಯದ ಚಾಂಪಿಯನ್‌ಗಳು ಇಲ್ಲಿ ರೂಪುಗೊಳ್ಳುತ್ತಾರೆ. ಕ್ರೀಡಾಂಗಣದಲ್ಲಿ ಅವರು ಬೆವರು ಹರಿಸುತ್ತಾರೆ ಕೊನೆಗೆ ಪದಕಗಳನ್ನು ಕೊರಳಿಗೇರಿಸಿಕೊಳ್ಳುತ್ತಾರೆ.

ಸಮಾರಂಭದಲ್ಲಿ ಮಾತನಾಡಿದ ಅಚ್ಯುತ ಸಮಂತ ಅವರು, ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ಪಡೆಯಲು ಪ್ರಧಾನಿ ಮೋದಿ ಹಾಗೂ ಕ್ರೀಡಾ ಸಚಿವರು ಸಾಕಷ್ಟು ಬೆಂಬಲ ನೀಡಿದ್ದಾರೆ. ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಇಷ್ಟೊಂದು ಪದಕ ಪಡೆದಿರುವುದು ಹೆಮ್ಮೆ ತಂದಿದೆ. ಒಡಿಶಾ ಸರ್ಕಾರವೂ ನಮಗೆ ಪ್ರೋತ್ಸಾಹ ನೀಡಿದೆ.

ಕ್ರೀಡಾಪಟುಗಳ ಉತ್ಸಾಹ ಕಂಡು ಖುಷಿಯಾಗಿದೆ ಎಂದು ಹೇಳಿದರು.

ಕ್ರೀಡಾಪಟುಗಳ ಅಭಿನಂದನಾ ಸಮಾರಂಭದಲ್ಲಿ ಕೆಐಐಟಿ ಉಪಕುಲಪತಿ ಪ್ರೊ. ಶರಣಜಿತ್ ಸಿಂಗ್, ರಿಜಿಸ್ಟ್ರಾರ್ ಜೆ. ರಂಜನ್ ಮೊಹಂತಿ, ಕ್ರೀಡೆ ಮತ್ತು ಯೋಗ ವಿಜ್ಞಾನಗಳ ಶಾಲೆ ಮಹಾನಿರ್ದೇಶಕ ಗಗನೆಂದು ಡ್ಯಾಶ್, ಕೆಐಐಟಿಯ ಹಳೆ ವಿದ್ಯಾರ್ಥಿನಿ ಹಾಗೂ ಖ್ಯಾತ ಅಥ್ಲೀಟ್ ದ್ಯುತಿ ಚಾಂದ್, ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.









**ಸಾಧನೆ ಸಂಭ್ರಮಿಸೋಣ**

ನಮ್ಮ ವಿದ್ಯಾರ್ಥಿಗಳನ್ನು ಜೀವನದ ಪ್ರತಿಯೊಂದು ಹಂತದಲ್ಲಿ ಅತ್ಯುತ್ತಮ ಸಾಧನೆ ಮಾಡಲು ಮತ್ತು ರಾಷ್ಟ್ರಕ್ಕೆ ಹೆಮ್ಮೆ ತರಲು ನಾವು ಪ್ರೇರಿಪಿಸುತ್ತೇವೆ. 71 ಕ್ರೀಡಾಪಟುಗಳು ಮತ್ತು ಅವರು ಗೆದ್ದ 26 ಪದಕಗಳು ಈ ಮನೋಭಾವಕ್ಕೆ ಸಾಕ್ಷಿಯಾಗಿ ನಿಂತಿವೆ. ನಾವೆಲ್ಲರೂ ಒಟ್ಟಾಗಿ ಅವಕಾಶಗಳನ್ನು ಸೃಷ್ಟಿಸೋಣ, ಸಾಧನೆಗಳನ್ನು ಸಂಭ್ರಮಿಸೋಣ ಹಾಗೂ ಮಿತಿಗಳಿಲ್ಲದ ಕನಸು ಕಾಣಲು ಮುಂದಿನ ಪೀಳಿಗೆಗೆ ಸ್ಫೂರ್ತಿಯನ್ನು ನೀಡೋಣ **– ಡಾ. ಅಚ್ಯುತ ಸಮಂತ, ಸಂಸ್ಥಾಪಕರು.**